ಬುಧವಾರ, ಅಕ್ಟೋಬರ್ 20, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇವಿ ಮೂರ್ತಿ

ಕೋಲ್ಕತ್ತದಲ್ಲಿ ಲಕ್ಷ್ಮಿ ಪೂಜೆಗಾಗಿ ಮಹಿಳೆಯೊಬ್ಬರು ಮಂಗಳವಾರ ಮಳೆಯ ನಡುವೆಯೇ ದೇವಿಯ ಮೂರ್ತಿಯನ್ನು ಪ್ಲಾಸ್ಟಿಕ್ ಹೊದಿಕೆ ಹೊದಿಸಿ ಕೊಂಡೊಯ್ದರು



ಬುಧವಾರ, ಅಕ್ಟೋಬರ್ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 291 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್ ಕೇವಲ ನಮ್ಮನ್ನಷ್ಟೇ ಅಲ್ಲ; ನಮ್ಮ ಅಡುಗೆಮನೆಯನ್ನೂ ಸ್ಮಾರ್ಟ್ ಆಗಿರಿಸಿದ್ದು ಸುಳ್ಳಲ್ಲ.



ಶ್ರೀನಾಥ್, ಹರಭಜನ್‌ಗೆ ಎಂಸಿಸಿ ಆಜೀವ ಸದಸ್ಯತ್ವ 11
ಸಂಖ್ಯೆ-ಸುದ್ದಿ
ಕುಂಟುತ್ತಿದೆ ಭಾರತ್‌ನೆಟ್
ಉತ್ತರಾಖಂಡದಲ್ಲಿ ಮಳೆ ಅಬ್ಬರ: 42 ಮಂದಿ ಸಾವು 5

ಸೆನ್ಸೆಕ್ಸ್	ನಿಫ್ಟಿ
61,716	18,418

ಹೆಚ್ಚಿದ ಮತೀಯ ಗೂಂಡಾಗಿರಿ

ಬೆಳಗಾವಿ: ಹಿಂದೂ ಯುವಕನಿಗೆ ಥಳಿತ, ಮುಸ್ಲಿಂ ಯುವತಿಯರಿಗೆ ಬೆದರಿಕೆ, ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಲವು ದಿನಗಳಿಂದೀಚೆ ಜಿಲ್ಲೆಯಲ್ಲಿ ಮತೀಯ ಗೂಂಡಾಗಿರಿ ಪ್ರಕರಣಗಳು ಹೆಚ್ಚುತ್ತಿವೆ. ಕೇಂದ್ರ ಬಸ್ ನಿಲ್ದಾಣದಲ್ಲಿ ಮುಸ್ಲಿಂ ಯುವತಿಯರಿಬ್ಬರೊಂದಿಗೆ ಮಾತನಾಡುತ್ತಾ ನಿಂತಿದ್ದ ಹಿಂದೂ ಯುವಕನ ಮೇಲೆ ಆಟೊ ಚಾಲಕರು ಸೇರಿದಂತೆ ಕೆಲವರು ಹಲ್ಲೆ ನಡೆಸಿದ್ದು, ನವರಾತ್ರಿ ಆಚರಣೆ ಸಂದರ್ಭದಲ್ಲಿ ಕೋಳಿ ಮಾಂಸ ಮಾರುತ್ತಿದ್ದರೆಂದು ಮುಸ್ಲಿಂ ವ್ಯಾಪಾರಿಯ ಮೇಲೆ ಯುವಕರು ದಾಳಿ ಮಾಡಿ, ಮತೀಯ ಗೂಂಡಾಗಿರಿ ಪ್ರದರ್ಶಿಸಿದ್ದಾರೆ.

ಈ ಪ್ರಕರಣಗಳ ಕುರಿತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಮಂಗಳವಾರ ವೈರಲ್ ಆಗಿವೆ. ಹಿಂದೂ ಯುವತಿಯನ್ನು ಪ್ರೀತಿಸಿದ ಕಾರಣಕ್ಕೆ ಈಚೆಗೆ ಖಾನಾಪುರದಲ್ಲಿ ನಡೆದ ಕೊಲೆ ಪ್ರಕರಣ ಮನಸ್ಸಿನಿಂದ ಮರೆಯಾಗುವ ಮುನ್ನವೇ ಈ ವಿಡಿಯೊಗಳು ಬಹಿರಂಗವಾಗಿವೆ.

ಮುಸ್ಲಿಂ ವ್ಯಕ್ತಿಯ ಅಂಗಡಿ ಮೇಲೆ ದಾಳಿ

ಬೆಳಗಾವಿ ಹೊರವಲಯದ ಯಮನಾಪುರ ಗ್ರಾಮದಲ್ಲಿ ಮುಸ್ಲಿಂ ವ್ಯಕ್ತಿಗೆ ಸೇರಿದ ಕೋಳಿಮಾಂಸದ ಅಂಗಡಿ ಮೇಲೆ ಹಿಂದೂ ಯುವಕರ ಗುಂಪೊಂದು ದಾಳಿ ಮಾಡಿ, ಮಾಲೀಕರ ಮೇಲೆ ಹಲ್ಲೆ ನಡೆಸಿದೆ.

‘ಅಲ್ಲಿನ ಭರಮದೇವರ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ, ಸಮೀಪದಲ್ಲಿ ಕೋಳಿಮಾಂಸದ ಅಂಗಡಿ ತೆರೆದಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೆಲವರು ಗಲಾಟೆ ಶುರು ಮಾಡಿ ಮತೀಯ ಗೂಂಡಾಗಿರಿ ಪ್ರದರ್ಶಿಸಿದರು’ ಎಂದು ಆರೋಪಿಸಲಾಗಿದೆ.

‘ಅದೇ ಸಮಯದಲ್ಲಿ ಮರಾಠರಿಗೆ ಸೇರಿದ ಮೂರು ಮಾಂಸದ ಅಂಗಡಿಗಳು ತೆರೆದಿದ್ದವು. ಆದರೆ, ದುಷ್ಕರ್ಮಿಗಳು ಮುಸ್ಲಿಂ ವ್ಯಕ್ತಿಯ ಅಂಗಡಿಯನ್ನಷ್ಟೆ ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದಾರೆ. ಮಾಳಮಾರುತಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳದೆ ಹಲ್ಲೆ ನಡೆಸಿದ ಯುವಕರನ್ನು ಕರೆಸಿ ರಾಜಿ ಮಾಡಿಸಿದ್ದಾರೆ’ ಎಂದು ದೂರಲಾಗಿದೆ.

ಜಿಲ್ಲೆಯ ಖಾನಾಪುರ ಲೋಂಡಾದವರು ಎನ್ನಲಾದ ಆ ಯುವತಿಯರಿಗೆ ಬಲವಂತವಾಗಿ ಬುರ್ಕಾ ತೆಗೆಸಿ, ವಿಡಿಯೊ ಮಾಡಿ ಬೆದರಿಕೆ ಒಡ್ಡಿದ್ದಾರೆ. ‘ಹಿಂದೂ ಯುವಕನಾಗಿ ಮುಸ್ಲಿಂ ಯುವತಿಯರ ಜೊತೆ ಏನು ವ್ಯವಹಾರ?’ ಎಂದು ಪ್ರಶ್ನಿಸಿ, ಯುವಕನನ್ನು ಥಳಿಸಿರುವ ದೃಶ್ಯಗಳು ವಿಡಿಯೊದಲ್ಲಿವೆ.

‘ಫೋಟೊ ತೆಗೆಯಬೇಡಿ ಹಾಗೂ ವಿಡಿಯೊಗಳನ್ನು ಮಾಡಬೇಡಿ’ ಎಂದು ಯುವತಿಯರು ಕೋರಿದರೂ ಅವಮಾನಿಸಿರುವ ದೃಶ್ಯಗಳು ವಿಡಿಯೊದಲ್ಲಿವೆ. ಈ ಬಗ್ಗೆ ದೂರು ನೀಡಲು ಯುವಕ ಹಾಗೂ ಯುವತಿಯರು ಹಿಂದೇಟು ಹಾಕಿದ್ದಾರೆ ಎನ್ನಲಾಗುತ್ತಿದೆ. ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ.

> **ಇಂತಹ ಪ್ರಕರಣಗಳನ್ನು ಸಹಿಸುವುದಿಲ್ಲ. ಹಿಂದೆ ನಡೆದ ಇಂತಹ ಎಲ್ಲ ಘಟನೆಗಳಲ್ಲೂ ಯಾವ ಧರ್ಮದವರು ಎಂದು ನೋಡದೆ ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದಾರೆ**
> **ಆರಗ ಜ್ಞಾನೇಂದ್ರ**
> ಗೃಹ ಸಚಿವ

> **ಅಂಗಡಿಯಾತನ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರೂ ದೂರು ಕೊಟ್ಟಿಲ್ಲವಾದ್ದರಿಂದ ಪ್ರಕರಣ ದಾಖಲಾಗಿಲ್ಲ**
> **ವಿಕ್ರಂ ಅಮಟೆ**
> ಡಿಸಿಪಿ, ಬೆಳಗಾವಿ

ಹಲ್ಲೆ ಪ್ರಕರಣ–ಮತ್ತಿಬ್ಬರ ಬಂಧನ: ಮುಸ್ಲಿಂ ಮಹಿಳೆ ಜೊತೆ ಓಡಾಡುತ್ತಿದ್ದ ಕಾರಣಕ್ಕೆ ಹಿಂದೂ ಯುವಕನ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಮಾಳಮಾರುತಿ ಠಾಣೆ ಪೊಲೀಸರು ಮತ್ತಿಬ್ಬರನ್ನು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ ಮೂರಕ್ಕೇರಿದೆ.

ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದ ಮಹಿಳೆ ನಗರದ ಮಾಳಮಾರುತಿ ಠಾಣೆಗೆ ಅ.14ರಂದು ದೂರು ನೀಡಿದ್ದರು. 25 ಮಂದಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಾಗಿದ್ದು, ಪ್ರಮುಖ ಆರೋಪಿ ಆಟೊ ಚಾಲಕ ದಾವತ್ ಕತೀಬ್ ಎನ್ನುವವರನ್ನು ಭಾನುವಾರ ಬಂಧಿಸಲಾಗಿತ್ತು. ಅಯೂಬ್ ಮತ್ತು ಯೂಸುಫ್ ಪಠಾಣ ಎನ್ನುವವರನ್ನು ಪೊಲೀಸರು ಸೋಮವಾರ ತಡರಾತ್ರಿ ಬಂಧಿಸಿದ್ದಾರೆ. ಉಳಿದವರ ಪತ್ತೆಗೆ ಕಾರ್ಯಾಚರಣೆ ಮುಂದುವರಿದಿದೆ. ಆರೋಪಿಗಳಲ್ಲಿ ಬಹುತೇಕರು ಆಟೊ ಚಾಲಕರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗಡಿ ಆಚೆಗೆ ಭಾರಿ ಪ್ರಮಾಣದಲ್ಲಿ ಚೇನಾ ಸೇನೆ

ಅರುಣಾಚಲ: ಗಡಿಯಲ್ಲಿ ಗಡಿಬಿಡಿ

ರೂಪಾ (ಅರುಣಾಚಲ ಪ್ರದೇಶ, ಪಿಟಿಐ): ಅರುಣಾಚಲ ಪ್ರದೇಶ ವಲಯದ ಎದುರು ಭಾಗದಲ್ಲಿ ತನ್ನ ಭೂಪ್ರದೇಶದ ಒಳಗೆ ಚೀನಾ ದೇಶವು ಸೇನಾ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ ಮತ್ತು ಭಾರಿ ಸಂಖ್ಯೆಯಲ್ಲಿ ಸೈನಿಕರನ್ನು ಜಮಾಯಿಸಿದೆ ಎಂದು ಪೂರ್ವ ವಿಭಾಗದ ಸೇನಾ ಕಮಾಂಡರ್ ಲೆ. ಜ. ಮನೋಜ್ ಪಾಂಡೆ ಮಂಗಳವಾರ ಹೇಳಿದ್ದಾರೆ.


ಮನೋಜ್ ಪಾಂಡೆ

ಅದಕ್ಕೆ ತಕ್ಕುದಾದ ರೀತಿಯಲ್ಲಿ, ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗುವಂತಹ ಸನ್ನದ್ಧತೆಯನ್ನು ಭಾರತೀಯ ಸೇನೆಯು ಕೈಗೊಂಡಿದೆ. ಭಾರತದ ಸನ್ನದ್ಧತೆಯು ಅತ್ಯುತ್ತಮ ಮಟ್ಟದ್ದಾಗಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ನೈಜ ನಿಯಂತ್ರಣ ರೇಖೆಯ (ಎಲ್‌ಎಸಿ) ಸಮೀಪದಲ್ಲಿ ಮೂಲಸೌಕರ್ಯವನ್ನು ಹೆಚ್ಚಿಸಲು ಎರಡೂ ದೇಶಗಳು ಪ್ರಯತ್ನಿಸುತ್ತಿವೆ. ಇದು ಒಮ್ಮೊಮ್ಮೆ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಎಲ್‌ಎಸಿ ಸಮೀಪದಲ್ಲಿ ಮೂಲಸೌಕರ್ಯ ನಿರ್ಮಾಣ ಕಾಮಗಾರಿ ಹೆಚ್ಚಿರುವುದರಿಂದ ಸೈನಿಕರ ನಿಯೋಜನೆಯಲ್ಲಿಯೂ ಹೆಚ್ಚಳ ಆಗಿದೆ ಎಂದು ಈ ಪ್ರದೇಶಕ್ಕೆ ಭೇಟಿ ಕೊಟ್ಟ ಮಾಧ್ಯಮ ಪ್ರತಿನಿಧಿಗಳಿಗೆ ಪಾಂಡೆ ತಿಳಿಸಿದರು.

8ನೇ ಪುಟ ನೋಡಿ

ದೀಪಾವಳಿಗೆ ಉರ್ದು ಶುಭಾಶಯ ಫ್ಯಾಬ್ ಇಂಡಿಯಾ ಬಹಿಷ್ಕಾರಕ್ಕೆ ಕರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಂಪರಾಗತ ದಿರಿಸುಗಳ ಮಳಿಗೆ ಫ್ಯಾಬ್ ಇಂಡಿಯಾದ ದೀಪಾವಳಿ ದಿರಿಸು ಸಂಗ್ರಹದ ಜಾಹೀರಾತೊಂದು ವಿವಾದಕ್ಕೆ ಕಾರಣವಾಗಿದೆ. ದೀಪಾವಳಿಗಾಗಿ ‘ಜಶ್ನ್‌–ಎ–ರಿವಾಜ್’ ಎಂಬ ಹೆಸರಿನ ಸಂಗ್ರಹವು ಕಾದಿದೆ ಎಂಬ ಅರ್ಥದ ಜಾಹೀರಾತಿಗೆ ಕೆಲವರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಜಶ್ನ್–ಎ–ರಿವಾಜ್ ಎಂಬುದು ಉರ್ದು ಭಾಷೆಯಲ್ಲಿನ ಶುಭಾಶಯ. ಹಿಂದೂಗಳ ಹಬ್ಬಕ್ಕೆ ಸಂಬಂಧಿಸಿದ ಶುಭಾಶಯವನ್ನು ಉರ್ದುವಿನಲ್ಲಿ ಮಾಡಿದ್ದಕ್ಕೆ ಬಿಜೆಪಿ ಸಂಸದರು, ನಾಯಕರು ಮತ್ತು ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಜಶ್ನ್ ಎ ರಿವಾಜ್ ಎಂಬುದು ದೀಪಾವಳಿಯಲ್ಲ. ಇದು ಹಿಂದೂಗಳ ಹಬ್ಬವನ್ನು ಅಬ್ರಾಹ್ಮಣೀಕರಣಗೊಳಿಸುವ ಉದ್ದೇಶಕಪೂರ್ವಕ ಯತ್ನ’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಟ್ವೀಟ್ ಮಾಡಿದ್ದರು. ಬಿಜೆಪಿಯ ಹಲವು ಕಾರ್ಯಕರ್ತರು ಈ ಟ್ವೀಟ್ ಅನ್ನು ಹಂಚಿಕೊಂಡಿದ್ದಾರೆ. ಫ್ಯಾಬ್ ಇಂಡಿಯಾ ಉತ್ಪನ್ನಗಳನ್ನು ಬಹಿಷ್ಕರಿಸಿ ಎಂದು ಕರೆ ನೀಡಿದ್ದಾರೆ.

‘ಫ್ಯಾಬ್ ಇಂಡಿಯಾ ಜಾತ್ಯತೀತವಾದ ಕಂಪನಿಯಾಗಿದ್ದರೆ, ನಾವು ಬೇರೆ ಅಂಗಡಿ ನೋಡಿಕೊಳ್ಳುತ್ತೇವೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಟ್ವೀಟ್ ಮಾಡಿದ್ದಾರೆ.

ಪರಿಣಾಮವಾಗಿ, ಟ್ವಿಟರ್‌ನಲ್ಲಿ ಪ್ರಕಟವಾದ ಜಾಹೀರಾತು ಮತ್ತು ಜಶ್ನ್‌–ಎ–ರಿವಾಜ್ ಸಂಗ್ರಹದ ಕುರಿತು ಫ್ಯಾಷನ್ ನಿಯತಕಾಲಿಕವೊಂದರಲ್ಲಿ ಪ್ರಕಟವಾಗಿದ್ದ ಬರಹವನ್ನು ಸಂಸ್ಥೆ ಹಿಂದಕ್ಕೆ ಪಡೆದಿದೆ.

---

11 ಸಾಧಕರಿಗೆ ವಾಲ್ಮೀಕಿ ಪ್ರಶಸ್ತಿ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ನೀಡುವ ‘ಶ್ರೀಮಹರ್ಷಿ ವಾಲ್ಮೀಕಿ ಪ್ರಶಸ್ತಿ’ಗೆ 2020 ರ ಸಾಲಿಗೆ ಐದು ಸಾಧಕರು ಮತ್ತು 2021 ನೇ ಸಾಲಿಗೆ ಆರು ಸಾಧಕರು ಸೇರಿ ಒಟ್ಟು 11 ಜನರಿಗೆ ಪ್ರಶಸ್ತಿ ಪ್ರಕಟಿಸಲಾಗಿದೆ. ಪರಿಶಿಷ್ಟ ಕಲ್ಯಾಣ ಮತ್ತು ಸಾರಿಗೆ ಸಚಿವ ಬಿ.ಶ್ರೀರಾಮುಲು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. 4

‘ಡ್ರಗ್ ಪೆಡ್ಲರ್ ರಾಷ್ಟ್ರ ಮುನ್ನಡೆಸುವರೇ?’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ರಾಹುಲ್ ಗಾಂಧಿ ಡ್ರಗ್ ವ್ಯಸನಿ ಮತ್ತು ಡ್ರಗ್ ಪೆಡ್ಲರ್ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಇಂಥವರು ಹೇಗೆ ರಾಷ್ಟ್ರ ಮುನ್ನಡೆಸಲು ಸಾಧ್ಯ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ ಕಟೀಲ್ ಪ್ರಶ್ನಿಸಿದರು.


ನಳಿನ್‌ಕುಮಾರ ಕಟೀಲ್

ನಗರದ ಶ್ರೀನಿವಾಸ ಗಾರ್ಡನ್‌ನಲ್ಲಿ ಮಂಗಳವಾರ ನಡೆದ ವಿಧಾನ ಪರಿಷತ್ ಚುನಾವಣೆಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ ಇಬ್ಬರೂ ಜಾಮೀನಿನ ಮೇಲೆ ಹೊರಗೆ ಇದ್ದಾರೆ. ಅವರಲ್ಲಿರುವ ಒಂದು ಗುಂಪು ರಾಹುಲ್ ಗಾಂಧಿ ರಾಷ್ಟ್ರೀಯ ಅಧ್ಯಕ್ಷ ಆಗಬೇಕು ಎಂದರೆ, ಮತ್ತೊಂದು ಗುಂಪು ಸೋನಿಯಾ ಗಾಂಧಿ ಆಗಬೇಕು ಎನ್ನುತ್ತಿದೆ. ಸ್ವಾತಂತ್ರ್ಯಪೂರ್ವದ ಪಕ್ಷ ಇದೀಗ ವೈಚಾರಿಕವಾಗಿ, ಭೌತಿಕವಾಗಿ ದಿವಾಳಿಯಾಗಿದೆ’ ಎಂದು ಹೇಳಿದರು.

> **ನಳಿನ್ ಕುಮಾರ್ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ. ಬುದ್ಧಿ ಇಲ್ಲದವರು ಇಂತಹ ಹೇಳಿಕೆ ಕೊಡುತ್ತಾರೆ. ಅವರನ್ನು ವ್ಯಸನ ಮುಕ್ತ ಕೇಂದ್ರಕ್ಕೆ ಸೇರಿಸಬೇಕು**
> **ರಣದೀಪ್ ಸಿಂಗ್ ಸುರ್ಜೇವಾಲ,**
> ಕಾಂಗ್ರೆಸ್ ರಾಜ್ಯ ಉಸ್ತುವಾರಿ

> **ಕಟೀಲ್ ಹುಚ್ಚನಂತೆ ಮಾತನಾಡುತ್ತಾನೆ. ನಿಮ್ಹಾನ್ಸ್‌ಗೆ ಸೇರಿಸಬೇಕು. ಅವರನ್ನು ಅಧ್ಯಕ್ಷ ಸ್ಥಾನದಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ತಕ್ಷಣ ಕಿತ್ತೊಗೆಯಬೇಕು**
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

5ನೇ ಪುಟ ನೋಡಿ

ಒಳ ಪುಟ
ಕೇಂದ್ರ ಸರ್ಕಾರಿ ನೌಕರರಿಗೆ ಬೋನಸ್ 8

ಸದ್ಯದಲ್ಲೇ ಹೊಸ ಪಕ್ಷ ಘೋಷಣೆ: ಅಮರಿಂದರ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಮತ್ತು ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಹೊಸ ರಾಜಕೀಯ ಪಕ್ಷವನ್ನು ಸದ್ಯದಲ್ಲಿಯೇ ಘೋಷಿಸುವುದಾಗಿ ಮಂಗಳವಾರ ಹೇಳಿದ್ದಾರೆ.

ರೈತರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಪರಿಹಾರ ದೊರೆತರೆ, 2022ರಲ್ಲಿ ನಡೆಯುವ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಮತ್ತು ಸೀಟು ಹೊಂದಾಣಿಕೆ ಮಾಡಿಕೊಳ್ಳಲು ಮುಕ್ತ ಮನಸ್ಸಿನಿಂದಿರುವುದಾಗಿ ಅವರು ಹೇಳಿದ್ದಾರೆ.

ಎನ್‌ಐಎ ತನಿಖೆ?

ಶ್ರೀನಗರ (ಪಿಟಿಐ): ಕಾಶ್ಮೀರದಲ್ಲಿ ಅಲ್ಪಸಂಖ್ಯಾತ ಸಮುದಾಯದವರನ್ನು ಭಯೋತ್ಪಾದಕರು ಇತ್ತೀಚೆಗೆ ಹತ್ಯೆ ಮಾಡಿದ ಪ್ರಕರಣಗಳನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತನಿಖೆ ಮಾಡುವ ಸಾಧ್ಯತೆ ಇದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಬ್ರಾಹಿಂ ಭೇಟಿ ಮಾಡಿದ ಎಚ್‌ಡಿಕೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ಸಿ.ಎಂ.ಇಬ್ರಾಹಿಂ ಅವರನ್ನು ಮಂಗಳವಾರ ಭೇಟಿ ಮಾಡಿ ಈದ್ ಶುಭಾಶಯ ಕೋರಿದರು.

ಇಬ್ರಾಹಿಂ ಅವರನ್ನು ಜೆಡಿಎಸ್‌ಗೆ ಕರೆತರುವ ಪ್ರಯತ್ನದಲ್ಲಿ ತೊಡಗಿರುವ ಕುಮಾರಸ್ವಾಮಿ ಅವರು ಹಾನಗಲ್ ಮತ್ತು ಸಿಂದಗಿ ಉಪಚುನಾವಣೆ ಬಳಿಕ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ. ಬಹುತೇಕ ಡಿಸೆಂಬರ್ ವೇಳೆಗೆ ಇಬ್ರಾಹಿಂ ಜೆಡಿಎಸ್ ಸೇರಲಿದ್ದು, ಅವರಿಗೆ ಪಕ್ಷದಲ್ಲಿ ಮಹತ್ವದ ಹುದ್ದೆಯನ್ನು ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ನಲ್ಲಿ ತಮಗೆ ಹೆಚ್ಚಿನ ಪ್ರಾಶಸ್ತ್ಯ ಸಿಗದ ಕಾರಣ ಬೇಸತ್ತಿರುವ ಇಬ್ರಾಹಿಂ ಅವರು ಜೆಡಿಎಸ್‌ಗೆ ಸೇರುವ ಬಗ್ಗೆ ಮನಸ್ಸು ಮಾಡಿದ್ದಾರೆ. ಅಲ್ಲದೆ, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಆಪ್ತ ವಲಯದಿಂದಲೂ ದೂರವಾಗಿದ್ದಾರೆ. ಹಿಂದೆ ಜನತಾದಳದಲ್ಲಿ ಇದ್ದಾಗ ಪಕ್ಷದ ಅಧ್ಯಕ್ಷರಾಗಿದ್ದೂ, ಅಲ್ಲದೆ ಎಚ್.ಡಿ. ದೇವೇಗೌಡ ಪ್ರಧಾನಿ ಆದಾಗ ನಾಗರಿಕ ವಿಮಾನಯಾನ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

ರಸ್ತೆ ಗುಂಡಿ ಮುಚ್ಚಿಸಿದ ಸಂಚಾರ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಬಹುತೇಕ ಕಡೆ ಬಿದ್ದಿರುವ ಗುಂಡಿಗಳನ್ನು ಸಂಚಾರ ಪೊಲೀಸರೇ ಮುಚ್ಚಿಸಿದ್ದು, ಇದಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಪೊಲೀಸರನ್ನು ನೋಡಿ, ಬಿಬಿಎಂಪಿ ಅಧಿಕಾರಿಗಳು ಕಲಿಯಬೇಕು' ಎಂದು ಜನ ಪಾಠ ಹೇಳಿದ್ದಾರೆ.

ರಸ್ತೆಯಲ್ಲಿರುವ ಗುಂಡಿಯಿಂದಾಗಿ ಅಪಘಾತಗಳು ಹೆಚ್ಚಾಗುತ್ತಿವೆ. ಜೊತೆಗೆ, ವಾಹನಗಳು ನಿಧಾನವಾಗಿ ಸಂಚರಿಸುತ್ತಿದ್ದರಿಂದ ದಟ್ಟಣೆಯೂ ಉಂಟಾಗುತ್ತಿದೆ. ಇದರಿಂದ ಜನರು ತೊಂದರೆ ಅನುಭವಿಸುತ್ತಿದ್ದು, ದಟ್ಟಣೆ ನಿಯಂತ್ರಿಸಲು ಪೊಲೀಸರೂ ಪರದಾಡುತ್ತಿದ್ದಾರೆ.

ಗುಂಡಿಗಳ ಸಮೀಕ್ಷೆ ಮಾಡಿ ಬಿಬಿಎಂಪಿ ಅಧಿಕಾರಿಗಳಿಗೆ ಪೊಲೀಸರು ಈಗಾಗಲೇ ವರದಿ ನೀಡಿದ್ದಾರೆ. ಇಷ್ಟಾದರೂ ಅಧಿಕಾರಿಗಳು, ಗುಂಡಿ ಮುಚ್ಚಿಸಲು ಕ್ರಮ ಕೈಗೊಂಡಿಲ್ಲ. ಇದರಿಂದಾಗಿ ಪೊಲೀಸರೇ ರಸ್ತೆಗೆ ಇಳಿದು ಗುಂಡಿಗಳನ್ನು ಮುಚ್ಚಿಸಿದರು.

ಜಲ್ಲಿ ಮಿಶ್ರಿತ ಸಿಮೆಂಟ್‌ನ್ನು ಟ್ರ್ಯಾಕ್ಟರ್‌ನಲ್ಲಿ ತರಿಸಿದ್ದ ಪೊಲೀಸರು, ಗುಂಡಿ ಇರುವ ಜಾಗದಲ್ಲಿ ಹಾಕಿಸಿದರು. ಕೂಲಿ ಕಾರ್ಮಿಕರು, ಗುಂಡಿ ಜಾಗವನ್ನು ಸಮದಟ್ಟು ಮಾಡಿದರು.

ಪೊಲೀಸರು ಗುಂಡಿ ಮುಚ್ಚಿರುವ ಫೋಟೊವನ್ನು ಬೆಂಗಳೂರು ಸಂಚಾರ ವಿಭಾಗದ (ಪಶ್ಚಿಮ) ಡಿಸಿಪಿ ಕುಲದೀಪ್ ಕುಮಾರ್ ಜೈನ್, ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಇದಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಸುಗಮ ಸಂಚಾರಕ್ಕಾಗಿ ಕೆಲಸ ಮಾಡುವ ಪೊಲೀಸರು, ಇದೀಗ ಗುಂಡಿ ಮುಚ್ಚುವ ಕೆಲಸವನ್ನೂ ಮಾಡುತ್ತಿದ್ದಾರೆ. ನಾವೆಲ್ಲರೂ ಬಿಬಿಎಂಪಿಗೆ ತೆರಿಗೆ ಕಟ್ಟುವುದನ್ನು ನಿಲ್ಲಿಸೋಣ. ಅದೇ ಹಣವನ್ನು ಪೊಲೀಸರಿಗೆ ನೀಡೋಣ' ಎಂದು ಸಾರ್ವಜನಿಕರೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಮತ್ತೊಬ್ಬರು, 'ಜನರ ನಡುವೆಯೇ ಇರುವ ಪೊಲೀಸರು, ರಸ್ತೆಗೆ ಇಳಿದು ಗುಂಡಿ ಮುಚ್ಚುತ್ತಿದ್ದಾರೆ. ಎ.ಸಿ ಕಚೇರಿಯಲ್ಲಿ ಕುಳಿತಿರುವ ಬಿಬಿಎಂಪಿ ಅಧಿಕಾರಿಗಳಿಗೆ ನಾಚಿಕೆ ಆಗಬೇಕು' ಎಂದಿದ್ದಾರೆ.



ಮೈಸೂರು ರಸ್ತೆಯಲ್ಲಿ ಗುಂಡಿ ಮುಚ್ಚಿಸಿದ ಸಂಚಾರ ಪೊಲೀಸರು

ಇಂದು 'ರಸ್ತೆ ಗುಂಡಿಗಳ ಹಬ್ಬ'

ಬೆಂಗಳೂರು: ನಗರದೆಲ್ಲೆಡೆ ರಸ್ತೆ ಗುಂಡಿಗಳು ವಿಪರೀತ ಹೆಚ್ಚಾಗಿ, ಜೀವ ತೆಗೆಯುವಷ್ಟು ಅಪಾಯಕಾರಿ ಮಟ್ಟ ತಲುಪಿವೆ ಎಂದು ಆರೋಪಿಸಿ ಆಮ್ ಆದ್ಮಿ ಪಕ್ಷವು ಅ.20ರಂದು ಬೆಳಿಗ್ಗೆ 10 ಗಂಟೆಗೆ 'ರಸ್ತೆ ಗುಂಡಿಗಳ ಹಬ್ಬ' ಅಭಿಯಾನ ಹಮ್ಮಿಕೊಂಡಿದೆ.

ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಹಾಗೂ ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ನೇತೃತ್ವದಲ್ಲಿ ಸಂಜೆಯವರೆಗೆ ನಗರದ ಎಲ್ಲ ವಾರ್ಡ್‌ಗಳಲ್ಲಿ ಅಭಿಯಾನ ನಡೆಯಲಿದೆ.

ಅವೆನ್ಯೂ ರಸ್ತೆ ಕೊಳಚೆಮಯ

ಬೆಂಗಳೂರು: ಸ್ಮಾರ್ಟ್‌ಸಿಟಿ ಕಾಮಗಾರಿ ನಡೆಯುತ್ತಿರುವ ನಗರದ ಅವೆನ್ಯೂ ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಹಾಳಾಗಿರುವ ಕಾರಣ ಎರಡು ವಾರಗಳಿಂದ ರಸ್ತೆಯ ಮೇಲೆಲ್ಲ ಕೊಳಚೆ ನೀರು ಹರಿಯುತ್ತಿದೆ. 'ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುತ್ತಿಲ್ಲ' ಎಂದು ಇಲ್ಲಿನ ವರ್ತಕರು ದೂರಿದ್ದಾರೆ.

ಈ ದುರ್ನಾತ ಬೀರುವ ರಸ್ತೆಯಲ್ಲಿ ಗ್ರಾಹಕರು ಸಂಚರಿಸಲು ಅಸಹ್ಯಪಡುತ್ತಾರೆ. ಇದರಿಂದ ವ್ಯಾಪಾರವೂ ಸರಿಯಾಗಿ ನಡೆಯುತ್ತಿಲ್ಲ. ಕಾಮಗಾರಿಗಳೇ ಜನರಿಗೆ ತಲೆನೋವಾಗಿ ಪರಿಣಮಿಸಿವೆ ಎಂದು ವರ್ತಕರು ಬೇಸರ ವ್ಯಕ್ತಪಡಿಸಿದ್ದಾರೆ.

'ಸ್ಮಾರ್ಟ್‌ಸಿಟಿ ಕಾಮಗಾರಿಗಳಿಗೂ ಮುನ್ನ ರಸ್ತೆಯಲ್ಲಿ ಈ ದುಸ್ಥಿತಿ ಇರಲಿಲ್ಲ. ಕಾಮಗಾರಿಗಳು ನಡೆಯುತ್ತಿರುವುದರಿಂದ ಒಳಚರಂಡಿ ವ್ಯವಸ್ಥೆಯ ಸಂಪರ್ಕ ಹಾಳಾಗಿದೆ. ಕಿಲಾರಿ ರಸ್ತೆಯ ಜಂಕ್ಷನ್‌ನಿಂದ ಶುರುವಾಗಿ ಚಿಕ್ಕಪೇಟೆ ವೃತ್ತ ಸಂಪರ್ಕಿಸುವ ರಸ್ತೆಯವರೆಗೆ ಮೂರು ಸ್ಥಳಗಳಲ್ಲಿ ಮಾನವಗುಂಡಿ (ಮ್ಯಾನ್‌ಹೋಲ್) ಗುಂಡಿಗಳು ಕಟ್ಟಿಕೊಂಡು ರಸ್ತೆಯ ಮೇಲೆ ನೀರು ಹರಿಯುತ್ತಿದೆ' ಎಂದು ಅವೆನ್ಯೂ ರಸ್ತೆಯ ಶಾಂತಿ ಮೆಡಿಕಲ್ಸ್‌ನ ವಿವೇಕ್ ದೂರಿದರು.

'ಸ್ಮಾರ್ಟ್ ಸಿಟಿ ಕಾಮಗಾರಿಯ ಗಡುವು ವಿಸ್ತರಣೆಯಾಗುತ್ತಲೇ ಇದೆ. ಮ್ಯಾನ್‌ಹೋಲ್ ದುರಸ್ತಿ ವಿಳಂಬದ ಕುರಿತು ಜಲಮಂಡಳಿಯ ಅಧಿಕಾರಿಗಳರನ್ನು ವಿಚಾರಿಸಿದರೆ, ಅವರು ಬೆಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ಅಧಿಕಾರಿಗಳತ್ತ ಬೊಟ್ಟು ಮಾಡುತ್ತಾರೆ. ಸ್ಮಾರ್ಟ್‌ಸಿಟಿ ಲಿಮಿಟೆಡ್‌ನವರು ಜಲಮಂಡಳಿಯತ್ತ ಕೈ ತೋರಿಸುತ್ತಾರೆ. ಈ ಸಮಸ್ಯೆ ನಿವಾರಿಸುವ ಬಗ್ಗೆ ಎರಡೂ ಸಂಸ್ಥೆಗಳು ಹೊಣೆ ಹೊರುತ್ತಿಲ್ಲ' ಎಂದು ಅಳಲು ತೋಡಿಕೊಂಡರು.

'ಶೌಚ ಗುಂಡಿಗಳ ದುರಸ್ತಿಗೆ ಅಧಿಕಾರಿಗಳು ಆಸಕ್ತಿ ತೋರುತ್ತಿಲ್ಲ. ಹಲವು ಬಾರಿ ಅವರ ಗಮನಕ್ಕೆ ತಂದರೂ, ಯಾವುದೇ ಕ್ರಮ ಕೈಗೊಳ್ಳದೆ ಬೇಜವಾಬ್ದಾರಿಯ ಉತ್ತರಗಳನ್ನು ನೀಡುತ್ತಾರೆ' ಎನ್ನುತ್ತಾರೆ ಅವೆನ್ಯೂ ರಸ್ತೆಯಲ್ಲಿರುವ ಫೋಟೊಗ್ರಾಫಿ ಸ್ಟುಡಿಯೊವೊಂದರ ಸಿಬ್ಬಂದಿ ವಿಶಾಲ್.

'ಈ ರಸ್ತೆಯಲ್ಲಿ ಪಾದಚಾರಿ ಮಾರ್ಗಗಳು ಇದ್ದೂ ಇಲ್ಲದಂತಿವೆ. ಕೊಳಚೆ ಹರಿಯುವ ರಸ್ತೆಯಲ್ಲೇ ಪ್ರತಿದಿನ ನಡೆಯುವುದು ಅನಿವಾರ್ಯವಾಗಿದೆ. ಮಳೆ ಬಂದರಂತೂ ಇಲ್ಲಿನ ಪರಿಸ್ಥಿತಿಯನ್ನು ವಿವರಿಸಲಾಗದು. ಸ್ಮಾರ್ಟ್‌ಸಿಟಿ ಕಾಮಗಾರಿಗಳು ತ್ವರಿತಗತಿಯಲ್ಲಿ ಪೂರ್ಣಗೊಂಡರೆ, ನಿರಾತಂಕವಾಗಿ ಜನ ಈ ರಸ್ತೆಯಲ್ಲಿ ಸಂಚರಿಸುತ್ತಾರೆ. ಸದ್ಯಕ್ಕೆ ಶೌಚ ಗುಂಡಿಗಳನ್ನು ದುರಸ್ತಿಗೊಳಿಸಿದರೆ ಸಾಕು' ಎಂದು ಸ್ಥಳೀಯ ನಿವಾಸಿ ಗೋಪಾಲ್ ಹೇಳಿದರು.



ಅವೆನ್ಯೂ ರಸ್ತೆಯಲ್ಲಿ ಮ್ಯಾನ್‌ಹೋಲ್ ಹಾಳಾಗಿ ರಸ್ತೆ ಮೇಲೆ ಕೊಳಚೆ ನೀರು ಹರಿಯುತ್ತಿರುವುದು

ಸಂಕ್ಷಿಪ್ತ ಸುದ್ದಿ

ಸಂಧಿವಾತ ಕುರಿತು ಚರ್ಚೆ ಇಂದು

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಅಂಗ ಸಂಸ್ಥೆ ವಿಕ್ರಮ್ ಆಸ್ಪತ್ರೆಯು ವಿಶ್ವ ಸಂಧಿವಾತ ದಿನದ ಅಂಗವಾಗಿ 'ಸಂಧಿವಾತ ಮತ್ತು ಕೀಲು ನೋವಿನ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದು' ಕುರಿತು ಚರ್ಚೆಯನ್ನು ಅ.20ರಂದು ಮಧ್ಯಾಹ್ನ 3 ಗಂಟೆಗೆ ಮಿಲ್ಲರ್ಸ್ ರಸ್ತೆಯಲ್ಲಿರುವ ವಿಕ್ರಮ್ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದೆ.

'ಡಿಎಚ್ ಬ್ರ್ಯಾಂಡ್‌ಸ್ಪಾಟ್' ಸಹಯೋಗದಲ್ಲಿ ನಡೆಯಲಿರುವ ಈ ಚರ್ಚಾ ಕಾರ್ಯಕ್ರಮದಲ್ಲಿ ವಿಕ್ರಮ್ ಆಸ್ಪತ್ರೆಯ ಸಂಧಿವಾತ ಸಮಾಲೋಚಕ ಡಾ.ಬಿ.ಜಿ.ಧರ್ಮಾನಂದ್, ಮೂಳೆ ತಜ್ಞರಾದ ಡಾ.ಚಿರಾಗ್ ಥಾನ್ವೆ ಹಾಗೂ ಡಾ.ಸೈಯದ್ ಇಮ್ರಾನ್ ಮಾತನಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಸ್ಮಾರ್ಟ್ ಸಿಟಿ ಯೋಜನೆ ಕಣ್ಕಟ್ಟಿಗೆ ಸೀಮಿತ'

ಬೆಂಗಳೂರು: 'ಬಿಜೆಪಿ ಸರ್ಕಾರದ 'ಸ್ಮಾರ್ಟ್ ಸಿಟಿ' ಎಂಬ ಯೋಜನೆ ಕೇವಲ ಕಣ್ಕಟ್ಟಿಗೆ ಸೀಮಿತವಾಗಿದೆ' ಎಂದು ರಾಜ್ಯ ಕಾಂಗ್ರೆಸ್ ಟೀಕಿಸಿದೆ.

'ಮಳೆಗೆ ಸ್ಮಾರ್ಟ್ ರಸ್ತೆಗಳ ಬಣ್ಣ ಬಯಲು!' ಶೀರ್ಷಿಕೆಯಡಿ ನಗರದ ರಸ್ತೆಗಳ ಬಗ್ಗೆ 'ಪ್ರಜಾವಾಣಿ' ಮಂಗಳವಾರದ (ಅ.19) ಸಂಚಿಕೆಯಲ್ಲಿ ಪ್ರಕಟಿಸಿದ್ದ ವಿಶೇಷ ವರದಿಯನ್ನು ಉಲ್ಲೇಖಿಸಿ ಕಾಂಗ್ರೆಸ್ ಟ್ವೀಟ್ ಮಾಡಿದ್ದು, ರಾಜ್ಯ ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

'ಬಿಜೆಪಿಯ 'ಸ್ಮಾರ್ಟ್ ಸಿಟಿ' ಎಂಬ ಕಣ್ಕಟ್ಟು ಯೋಜನೆಯ ಬಣ್ಣ ಮಳೆಯಲ್ಲಿ ತೊಳೆದುಕೊಂಡು ಹೋಗಿದೆ. ಸ್ಮಾರ್ಟ್ ಸಿಟಿ ಹಗರಣದ ಬಗ್ಗೆ ಬಿಜೆಪಿ ನಾಯಕರ ಮೌನವು, ಗುತ್ತಿಗೆದಾರರ ಜತೆ ಆ ಪಕ್ಷದ ನಾಯಕರೂ ಕಮಿಷನ್ ನುಂಗಿರುವ ಸಂಶಯ ಸೃಷ್ಟಿಸಿದೆ. ಈವರೆಗೂ 'ಸ್ಮಾರ್ಟ್ ರಸ್ತೆ'ಯ ಗುಂಡಿಗಳಿಗೆ ಬಿದ್ದ ₹ 191 ಕೋಟಿಗೆ ಹೊಣೆ ಯಾರು' ಎಂದೂ ಕಾಂಗ್ರೆಸ್ ಪ್ರಶ್ನಿಸಿದೆ.

ಐಷಾರಾಮಿ ಕಾರುಗಳ ಅಕ್ರಮ ನೋಂದಣಿ • ಜಾಲ ಭೇದಿಸಿದ ಬೆಂಗಳೂರು ಸಿಸಿಬಿ ಪೊಲೀಸರು

ವಂಚನೆ: 'ರೋಸ್‌ಮೆರ್ಟಾ' ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಕಟ್ಟಿಸಿಕೊಳ್ಳದೇ ವಾಹನಗಳ ನೋಂದಣಿ ಮಾಡಿಕೊಟ್ಟು ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ನಷ್ಟವನ್ನುಂಟು ಮಾಡಿ ವಂಚಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಈ ಸಂಬಂಧ ಆರೋಪಿ ಗಿರೀಶ್ ಎಂಬಾತನನ್ನು ಮಂಗಳವಾರ ಬಂಧಿಸಿದ್ದಾರೆ.

'ಬಂಧಿತ ಗಿರೀಶ್, ಸಾರಿಗೆ ಇಲಾಖೆಗೆ ಸ್ಮಾರ್ಟ್ ಕಾರ್ಡ್ ಹಾಗೂ ಇತರೆ ಕಾರ್ಡ್‌ಗಳನ್ನು ಪೂರೈಸುವ 'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿಯ ತಾಂತ್ರಿಕ ವಿಭಾಗದ ವ್ಯವಸ್ಥಾಪಕ. ತನಗೆ ನೀಡಿದ್ದ ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಬಳಸಿಕೊಂಡು ವಾಹನಗಳ ವಿವರವನ್ನು ಅಕ್ರಮವಾಗಿ 'ವಾಹನ್' ತಂತ್ರಾಂಶದಲ್ಲಿ ದಾಖಲಿಸಿ ಕೃತ್ಯ ಎಸಗುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಆತನನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಧೀಶರನ್ನು ಕೋರಲಾಗುವುದು. ಗಿರೀಶ್ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಚುರುಕುಗೊಳಿಸಲಾಗಿದೆ' ಎಂದೂ ಹೇಳಿದರು.

ಐಷಾರಾಮಿ ಕಾರುಗಳೇ ಹೆಚ್ಚು: 'ಔಡಿ, ಬೆನ್ಜ್, ಬಿಎಂಡಬ್ಲ್ಯು, ಜಾಗ್ವಾರ್, ಲ್ಯಾಂಬೋರ್ಗಿನಿ ಹಾಗೂ ಇತರೆ ಐಷಾರಾಮಿ ಕಾರುಗಳ ನೋಂದಣಿ ಸಂದರ್ಭದಲ್ಲಿ ಅಕ್ರಮ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಐಷಾರಾಮಿ ಕಾರುಗಳ ನೋಂದಣಿ ಶುಲ್ಕ ಹೆಚ್ಚಿದೆ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಗಿರೀಶ್ ಹಾಗೂ ಇತರರು, ತೆರಿಗೆಗಿಂತ ಕಡಿಮೆ ಹಣ ಪಡೆದು ಅಕ್ರಮವಾಗಿ ಕಾರುಗಳಿಗೆ ವಾಹನ (ಕೆಎ) ನೋಂದಣಿ ಮಾಡಿಕೊಡುತ್ತಿದ್ದರು. ಇದರಿಂದ ಆರೋಪಿಗಳು ಲಕ್ಷಾಂತರ ರೂಪಾಯಿ ಸಂಪಾದಿಸಿರುವ ಮಾಹಿತಿ ಇದೆ' ಎಂದೂ ಹೇಳಿದರು.

ನಕಲಿ ನೋಂದಣಿ ಫಲಕ: 'ಹೊರ ರಾಜ್ಯಗಳಲ್ಲಿ ನೋಂದಣಿ ಆಗಿರುವಂತೆ ಬಿಂಬಿಸಿ ನಕಲಿ ನೋಂದಣಿ ಫಲಕವನ್ನು ಐಷಾರಾಮಿ ಕಾರುಗಳಿಗೆ ಹಾಕುತ್ತಿದ್ದರು. ಆ ನೋಂದಣಿ ಸಂಖ್ಯೆ ಆಧರಿಸಿ ಆರೋಪಿ ಗಿರೀಶ್, ನೋಂದಣಿ ಪ್ರಕ್ರಿಯೆ ಆರಂಭಿಸುತ್ತಿದ್ದ' ಎಂದೂ ಅಧಿಕಾರಿ ತಿಳಿಸಿದರು.

'ಸಾರಿಗೆ ಇಲಾಖೆ ನಿಗದಿಪಡಿಸಿರುವ ತೆರಿಗೆ ಪಾವತಿಸದಿದ್ದರೂ ಆರೋಪಿ ಗಿರೀಶ್, ತೆರಿಗೆ ತುಂಬಿರುವುದಾಗಿ ಹೇಳಿ 'ವಾಹನ್' ತಂತ್ರಾಂಶದಲ್ಲಿ ಮಾಹಿತಿ ನಮೂದು ಮಾಡುತ್ತಿದ್ದ. ಇದಕ್ಕಾಗಿ ಕಾರುಗಳ ಮಾಲೀಕರು, ಪ್ರತ್ಯೇಕವಾಗಿ ಹಣ ಸಂದಾಯ ಮಾಡುತ್ತಿದ್ದರು. ಆ ಹಣವನ್ನು ಆರೋಪಿಗಳು ತಮ್ಮಲ್ಲೇ ಹಂಚಿಕೊಳ್ಳುತ್ತಿದ್ದರು' ಎಂದೂ ಹೇಳಿದರು.

ಕಾರ್ಯಾಚರಣೆಯಿಂದ ಅಕ್ರಮ ಪತ್ತೆ: ಪಶ್ಚಿಮ ಬಂಗಾಳ (ಡಬ್ಲ್ಯುಬಿ), ಪುದುಚೇರಿ (ಪಿವೈ) ಹಾಗೂ ರಾಜಸ್ಥಾನ (ಆರ್‌ಜೆ) ನೋಂದಣಿ ಸಂಖ್ಯೆ ಕಾರುಗಳು ನಗರದಲ್ಲಿ ಹೆಚ್ಚಿವೆ. ಅವುಗಳ ಮಾಹಿತಿ ಕಲೆಹಾಕಲು ಸಾರಿಗೆ ಅಧಿಕಾರಿಗಳು ನಗರದಲ್ಲಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಿದ್ದರು.

'ಕಾರುಗಳ ದಾಖಲೆ ಪರಿಶೀಲನೆ ನಡೆಸಿದಾಗ, ನೋಂದಣಿ ಅಕ್ರಮ ಪತ್ತೆಯಾಗಿತ್ತು. ಈ ಬಗ್ಗೆ ಮಾಹಿತಿ ಕಲೆಹಾಕಿ ಸಾರಿಗೆ ಅಧಿಕಾರಿಗಳು ಇಂದಿರಾನಗರ ಠಾಣೆಗೆ ದೂರು ನೀಡಿದ್ದರು. ಅದರ ತನಿಖೆ ಹೊಣೆಯನ್ನು ಇದೀಗ ಸಿಸಿಬಿಗೆ ವಹಿಸಲಾಗಿದೆ' ಎಂದೂ ಪೊಲೀಸ್ ಅಧಿಕಾರಿ ತಿಳಿಸಿದರು.

'ವಾಹನ್' ಮೂಲಕ ಅಕ್ರಮ

'ವಾಹನಗಳ ನೋಂದಣಿ ಪ್ರಕ್ರಿಯೆಯನ್ನು ಆನ್‌ಲೈನ್‌ನಲ್ಲಿ 'ವಾಹನ್-4' ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ. ಈ ತಂತ್ರಾಂಶದ ನಿರ್ವಹಣೆಯನ್ನು 'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿ ಮಾಡುತ್ತಿದೆ. ಇದೇ ತಂತ್ರಾಂಶ ಇದೀಗ ಅಕ್ರಮಕ್ಕೆ ದಾರಿ ಮಾಡಿಕೊಟ್ಟಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ವಾಹನ್' ತಂತ್ರಾಂಶದಲ್ಲಿ ಮಾಹಿತಿ ಸೇರ್ಪಡೆ ಹಾಗೂ ಅಳಿಸಿ ಹಾಕುವ ಅವಕಾಶ ಕಂಪನಿಗೆ ಇದೆ. ಐಷಾರಾಮಿ ಕಾರುಗಳ ಮಾಲೀಕರು ತೆರಿಗೆ ತುಂಬಿರುವುದಾಗಿ ಆರೋಪಿ ಗಿರೀಶ್, ತಂತ್ರಾಂಶದಲ್ಲಿ ಸುಳ್ಳು ಮಾಹಿತಿ ನಮೂದು ಮಾಡುತ್ತಿದ್ದ. ಇದೇ ಮಾಹಿತಿ ನಿಜವೆಂದು ತಿಳಿದು ಆರ್‌ಟಿಒಗಳು, ವಾಹನ ನೋಂದಣಿ ಕಡತಕ್ಕೆ ಸಹಿ ಮಾಡಿ ಕಳುಹಿಸುತ್ತಿದ್ದರು. ನಂತರ, ಕಾರುಗಳ ಮಾಲೀಕರಿಗೆ ಸ್ಮಾರ್ಟ್ ಕಾರ್ಡ್ ಸಹ ಬರುತ್ತಿತ್ತು' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಕಲಾಕೃತಿಗಳ ಪ್ರದರ್ಶನ

ಬೆಂಗಳೂರು: 'ಫೀನಿಕ್ಸ್ ಕೆಸ್ಸಾಕು– ದಿ ಮಾಸ್ಟರ್‌ಪೀಸ್' ವತಿಯಿಂದ ಚಿತ್ರಕಲೆ ಹಾಗೂ ಕಲಾಕೃತಿಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

'ಅಲ್ಕೆಮಿ' ಹೆಸರಿನ ಈ ಪ್ರದರ್ಶನವು ಇದೇ 18ರಂದು ಆರಂಭವಾಗಿದ್ದು, 31ರವರೆಗೂ ಬೆಳಿಗ್ಗೆ 11 ರಿಂದ ಸಂಜೆ 7ರ ವರೆಗೆ ರಾಜಾಜಿನಗರದಲ್ಲಿ ನಡೆಯಲಿದೆ.

'ಅರವಿಂದ ಸಮಂತ, ಪರಮೇಶ್ವರ ರಾಜು, ವಾಸವನ್, ರೋಷನ್ ಬಾಬ್ಬಿ, ಸೌಮ್ಯ ಬಂಡೋಪಾಧ್ಯಾಯ, ರೂಪ್‌ಚಂದ್ ಕುಂದು ಸೇರಿದಂತೆ 21 ಕಲಾವಿದರ ಕಲಾಕೃತಿಗಳನ್ನು ಪ್ರದರ್ಶನಕ್ಕಿಡಲಾಗಿದೆ. ಪ್ರಕೃತಿಯಲ್ಲಾಗುತ್ತಿರುವ ಬದಲಾವಣೆಯನ್ನು ತಿಳಿಸಲು ಕಲೆಗಿಂತಲೂ ಉತ್ತಮ ಮಾರ್ಗ ಮತ್ತೊಂದಿಲ್ಲ.

ಹೀಗಾಗಿ ಈ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ' ಎಂದು ಫೀನಿಕ್ಸ್ ಕೆಸ್ಸಾಕು ಅಭಿವೃದ್ಧಿ ಅಧಿಕಾರಿ ರಾಘವ್ ಬೊಜೊರಿಯಾ ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ 4 ವರ್ಷಗಳ ಆನರ್ಸ್ ಕೋರ್ಸ್



ಕುಲಪತಿ ಕೆ.ಆರ್.ವೇಣುಗೋಪಾಲ್ ಅವರು ವಸ್ತು ಸಂಗ್ರಹಾಲಯದ ಕಟ್ಟಡಕ್ಕೆ ಭೇಟಿ ನೀಡಿ ಕೊಠಡಿಗಳನ್ನು ಪರಿಶೀಲಿಸಿದರು. ಮುಖ್ಯ ಕಾರ್ಯಪಾಲಕ ಎಂಜಿನಿಯರ್ ಬಿ.ಟಿ. ಚಂದ್ರಶೇಖರ, ಪ್ರೊ.ಎಸ್.ಆರ್. ಕೇಶವ ಹಾಗೂ ಕೃಷ್ಣಮೂರ್ತಿ ಇದ್ದರು.

ಬೆಂಗಳೂರು: ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಅನುಷ್ಠಾನಕ್ಕೆ ಮುಂದಾಗಿರುವ ಬೆಂಗಳೂರು ವಿಶ್ವವಿದ್ಯಾಲಯವು 2021–22ನೇ ಸಾಲಿನಿಂದ ನಾಲ್ಕು ವರ್ಷಗಳ ಬಿಎ, ಬಿಎಸ್ಸಿ ಆನರ್ಸ್ ಪದವಿ ಕೋರ್ಸ್‌ಗಳನ್ನು ಆರಂಭಿಸಲು ಮುಂದಾಗಿದೆ.

ಜ್ಞಾನ ಭಾರತಿ ಆವರಣದಲ್ಲಿರುವ ಇತಿಹಾಸ ಮತ್ತು ಪ್ರಾಚ್ಯ ವಸ್ತು ಸಂಗ್ರಹಾಲಯದ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲು ನಿರ್ಧರಿಸಲಾಗಿದೆ.

ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾಲ್ ಅವರು ವಸ್ತು ಸಂಗ್ರಹಾಲಯದ ಕಟ್ಟಡಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಕಟ್ಟಡಕ್ಕೆ ಅಗತ್ಯವಾದ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ವಿ.ವಿ ಮುಖ್ಯ ಕಾರ್ಯಪಾಲಕ ಎಂಜಿನಿಯರ್ ಬಿ.ಟಿ. ಚಂದ್ರಶೇಖರ ಅವರಿಗೆ ಸೂಚಿಸಿದರು. ಪೀಠೋಪಕರಣ, ಗ್ರೀನ್ ಬೋರ್ಡ್ ವ್ಯವಸ್ಥೆ ಮಾಡುವಂತೆಯೂ ನಿರ್ದೇಶಿಸಿದರು.

'ಎನ್‌ಇಪಿ ಅಡಿಯಲ್ಲಿ ಬಿಎ ಹಾಗೂ ಬಿಎಸ್ಸಿ ಆನರ್ಸ್ ಕೋರ್ಸ್‌ಗಳನ್ನು ಆರಂಭಿಸಲು ನಿರ್ಧರಿಸಿದ್ದೇವೆ. ಅರ್ಜಿ ಸಲ್ಲಿಸಲು ಇದೇ 28 ಕೊನೆಯ ದಿನ. ಪ್ರತಿ ತರಗತಿಗೆ 30 ವಿದ್ಯಾರ್ಥಿಗಳಿಗೆ ಪ್ರವೇಶ ಇರಲಿದೆ. ಮೆರಿಟ್ ಆಧಾರದಲ್ಲಿ ಸೀಟು ಹಂಚಿಕೆ ಮಾಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನೂ ನೀಡಲಾಗುತ್ತದೆ' ಎಂದು ಕೆ.ಆರ್.ವೇಣುಗೋಪಾಲ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅ.21ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ಕೆಲವೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ದೊಡ್ಡಬಿದರಕಲ್ಲು, ಸುವರ್ಣ ನಗರ, ದೊಡ್ಡಬಸ್ತಿ, ಭುವನೇಶ್ವರಿ ನಗರ, ಬ್ಯಾಟರಾಯನಪುರ, ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಗೋವಿಂದರಾಜನಗರ, ಚಂದ್ರಾ ಬಡಾವಣೆ, ಕಾಮಾಕ್ಷಿಪಾಳ್ಯ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಮೂಡಲಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಗೌರವಾಧ್ಯಕ್ಷರಾಗಿ ಮನು ಬಳಿಗಾರ್ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಗೌರವಾಧ್ಯಕ್ಷರಾಗಿ ಮನು ಬಳಿಗಾರ್ ಆಯ್ಕೆಯಾಗಿದ್ದಾರೆ.



ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವರ ಅವಧಿಯು ಕಳೆದ ಸೆ.2ರಂದು ಅಂತ್ಯವಾಗಿತ್ತು.

'ಚಿತ್ರೋದ್ಯಮಕ್ಕೆ ಸರಳೀಕೃತ ವ್ಯವಸ್ಥೆ ಜಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರೋದ್ಯಮದ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ಏಕಗವಾಕ್ಷಿಯ ಸರಳೀಕೃತ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಉದ್ಯಮಸ್ನೇಹಿಯಾಗಿ ಕಾರ್ಯನಿರ್ವಹಿಸಲಿದೆ ಎಂದು ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ, ಮಾಹಿತಿ ಮತ್ತು ಪ್ರಸಾರ ಇಲಾಖೆಯ ರಾಜ್ಯ ಸಚಿವ ಡಾ.ಎಲ್.ಮುರುಗನ್ ಹೇಳಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಚಿತ್ರೋದ್ಯಮದ ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿದ ಅವರು, 'ಚಿತ್ರೋದ್ಯಮಕ್ಕೆ ಸಂಬಂಧಿಸಿ ಯಾವುದೇ ಪರವಾನಗಿ ಪ್ರಕ್ರಿಯೆಗಳಿಗೆ ಒಂದೇ ಪೋರ್ಟಲ್ ಇದ್ದು, ಅದರಲ್ಲಿ ಅರ್ಜಿ ಸಲ್ಲಿಸಿದರೆ ವಿಳಂಬವಿಲ್ಲದೇ ಪರವಾನಗಿ ಲಭಿಸುತ್ತವೆ' ಎಂದರು.

ಕನ್ನಡ ಚಿತ್ರರಂಗದಿಂದ ಪ್ರಸಕ್ತ ಸಾಲಿನಲ್ಲಿ 234 ಚಿತ್ರಗಳು ಪ್ರಮಾಣೀಕರಣಕ್ಕಾಗಿ ಬಂದಿವೆ. 226ಕ್ಕೆ ಪ್ರಮಾಣೀಕರಣ ನೀಡಲಾಗಿದೆ. 8 ಚಿತ್ರಗಳು ದಾಖಲೆಗಳ ಕಾರಣಕ್ಕೆ ಬಾಕಿ ಉಳಿದಿವೆ. ಇಲ್ಲಿನ ಚಿತ್ರೋದ್ಯಮದ ಎಲ್ಲ ಬೇಡಿಕೆಗಳನ್ನು ಪರಿಶೀಲಿಸಿ ಸ್ಪಂದಿಸುವುದಾಗಿ ಹೇಳಿದರು.

ಚಿತ್ರೋದ್ಯಮದ ಬೇಡಿಕೆಗಳೇನು?:

- ಚಲನಚಿತ್ರ ಪ್ರಮಾಣೀಕರಣ ಸಂಬಂಧಿಸಿ ಇಲ್ಲಿನ ಸೆನ್ಸಾರ್ ಮಂಡಳಿಯಲ್ಲಿ ಹಿಂದಿ ಚಿತ್ರಗಳ ಪ್ರಮಾಣೀಕರಣ ವ್ಯವಸ್ಥೆಯನ್ನೂ ತರಬೇಕು.
- ಸೆನ್ಸಾರ್ ಮಂಡಳಿಯ ಹೆಚ್ಚುವರಿ ಪ್ರಾದೇಶಿಕ ಕಚೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕು.
- ಚಿತ್ರಗಳಲ್ಲಿ ಪ್ರಾಣಿಗಳ ಬಳಕೆಗೆ ಸಂಬಂಧಿಸಿ ಪ್ರಮಾಣೀಕರಿಸಲು ಸ್ಥಳೀಯ ಪಶುವೈದ್ಯರ ನೇಮಕಾತಿಗೆ ಅವಕಾಶ ಕೊಡಬೇಕು. ಇಲ್ಲಿ ಸಚಿವಾಲಯದ ಕಚೇರಿ ತೆರೆಯಬೇಕು. (ಈಗ ಪ್ರಾಣಿಗಳ ಬಳಕೆ ಸಂಬಂಧಿಸಿ ಪರಿಶೀಲನೆಗೆ) ಸೆನ್ಸಾರ್ ಸಂಬಂಧಿಸಿದ ಕಚೇರಿ ಹರಿಯಾಣದಲ್ಲಿದೆ.
- ಅರ್ಹತೆ ಇಲ್ಲದವರು, ಸಿನಿಮಾ ಬಗ್ಗೆ ಜ್ಞಾನ ಇಲ್ಲದವರು ಸೆನ್ಸಾರ್ ಮಂಡಳಿ ಸದಸ್ಯರಾಗುವುದು ನಿಲ್ಲಬೇಕು.
- ಚಿತ್ರೀಕರಣ ಪರವಾನಗಿ ಶುಲ್ಕವನ್ನು ಇಳಿಸಬೇಕು.
- ದೂರದರ್ಶನದಲ್ಲಿ ಇತರ ವಾಣಿಜ್ಯ ಚಿತ್ರಗಳನ್ನೂ ಪ್ರಸಾರ ಮಾಡಬೇಕು. ಇದರಿಂದ ಟಿವಿ ಹಕ್ಕುಗಳ ಮಾರಾಟದಿಂದ ನಿರ್ಮಾಪಕರಿಗೆ ಆರ್ಥಿಕ ಲಾಭ ಸಿಗಲಿದೆ.
- ಜಿಎಸ್‌ಟಿ ಪಾವತಿ ಸಂಬಂಧಿಸಿ ಸಾಕಷ್ಟು ಸಮಸ್ಯೆಗಳಾಗುತ್ತಿವೆ. ಅದನ್ನು ನಿವಾರಿಸಲು ಸಮಿತಿ ರಚಿಸುವುದಾಗಿ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭರವಸೆ ನೀಡಿದ್ದಾರೆ. ಶೀಘ್ರ ಸಮಿತಿ ರಚಿಸಿ ಸಮಸ್ಯೆ ಬಗೆಹರಿಸಬೇಕು.

ನಟ ಶಿವರಾಜ್‌ಕುಮಾರ್, ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್.ಜೈರಾಜ್, ಕಾರ್ಯದರ್ಶಿ ಎನ್.ಎಂ. ಸುರೇಶ್, ಮಂಡಳಿಯ ಮಾಜಿ ಅಧ್ಯಕ್ಷರಾದ ಕೆ.ವಿ. ಗುಪ್ತಾ, ಚಿನ್ನೇಗೌಡ ಇದ್ದರು.



ಬೆಂಗಳೂರಿನಲ್ಲಿ ಸೋಮವಾರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಡಳಿ ಅಧ್ಯಕ್ಷ ಡಿ.ಆರ್.ಜೈರಾಜ್ (ಎಡದಿಂದ ಮೂರನೆಯವರು) ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ, ಮಾಹಿತಿ ಮತ್ತು ಪ್ರಸಾರ ಇಲಾಖೆಯ ರಾಜ್ಯ ಸಚಿವ ಡಾ.ಎಲ್.ಮುರುಗನ್ (ಎಡದಿಂದ ನಾಲ್ಕನೆಯವರು) ಅವರಿಗೆ ಚಿತ್ರೋದ್ಯಮದ ಅಹವಾಲುಗಳನ್ನು ಸಲ್ಲಿಸಿದರು. (ಎಡದಿಂದ) ನಟ ಶಿವರಾಜ್‌ಕುಮಾರ್, ಮಂಡಳಿಯ ಮಾಜಿ ಅಧ್ಯಕ್ಷರಾದ ಕೆ.ವಿ.ಗುಪ್ತಾ, ಕಾರ್ಯದರ್ಶಿ ಎನ್.ಎಂ. ಸುರೇಶ್, ಮಂಡಳಿಯ ಮಾಜಿ ಅಧ್ಯಕ್ಷ ಚಿನ್ನೇಗೌಡ ಇದ್ದರು ಪ್ರಜಾವಾಣಿ ಚಿತ್ರ

ನಟೇಶ ಹೆಗಡೆಗೆ ಅಂತರರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆಡ್ರೊ' ಚಿತ್ರದ ನಿರ್ದೇಶನಕ್ಕಾಗಿ ನಟೇಶ ಹೆಗಡೆ ಅವರಿಗೆ ಖ್ಯಾತ 'ಪಿಂಗ್ಯಾವ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಲಭಿಸಿದೆ.



ನಟೇಶ ಹೆಗಡೆ

ಬೂಸಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಬಿಎಫ್‌ಐ ಲಂಡನ್ ಚಲನಚಿತ್ರೋತ್ಸವ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ 'ಪೆಡ್ರೊ' ಪ್ರದರ್ಶನ ಕಂಡಿತ್ತು. ಮಂಗಳವಾರ ಚೀನಾದ ಶಾಂಕ್ಸಿ ಪ್ರಾಂತ್ಯದಲ್ಲಿ ಆಯೋಜನೆಗೊಂಡ ಪಿಂಗ್ಯಾವ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 5ನೇ ಆವೃತ್ತಿಯಲ್ಲಿ 'ಕ್ರೌಚಿಂಗ್ ಟೈಗರ್ಸ್' ಸ್ಪರ್ಧಾ ವಿಭಾಗದಲ್ಲಿ, ಖ್ಯಾತ ಇಟಾಲಿಯನ್ ನಿರ್ದೇಶಕ 'ರಾಬರ್ಟೊ ರೊಸಿಲೀನಿ' ಅವರ ಹೆಸರಿನಲ್ಲಿ ನೀಡಲಾಗುವ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ನಟೇಶ ಅವರು ಪಡೆದರು. ಪ್ರಶಸ್ತಿಯ ಜೊತೆಗೆ ₹7.50 ಲಕ್ಷದ ನಗದು ಬಹುಮಾನವನ್ನೂ ಪಡೆದಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಮೂಲದ ನಟೇಶ ಅವರ ಚೊಚ್ಚಲ ನಿರ್ದೇಶನದ ಚಿತ್ರ 'ಪೆಡ್ರೊ'. 'ಪೆಡ್ರೊ' ಮಧ್ಯಮ ವರ್ಗದ ಎಲೆಕ್ಟ್ರಿಷಿಯನ್ ಒಬ್ಬನ ಕಥೆಯಾಗಿದ್ದು, ಈ ಚಿತ್ರವನ್ನು ನಟ, ನಿರ್ದೇಶಕ ರಿಷಬ್ ಶೆಟ್ಟಿ ನಿರ್ಮಾಣ ಮಾಡಿದ್ದಾರೆ. ನಟ ರಾಜ್ ಬಿ.ಶೆಟ್ಟಿ ಅವರೂ ಈ ಚಿತ್ರದಲ್ಲಿ ಬಣ್ಣಹಚ್ಚಿದ್ದು, ಮುಖ್ಯಭೂಮಿಕೆಯಲ್ಲಿ ನಟೇಶ ಅವರ ತಂದೆ ಗೋಪಾಲಕೃಷ್ಣ ಹೆಗಡೆಯವರೇ ನಟಿಸಿದ್ದಾರೆ.

'ಈ ಪ್ರಶಸ್ತಿಯನ್ನು ನಾನು ತಂದೆ, ನಟ ಗೋಪಾಲ್ ಹೆಗಡೆ ಹಾಗೂ ತಾಯಿಗೆ ಅರ್ಪಿಸುತ್ತೇನೆ. ಸದಾ ನನ್ನ ಜೊತೆಯಾಗಿದ್ದ ರಿಷಬ್ ಶೆಟ್ಟಿ, ರಾಜ್ ಬಿ. ಶೆಟ್ಟಿ ಅವರಿಗೆ ಧನ್ಯವಾದ' ಎಂದು ನಟೇಶ ಅವರು ಹೇಳಿದ್ದಾರೆ. ನಟರಾದ ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ ನಟೇಶ ಅವರಿಗೆ ಅಭಿನಂದಿಸಿದ್ದಾರೆ.

ನಗರದಲ್ಲಿ ಇಂದು

ಸಪ್ನ ಬುಕ್ ಹೌಸ್ ನೂತನ ಶಾಖೆ ಉದ್ಘಾಟನೆ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಸಾನ್ನಿಧ್ಯ–ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ–ಸಾಹಿತಿ ಹಂಪ ನಾಗರಾಜಯ್ಯ, ಅತಿಥಿಗಳು–ತೋಟಗಾರಿಕೆ ಸಚಿವ ಮುನಿರತ್ನ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸ್ಥಳ–ಜೆ.ಎನ್.ರಸ್ತೆ, ಚನ್ನಸಂದ್ರ, ರಾಜರಾಜೇಶ್ವರಿ ನಗರ, ಬೆಳಿಗ್ಗೆ 10.30

ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ವಾಲ್ಮೀಕಿ ಪ್ರಶಸ್ತಿ ಪ್ರದಾನ: ಉದ್ಘಾಟನೆ ಮತ್ತು ಪ್ರತಿಮೆಗೆ ಮಾಲಾರ್ಪಣೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ–ಪ್ರಸನ್ನಾನಂದಪುರಿ ಸ್ವಾಮೀಜಿ, ಪುಷ್ಪಾರ್ಚನೆ–ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು, ಆಯೋಜನೆ–ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

ಪುರಂದರದಾಸರ ಸಂಗೀತ ಆರಾಧನೆ: ಉದ್ಘಾಟನೆ–ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ಅತಿಥಿಗಳು–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಆರಾಧನಾ ಸಮಿತಿಯ ಅಧ್ಯಕ್ಷ ಟಿ.ಎಸ್. ನಾಗಾಭರಣ, ಪೋಷಕ ವಿದ್ಯಾಭೂಷಣ್, ಆಯೋಜನೆ–ಸಂತ ಪುರಂದರದಾಸರ ಆರಾಧನಾ ಸಮಿತಿ, ಸಹಯೋಗ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ಭವನ, ಮಲ್ಲತ್ತಹಳ್ಳಿ, ಸಂಜೆ 4

ರಂಗಗೀತೆ, ರಂಗಗೌರವ ಹಾಗೂ ಪ್ರತಿಭಾ ಪುರಸ್ಕಾರ: ಅಧ್ಯಕ್ಷತೆ–ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಅತಿಥಿಗಳು–ರಾಧಾಕೃಷ್ಣ ಹೆಗಡೆ, ಆರ್.ನರೇಂದ್ರಬಾಬು, ಕಾನ್ಸೆಪ್ಟಾ ಫರ್ನಾಂಡಿಸ್, ಟೆಲಿಕಾಂ ದತ್ತಾತ್ರೇಯ, ರಂಗಗೌರವ–ಎಚ್.ಎಲ್.ಪುಷ್ಪ, ಎನ್. ರವಿಕಾಂತ್, ಆಯೋಜನೆ–ರಂಗಚಂದಿರ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 5.30

20 ವರ್ಷಗಳ ಹಿಂದಿನ ಪ್ರಕರಣಕ್ಕೆ ಮರುಜೀವ • ನಿವೃತ್ತ ಉಪ ನಿರ್ದೇಶಕನ ವಿರುದ್ಧ ಎಫ್‌ಐಆರ್

ಕಳಪೆ ಬೆಂಚು: ಸರ್ಕಾರಕ್ಕೆ ₹ 28.66 ಲಕ್ಷ ವಂಚನೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 20 ವರ್ಷಗಳ ಹಿಂದೆ ಕಳಪೆ ಮಟ್ಟದ ಬೆಂಚುಗಳನ್ನು ಪೂರೈಸಿ, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ₹ 28.66 ಲಕ್ಷ ನಷ್ಟವನ್ನುಂಟು ಮಾಡಿದ್ದ ಪ್ರಕರಣಕ್ಕೆ ಮರುಜೀವ ಸಿಕ್ಕಿದೆ.

ಗುತ್ತಿಗೆದಾರರ ಜೊತೆ ಸೇರಿ ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿದ್ದ ಆರೋಪದಡಿ ನಿವೃತ್ತ ಉಪನಿರ್ದೇಶಕ ಕೆ. ತೀರ್ಥಪ್ಪ, ಇತರರ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆರೋಪಿ ತೀರ್ಥಪ್ಪ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಕೈಗಾರಿಕಾ ವಿಭಾಗದ ಖಾದಿ ಗ್ರಾಮೋದ್ಯೋಗದ ಉಪ ನಿರ್ದೇಶಕರಾಗಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಿಎಸ್‌ಎಂಎಸ್ (ಕೈಗಾರಿಕಾ ಇಲಾಖೆಯ ಅಂಗ ಸಂಸ್ಥೆ) ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ಈ ಅಕ್ರಮ ನಡೆದಿರುವುದಾಗಿ ಆರೋಪಿಸಲಾಗಿದೆ.

'ಅಕ್ರಮದ ಬಗ್ಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಸ್ತುತ ಉಪ ನಿರ್ದೇಶಕ (ಆರ್.ಐ) ಮೊಹಮ್ಮದ್ ರಫೀಕ್ ಉರ್ ರಹಮಾನ್ ದೂರು ನೀಡಿದ್ದಾರೆ. ನಂಬಿಕೆ ದ್ರೋಹ (ಐಪಿಸಿ 409) ಹಾಗೂ ವಂಚನೆ (ಐಪಿಸಿ 420) ಆರೋಪದಡಿ ಕೆ. ತೀರ್ಥಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಕಬ್ಬನ್ ಪಾರ್ಕ್ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ಐಪಿಪಿ' ಯೋಜನೆಯಡಿ ಅಕ್ರಮ: 'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಸ್ಪತ್ರೆ ಹಾಗೂ ಕಚೇರಿಗಳಿಗೆ ಐಪಿಪಿ ಯೋಜನೆಯಡಿ ಸಾಗುವಾನಿ ಮರದ ಬೆಂಚುಗಳನ್ನು ಪೂರೈಸಲು 2000ರಲ್ಲಿ ಆದೇಶ ಹೊರಡಿಸಲಾಗಿತ್ತು. ಇದೇ ಯೋಜನೆಯಲ್ಲಿ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

'ಆದೇಶ ಹೊರಡಿಸಿದ್ದ 2000–2002ರ ಅವಧಿಯಲ್ಲಿ ಕೆ. ತೀರ್ಥಪ್ಪ ಅವರೇ ಡಿಎಸ್‌ಎಂಎಸ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಗುಣಮಟ್ಟದ ಬೆಂಚುಗಳನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ತೀರ್ಥಪ್ಪ ಅವರಿಗೆ ವಹಿಸಲಾಗಿತ್ತು.'

'ಟೆಂಡರ್ ಪ್ರಕ್ರಿಯೆ ನಡೆಸಿದ್ದ ತೀರ್ಥಪ್ಪ, ಶಿವಮೊಗ್ಗದ ವಿನಾಯಕ್ ಇಂಡಸ್ಟ್ರೀ ಕಡೆಯಿಂದ 1298 ಬೆಂಚುಗಳು, ರಾಜು ಇಂಡಸ್ಟ್ರೀ ಕಡೆಯಿಂದ 702 ಬೆಂಚುಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸರಬರಾಜು ಮಾಡಿಸಿದ್ದರು. ಕೆಲ ತಿಂಗಳಿನಲ್ಲೇ ಬೆಂಚುಗಳು ಹಾಳಾಗಿದ್ದವು. ಪರಿಶೀಲನೆ ನಡೆಸಿದಾಗ, ಕಳಪೆ ಮಟ್ಟದ ಬೆಂಚುಗಳು ಪೂರೈಕೆಯಾಗಿದ್ದು ಅಧಿಕಾರಿಗಳ ಗಮನಕ್ಕೆ ಬಂದಿತ್ತು' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

'ಆಂತರಿಕ ತನಿಖೆ ನಡೆಸಿದ್ದ ಹಿರಿಯ ಅಧಿಕಾರಿಗಳ ಸಮಿತಿ, ತೀರ್ಥಪ್ಪ ಅವರೇ ತಯಾರಕರ ಜೊತೆ ಕೈಜೋಡಿಸಿ ಕಳಪೆ ಮಟ್ಟದ ಬೆಂಚುಗಳನ್ನು ಸರಬರಾಜು ಮಾಡಿಸಿದ್ದು ಗೊತ್ತಾಗಿತ್ತು. ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸಮಿತಿ ಹೇಳಿತ್ತು. ಆರಂಭದಲ್ಲಿ ಶೇಷಾದ್ರಿಪುರ ಠಾಣೆಗೆ ದೂರು ನೀಡಲಾಗಿತ್ತು. ಆದರೆ, ಯಾವುದೇ ತನಿಖೆ ನಡೆದಿರಲಿಲ್ಲ. ಈಗ ಪುನಃ 20 ವರ್ಷಗಳ ನಂತರ ದೂರು ನೀಡಲಾಗಿದೆ' ಎಂದೂ ಹೇಳಿವೆ.

ದಾಖಲೆ ಕೇಳಿದ ಪೊಲೀಸರು: 'ವಂಚನೆ ಬಗ್ಗೆ ಎಫ್‌ಐಆರ್ ಮಾತ್ರ ದಾಖಲಿಸಿಕೊಳ್ಳಲಾಗಿದೆ. ಸೂಕ್ತ ದಾಖಲೆಗಳನ್ನು ನೀಡುವಂತೆ ದೂರುದಾರರನ್ನು ಕೋರಲಾಗಿದೆ' ಎಂದೂ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

> ಅಕ್ರಮದ ಬಗ್ಗೆ ಸರ್ಕಾರದ ನಿರ್ದೇಶನದಂತೆ ಪೊಲೀಸರಿಗೆ ದೂರು ನೀಡಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಪೊಲೀಸರಿಗೆ ಸದ್ಯದಲ್ಲೇ ಒದಗಿಸಲಾಗುವುದು
>
> **ಮೊಹಮ್ಮದ್ ರಫೀಕ್ ಉರ್ ರಹಮಾನ್,** ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪ ನಿರ್ದೇಶಕ (ಆರ್.ಐ)

ಚಿಕ್ಕಪೇಟೆ; ವೃದ್ಧರ ₹ 1.25 ಲಕ್ಷ ಸುಲಿಗೆ

ಬೆಂಗಳೂರು: ಚಿಕ್ಕಪೇಟೆಯಲ್ಲಿ ಸೀರೆ ಖರೀದಿಗೆ ಬಂದಿದ್ದ ಟಿ. ದಾಸರಹಳ್ಳಿ ನಿವಾಸಿಯಾದ ವೃದ್ಧರೊಬ್ಬರನ್ನು ಸುತ್ತುವರೆದು ಬೆದರಿಸಿದ್ದ ನಾಲ್ವರು ದುಷ್ಕರ್ಮಿಗಳು, ₹ 1.25 ಲಕ್ಷ ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದಾರೆ. ಈ ಬಗ್ಗೆ ಸಿಟಿ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಪ್‌ನಲ್ಲಿ ಮುಳುಗಿ ಬಾಲಕ ಸಾವು

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದ ನೀರಿನ ಸಂಪ್‌ನಲ್ಲಿ ಮುಳುಗಿ ಚಂದ್ರು (14) ಎಂಬಾತ ಮೃತಪಟ್ಟಿದ್ದು, ಅದೇ ಸಂಪಿನಲ್ಲಿ ಬಿದ್ದಿದ್ದ ಮತ್ತೊಬ್ಬ ಬಾಲಕನನ್ನು ರಕ್ಷಿಸಲಾಗಿದೆ.

ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯ ಎಚ್.ಬಿ.ಆರ್ ಬಡಾವಣೆಯಲ್ಲಿ ಮಂಗಳವಾರ ಈ ಅವಘಡ ಸಂಭವಿಸಿದೆ.

ಯಂತ್ರ ಮೈ ಮೇಲೆ ಬಿದ್ದು ಸಾವು

ಬೆಂಗಳೂರು: ಗಂಗಮ್ಮನಗುಡಿ ಠಾಣೆ ವ್ಯಾಪ್ತಿಯ 'ಎಂ.ಕೆ. ಎಂಜಿನಿಯರ್ಸ್' ಕಾರ್ಖಾನೆಯಲ್ಲಿ ಯಂತ್ರದ ಭಾಗ ಮೈ ಮೇಲೆ ಬಿದ್ದು ನಾಗರಾಜು (40) ಎಂಬುವರು ಮೃತಪಟ್ಟಿದ್ದಾರೆ. 'ನಾಗಸಂದ್ರದ ಮಂಜುನಾಥನಗರ ನಿವಾಸಿ ನಾಗರಾಜು, ಲಾರಿ ಚಾಲಕರಾಗಿದ್ದರು. ಅ. 15ರಂದು ಕಾರ್ಖಾನೆಯಲ್ಲಿ ಯಂತ್ರ ಸಾಗಿಸುವಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಡಾ. ಗೀತಾ ಮುರಳೀಧರ

ಬೆಂಗಳೂರು: ನಗರದ ಖ್ಯಾತ ಪ್ರಸೂತಿ ತಜ್ಞೆ ಡಾ. ಗೀತಾ ಮುರಳೀಧರ (71) ಅವರು ಸೋಮವಾರ ಸಂಜೆ ನಿಧನರಾದರು.



ವಯೋಸಹಜ ಅನಾರೋಗ್ಯಕ್ಕೆ ಒಳಗಾಗಿದ್ದರು, ಅವರಿಗೆ ಪತಿ, ಇಬ್ಬರು ಮಕ್ಕಳು ಇದ್ದಾರೆ. ಗುರುವಾರ ಅಂತ್ಯಸಂಸ್ಕಾರ ನಡೆಯಲಿದೆ.

ಕೆ.ಜಿ.ಎಫ್‌ನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವೆ ಆರಂಭಿಸಿದರು, ನಿಮ್ಹಾನ್ಸ್, ಕೆ.ಸಿ. ಜನರಲ್ ಸೇರಿ, ವಿವಿಧ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿದ್ದರು.

ಪ್ರಶಸ್ತಿಗಳಿಗೆ ಆಯ್ಕೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯಿಂದ ನೀಡಲಾಗುವ ಈ ಸಾಲಿನ 'ಕನ್ನಡ ಕಟ್ಟಾಳು' ಪ್ರಶಸ್ತಿಗೆ ರಾ.ತಿಮ್ಮೇಗೌಡ ಹಾಗೂ 'ನಿಸ್ಸೀಮ ಕನ್ನಡತಿ' ಪ್ರಶಸ್ತಿಗೆ ಮಂಜುಳಾ ಶಿವಾನಂದ ಅವರನ್ನು ಆಯ್ಕೆ ಮಾಡಲಾಗಿದೆ.

'ಇತ್ತೀಚೆಗೆ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಲಾಯಿತು. ಅ.31ರಂದು ಸಂಜೆ 5.30ಕ್ಕೆ ಗಾಂಧಿಭವನದಲ್ಲಿ ನಡೆಯಲಿರುವ ಸಮಿತಿಯ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ತಿಳಿಸಿದ್ದಾರೆ.

'ಅಂದು ಮಧ್ಯಾಹ್ನ 2 ಗಂಟೆಗೆ ಜಾನಪದ ಗೀತ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ. ಆಸಕ್ತರು 9739001410 ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು' ಎಂದು ಪ್ರಕಟಣೆ ತಿಳಿಸಿದೆ.

ಐಆರ್‌ಎಸ್‌ಡಿಸಿ ಮುಚ್ಚಲು ರೈಲ್ವೆ ಸಚಿವಾಲಯ ನಿರ್ಧಾರ

ಬೆಂಗಳೂರು: ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ 'ರೈಲ್ ಆರ್ಕೇಡ್' ನಿರ್ಮಿಸಲು ತಯಾರಿ ನಡೆಸುತ್ತಿದ್ದ ಭಾರತೀಯ ರೈಲು ನಿಲ್ದಾಣಗಳ ಅಭಿವೃದ್ಧಿ ನಿಗಮವನ್ನೇ (ಐಆರ್‌ಎಸ್‌ಡಿಸಿ) ಮುಚ್ಚಲು ರೈಲ್ವೆ ಇಲಾಖೆ ನಿರ್ಧರಿಸಿದೆ.

ಇದರಿಂದಾಗಿ ಈ ರೈಲು ನಿಲ್ದಾಣ ಮತ್ತೆ ನೈರುತ್ಯ ರೈಲ್ವೆ ವ್ಯಾಪ್ತಿಗೆ ಬಂದಿದ್ದು, ನೈರುತ್ಯ ರೈಲ್ವೆ ಪ್ರಯಾಣಿಕರ ಪರ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ರೈಲ್ವೆ ಹೋರಾಟಗಾರರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವಾಲಯದ ಶಿಫಾರಸಿನಂತೆ ರೈಲ್ವೆ ಸಚಿವಾಲಯ ಈ ನಿರ್ಧಾರ ಕೈಗೊಂಡಿದ್ದು, ಈ ಸಂಬಂಧ ರೈಲ್ವೆ ಮಂಡಳಿ ಸೋಮವಾರ ಆದೇಶ ಹೊರಡಿಸಿದೆ.

ಐಆರ್‌ಎಸ್‌ಡಿಸಿ ನಿರ್ವಹಿಸುತ್ತಿದ್ದ ಎಲ್ಲ ರೈಲು ನಿಲ್ದಾಣಗಳನ್ನು ಆಯಾ ರೈಲ್ವೆ ವಲಯಗಳಿಗೆ ಹಸ್ತಾಂತರಿಸಲು ಆದೇಶದಲ್ಲಿ ತಿಳಿಸಿದೆ. ಆ ನಿಗಮ ಆರಂಭಿಸಿದ್ದ ಯೋಜನೆಗಳ ಎಲ್ಲ ದಾಖಲೆ ಪತ್ರಗಳನ್ನೂ ಹಸ್ತಾಂತರಿಸುವಂತೆ ತಿಳಿಸಿದೆ.

'ರೈಲ್ವೆ ಸಚಿವಾಲಯದ ಈ ನಿರ್ಧಾರ ಸರಿಯಾಗಿದೆ. ನೈರುತ್ಯ ರೈಲ್ವೆ ಅಧಿಕಾರಿಗಳು ವಾಣಿಜ್ಯ ಉದ್ದೇಶವನ್ನು ಗಮನದಲ್ಲಿ ಇಟ್ಟುಕೊಳ್ಳದೆ ಪ್ರಯಾಣಿಕರ ಪರವಾದ ಆಲೋಚನೆಗಳನ್ನು ಮಾಡಲಿ' ಎಂಬುದು ರೈಲ್ವೆ ಹೋರಾಟಗಾರರ ಅಭಿಪ್ರಾಯ.

'ಪ್ಲಾಟ್‌ಫಾರಂ ಟಿಕೆಟ್ ದರ ಹೆಚ್ಚಳ, ಪಾರ್ಕಿಂಗ್ ಶುಲ್ಕ ಹೆಚ್ಚಳ ರೀತಿಯ ಹೊರೆಗಳು ಕಡಿಮೆ ಆಗಲಿವೆ' ಎಂದು ರೈಲ್ವೆ ಹೋರಾಟಗಾರ ಕೃಷ್ಣ ಪ್ರಸಾದ್ ಅಭಿಪ್ರಾಯಪಟ್ಟರು.

ಮಾತು ತಪ್ಪಿದ ಸರ್ಕಾರ: 5 ವರ್ಷ ಕಳೆದರೂ ಕೈಸೇರದ ಹಣ

ಶಸ್ತ್ರ ತ್ಯಜಿಸಿ ನಾಡಿಗೆ ಬಂದರೂ ತಪ್ಪದ ಪಾಡು

• ಜಿ.ಶಿವಕುಮಾರ

ಬೆಂಗಳೂರು: ಎಲ್ಲರಂತೆ ನೆಮ್ಮದಿಯ ಜೀವನ ನಡೆಸಬೇಕೆಂಬ ಆಸೆಯಿಂದ ಅವರೆಲ್ಲಾ ಶಸ್ತ್ರಾಸ್ತ್ರ ತ್ಯಜಿಸಿದ್ದರು. ಸರ್ಕಾರದ ಕರೆಗೆ ಓಗೊಟ್ಟು ಕಾಡಿನಿಂದ ನಾಡಿಗೆ ಮರಳಿದ್ದರು. ಹಾಗೆ ಬಂದವರ ಕನಸುಗಳೆಲ್ಲಾ ಒಂದೊಂದಾಗಿಯೇ ಕಮರುತ್ತಿವೆ. ನ್ಯಾಯಾಲಯಕ್ಕೆ ಅಲೆದು ಅಲೆದು ಹೈರಾಣಾಗಿರುವ ಅವರಿಗೆ ಈಗ ದಾರಿಯೇ ಕಾಣದಾಗಿದೆ.

ನಕ್ಸಲ್ ಚಟುವಟಿಕೆಗಳನ್ನು ತೊರೆದು ಸಮಾಜದ ಮುಖ್ಯವಾಹಿನಿಗೆ ಮರಳಿದ್ದ ಪರಶುರಾಮ್, ಕಾವೇರಿ, ಕನ್ಯಾಕುಮಾರಿ ಹಾಗೂ ಜ್ಞಾನದೇವ್ ಅವರು ಪಡುತ್ತಿರುವ ನಿತ್ಯದ ಬವಣೆ ಇದು.

ಒಂದೂವರೆ ದಶಕಕ್ಕೂ ಹೆಚ್ಚು ಕಾಲ ಭೂಗತರಾಗಿ ನಕ್ಸಲ್ ಚಟುವಟಿಕೆ ನಡೆಸುತ್ತಿದ್ದ ಪರಶುರಾಮ್ ಹಾಗೂ ಕಾವೇರಿ 2016ರ ನವೆಂಬರ್‌ನಲ್ಲಿ ಚಿಕ್ಕಮಗಳೂರು ಜಿಲ್ಲಾಡಳಿತದ ಎದುರು ಶರಣಾಗಿದ್ದರು. ಕನ್ಯಾಕುಮಾರಿ ಹಾಗೂ ಜ್ಞಾನದೇವ್ 2017ರ ಜೂನ್‌ನಲ್ಲಿ ಮುಖ್ಯವಾಹಿನಿಗೆ ಬಂದಿದ್ದರು.

'ಸಮಾಜದಲ್ಲಿ ಗೌರವಯುತ ಬದುಕು ನಡೆಸಲು ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವುದಾಗಿ ಸರ್ಕಾರ ಹೇಳಿತ್ತು. ನಮ್ಮ ಮೇಲಿನ ಎಲ್ಲಾ ಪ್ರಕರಣಗಳನ್ನು ಕೈಬಿಡುವ ಭರವಸೆಯನ್ನೂ ನೀಡಿತ್ತು. ಈವರೆಗೂ ಅದ್ಯಾವುದೂ ಈಡೇರಿಲ್ಲ. ಐದು ವರ್ಷ ಕಳೆದರೂ ಒಂದೇ ಒಂದು ಪ್ರಕರಣವನ್ನೂ ಕೈಬಿಟ್ಟಿಲ್ಲ. ನ್ಯಾಯಾಲಯಕ್ಕೆ ಅಲೆದು ಸಾಕಾಗಿ ಹೋಗಿದೆ' ಎಂದು ಜ್ಞಾನದೇವ್ ಅಳಲು ತೋಡಿಕೊಂಡರು.

'ಪುನರ್ವಸತಿ ಕಲ್ಪಿಸಿಕೊಡುವುದಾಗಿ ಹೇಳಿದ್ದ ಸರ್ಕಾರ ಅದನ್ನೂ ಮರೆತಿದೆ. ನನ್ನ ಪತ್ನಿ ಪರಪ್ಪನ ಅಗ್ರಹಾರ ಜೈಲಿನಲ್ಲೇ ಇದ್ದಾಳೆ. ಆಕೆಯ ವಿರುದ್ಧ ರಾಜ್ಯದಲ್ಲಿ 33, ಕೇರಳದ ವಿವಿಧ ಜಿಲ್ಲೆಗಳಲ್ಲಿ 30 ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳನ್ನು ಇತ್ಯರ್ಥಪಡಿಸಿಕೊಳ್ಳುವುದಕ್ಕಾಗಿ ವಕೀಲರನ್ನು ನೇಮಿಸಬೇಕು. ಅವರಿಗೆ ಸಾವಿರಾರು ರೂಪಾಯಿ ಪಾವತಿಸಬೇಕು. ಅದಕ್ಕಾಗಿಯೇ ಸಾಲ ಮಾಡಿದ್ದೇನೆ. ಅದನ್ನು ಹೇಗೆ ತೀರಿಸಲಿ ಎಂಬ ಚಿಂತೆ ಕಾಡುತ್ತಿದೆ' ಎಂದು ಗದ್ಗದಿತರಾದರು.

'ಮಗನ ಹೆಸರು ಗೆಲುವು. ನಾವು ಶರಣಾಗುವಾಗ ಆತನ ವಯಸ್ಸು ಆರು ತಿಂಗಳು. ಹೀಗಾಗಿ ಪತ್ನಿಯ ಜೊತೆ ಆತನನ್ನೂ ಜೈಲಿಗೆ ಕಳುಹಿಸಲಾಗಿತ್ತು. ಈಗ ಐದು ವರ್ಷ ಪೂರ್ಣಗೊಂಡಿದೆ. ಶಾಲೆಗೆ ಸೇರಿಸಬೇಕು ಮನೆಗೆ ಕಳಿಸಿಕೊಡಿ ಎಂದರೂ ಜೈಲು ಅಧಿಕಾರಿಗಳು ಒಪ್ಪುತ್ತಿಲ್ಲ. ಶರಣಾದವರಿಗೆ ತಲಾ ₹5 ಲಕ್ಷ ನೀಡುವುದಾಗಿ ಸರ್ಕಾರ ಹೇಳಿತ್ತು. ಆ ಪೈಕಿ ₹2.5 ಲಕ್ಷದ ಚೆಕ್ ಮಾತ್ರ ನೀಡಿದರು. ಆ ಮೊತ್ತ ವಕೀಲರಿಗೆ ಕೊಡುವುದಕ್ಕೇ ಸರಿಯಾಯಿತು. ಬಾಕಿ ಇದ್ದ ₹2.5 ಲಕ್ಷ ಈವರೆಗೂ ಕೈಸೇರಿಲ್ಲ. ಎಲ್ಲಾ ಪ್ರಕರಣಗಳಲ್ಲೂ ಜಾಮೀನು ಪಡೆಯಬೇಕೆಂದರೆ ಕನಿಷ್ಠ ₹ 10 ಲಕ್ಷ ಬೇಕು. ಅಷ್ಟು ಹಣ ಹೊಂದಿಸುವುದಾದರೂ ಹೇಗೆ' ಎಂದು ಪ್ರಶ್ನಿಸಿದರು.

'ಕಾಡಿನಲ್ಲಿದ್ದಾಗಲೇ ಚೆನ್ನಾಗಿತ್ತು'

'ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ಶರಣಾಗಿದ್ದ ನಕ್ಸಲರ ಪುನರ್ವಸತಿಗಾಗಿ ಸಮಿತಿಯೊಂದನ್ನು ರಚಿಸಿದ್ದರು. ಗೌರಿ ಲಂಕೇಶ್ ಅವರ ಹತ್ಯೆ ಹಾಗೂ ಎ.ಕೆ.ಸುಬ್ಬಯ್ಯ ಮತ್ತು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರ ನಿಧನದ ಬಳಿಕ ಆ ಸಮಿತಿ ನಿಷ್ಕ್ರಿಯವಾಗಿದೆ. ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಅವರು ನಕ್ಸಲರ ಪುನರ್ವಸತಿಗಾಗಿ ₹20 ಲಕ್ಷ ಬಿಡುಗಡೆ ಮಾಡಿದ್ದರು. ಆ ಹಣ ಇದುವರೆಗೂ ನಮ್ಮ ಕೈಸೇರಿಲ್ಲ' ಎಂದು ಪರಶುರಾಮ್ ಹೇಳಿದರು. 'ನಮ್ಮ ಬದುಕು ಇಷ್ಟು ಶೋಚನೀಯ ಸ್ಥಿತಿಗೆ ತಲುಪುತ್ತದೆ ಎಂದು ಕನಸಿನಲ್ಲೂ ಭಾವಿಸಿರಲಿಲ್ಲ. ದೊರೆಸ್ವಾಮಿ ಅವರು ನಮ್ಮೊಂದಿಗೆ ಮಾತನಾಡಿ ಮನವೊಲಿಸಿದ ಬಳಿಕ ಶರಣಾಗತಿಗೆ ಒಪ್ಪಿದ್ದೆವು. ಕಾಡಿನಲ್ಲಿದ್ದಾಗಲೇ ನಮ್ಮ ಬದುಕು ಎಷ್ಟೋ ಚೆನ್ನಾಗಿತ್ತು. ನಗರಕ್ಕೆ ಬಂದು ಸಾಲಗಾರರಾಗಿ ಬಿಟ್ಟಿದ್ದೇವೆ. ಮೂರು ತಿಂಗಳಿಂದ ಮನೆ ಬಾಡಿಗೆ ಕಟ್ಟಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೂ ಹಣ ಇಲ್ಲದಂತಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.


ಗೌರಿಬಿದನೂರು ತನಕ ಸಂಚಾರ ಆರಂಭಿಸಲು ಒತ್ತಾಯ

ಹಿಂದೂಪುರಕ್ಕೆ ಮೆಮು ರೈಲು ರದ್ದು: ತೊಂದರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ–ಪೆನುಕೊಂಡ ವಿಭಾಗಗಳಲ್ಲಿ ಜೋಡಿ ಮಾರ್ಗಕ್ಕೆ ಹಿಂದೂಪುರ ಮತ್ತು ದೇವರಪಲ್ಲಿ ನಿಲ್ದಾಣಗಳಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದು, 46 ದಿನಗಳ ಕಾಲ ಈ ಮಾರ್ಗದಲ್ಲಿ ಎರಡು ಮೆಮು ರೈಲುಗಳ ಸಂಚಾರವನ್ನು ನೈರುತ್ಯ ರೈಲ್ವೆ ರದ್ದುಗೊಳಿಸಿದೆ.

ಯಶವಂತಪುರದಿಂದ ಸಂಜೆ 6.10ಕ್ಕೆ ಹೊರಟು ರಾತ್ರಿ ಹಿಂದೂಪುರದಲ್ಲೇ ತಂಗಿದ್ದು, ಬೆಳಿಗ್ಗೆ ಅಲ್ಲಿಂದ ಹೊರಟು 9.30ರ ವೇಳೆಗೆ ಯಶವಂತಪುರಕ್ಕೆ ಬರುತ್ತಿತ್ತು. ಇನ್ನೊಂದೆಡೆ, ಮೆಮು ರೈಲು ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಬೆಳಿಗ್ಗೆ 7.20ಕ್ಕೆ ಹೊರಟು ಚನ್ನಸಂದ್ರ, ಬೈಯಪ್ಪನಹಳ್ಳಿ, ಯಲಹಂಕ ಮಾರ್ಗದಲ್ಲಿ ಧರ್ಮಾವರಂಗೆ ಹೋಗಿ ವಾಪಸ್ ಅದೇ ಮಾರ್ಗದಲ್ಲಿ ಬರುತ್ತಿತ್ತು.



ಯಶವಂತಪುರ–ಹಿಂದೂಪುರ ರೈಲಿನ ಪ್ರಯಾಣ ದರ ₹25 ಇದ್ದರೆ, ಕಂಟೋನ್ಮೆಂಟ್–ಧರ್ಮಾವರಂ ರೈಲಿನ ಪ್ರಯಾಣ ದರ ₹34 ಇತ್ತು. ಎಲ್ಲ ನಿಲ್ದಾಣಗಳಲ್ಲೂ ಈ ರೈಲು ನಿಲುಗಡೆ ಮಾಡುತ್ತಿದ್ದರಿಂದ ₹10 ಮತ್ತು ₹20 ದರದಲ್ಲಿ ಬೆಂಗಳೂರು ತಲುಪಲು ಪ್ರಯಾಣಿಕರಿಗೆ ಅದರಲ್ಲೂ ಕಾರ್ಮಿಕರಿಗೆ ಅನುಕೂಲ ಆಗುತ್ತಿತ್ತು.

ಈ ಎರಡೂ ರೈಲುಗಳ ಸಂಚಾರವನ್ನು 46 ದಿನಗಳ ಮಟ್ಟಿಗೆ ರದ್ದುಗೊಳಿಸಲಾಗಿದೆ. ಹಿಂದೂಪುರಕ್ಕೆ ಸಾಮಾನ್ಯ ಸಾರಿಗೆ ಬಸ್‌ನಲ್ಲಿ ₹100 ದರ ಇದ್ದು, ರೈಲು ಪ್ರಯಾಣಕ್ಕೆ ಹೋಲಿಸಿದರೆ ನಾಲ್ಕು ಪಟ್ಟು ಹೆಚ್ಚಿನ ದರ ನೀಡಬೇಕಾದ ಹೊರೆ ಪ್ರಯಾಣಿಕರ ಮೇಲೆ ಬಿದ್ದಿದೆ.

'ಹಿಂದೂಪುರ ಮತ್ತು ದೇವರಪಲ್ಲಿಯಲ್ಲಿ ಕಾಮಗಾರಿ ನಿರ್ವಹಿಸಲು ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆ ಹೇಳುತ್ತಿದೆ. ಆದರೆ, ಗೌರಿಬಿದನೂರು ತನಕವಾದರೂ ಈ ರೈಲುಗಳು ಹೋಗಿ ವಾಪಸ್ ಬರುವಂತೆ ಮಾಡಬೇಕು' ಎಂಬುದು ರೈಲ್ವೆ ಪ್ರಯಾಣಿಕರ ಒತ್ತಾಯ.

'ಗೌರಿಬಿದನೂರಿನಲ್ಲಿ ಲೊಕೊಪೈಲೆಟ್ ಮತ್ತು ಇತರ ಸಿಬ್ಬಂದಿ ತಂಗಲು ರನ್ನಿಂಗ್ ರೂಂ ಇಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ, ಪ್ರಯಾಣಿಕರ ಹಿತದೃಷ್ಟಿಯಿಂದ ರೈಲು ಸಂಚಾರ ಇರಬೇಕು. ಸಾಧ್ಯವಾಗದಿದ್ದರೆ ಹಗಲು ವೇಳೆಯಲ್ಲಾದರೂ ಈ ರೈಲುಗಳು ಸಂಚಾರ ಆರಂಭಿಸುವುದು ಸೂಕ್ತ' ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ಹೇಳಿದರು.

'ಹಿಂದೂಪುರ ಮತ್ತು ದೇವರಪಲ್ಲಿ ಯಾರ್ಡ್‌ನಲ್ಲಿ ನಡೆಯುತ್ತಿರುವ ಕಾಮಗಾರಿ ಒಂದೂವರೆ ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಅಲ್ಲಿಯ ತನಕ ಪ್ರಯಾಣಿಕರು ತೊಂದರೆ ಸಹಿಸಿಕೊಳ್ಳಬೇಕು. ಒಮ್ಮೆ ಕಾಮಗಾರಿ ಮುಗಿದರೆ ರೈಲುಗಳ ವೇಗ ಹೆಚ್ಚಳಕ್ಕೆ ಅನುಕೂಲ ಆಗಲಿದೆ' ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಹೇಳುತ್ತಾರೆ.

'ಗೌರಿಬಿದನೂರು ನಿಲ್ದಾಣದ ತನಕ ಹೋಗಿ ವಾಪಸ್ ಬರಲು ತಾಂತ್ರಿಕವಾಗಿ ಸಾಧ್ಯತೆ ಇಲ್ಲ' ಎಂದು ಹೇಳಿದರು.

ಪುನರುಜ್ಜೀವನಗೊಂಡು ವರ್ಷದೊಳಗೆ ತುಂಬಿದ ಜಲಕಾಯ

ಕೋಡಿ ಹರಿದ ಕನ್ನಮಂಗಲ ಕೆರೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕನ್ನಮಂಗಲ ಕೆರೆಯ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ವರ್ಷದೊಳಗೆ ಈ ಕೆರೆಯು ಕೋಡಿ ಹರಿದಿದೆ. ತುಂಬಿ ಹರಿಯುತ್ತಿರುವ ಈ ಕೆರೆಗೆ ಬಾಗಿನ ಅರ್ಪಿಸುವ ಮೂಲಕ ಸಂಭ್ರಮ ಆಚರಿಸಲು ಗ್ರಾಮಸ್ಥರು ಸಜ್ಜಾಗಿದ್ದಾರೆ.

ಮಹದೇವಪುರ ಕ್ಷೇತ್ರದ ಬಿದರಹಳ್ಳಿ ಹೋಬಳಿಯ ಕನ್ನಮಂಗಲ ಗ್ರಾಮಪಂಚಾಯಿತಿ ವ್ಯಾಪ್ತಿಯ ಈ ಕೆರೆ ಒತ್ತುವರಿಯಾಗಿತ್ತು. ಸಮರ್ಪಕ ನಿರ್ವಹಣೆ ಇಲ್ಲದೇ ಈ ಕೆರೆ ಕಸ ತುಂಬುವ ತಾಣವಾಗಿ ಮಾರ್ಪಟ್ಟಿತ್ತು. ಕೊಳಚೆ ನೀರು ಕೂಡ ಇದರ ಒಡಲು ಸೇರುತ್ತಿತ್ತು. ಸಂಪೂರ್ಣ ಹದಗೆಟ್ಟಿದ್ದ ಈ ಕೆರೆಯನ್ನು ಸ್ಥಳೀಯ ನಿವಾಸಿಗಳ ಸ್ವಯಂಸೇವಕರ ಗುಂಪು 'ಫ್ರೋರ್ಸ್ ಜಿಡಬ್ಲ್ಯು' ಹಾಗೂ ಮಹದೇವಪುರ ಪರಿಸರ ಕಾರ್ಯಪಡೆ ನೇತೃತ್ವದಲ್ಲಿ ಪುನರುಜ್ಜೀವನಗೊಳಿಸಿತ್ತು.

2019ರಲ್ಲಿ ಆರಂಭಗೊಂಡ ಪುನರುಜ್ಜೀವನ ಕಾರ್ಯ 2020ರಲ್ಲಿ ಪೂರ್ಣಗೊಂಡಿತ್ತು. ಶಾಸಕರ ನಿಧಿ, ದಾನಿಗಳು ಹಾಗೂ ಸ್ವಯಂಸೇವಕರು ನೀಡಿದ ದೇಣಿಗೆಯ ಮೂಲಕ ಪುನರುಜ್ಜೀವನ ಕಾರ್ಯದ ವೆಚ್ಚವನ್ನು ಭರಿಸಲಾಗಿತ್ತು.

'ಒತ್ತುವರಿಯಾಗಿದ್ದ ಈ ಕೆರೆಯಲ್ಲಿ ಮೂರು ಎಕರೆಯಲ್ಲಷ್ಟೇ ನೀರು ನಿಲ್ಲುತ್ತಿತ್ತು. ಇದರಲ್ಲಿ ತುಂಬಿದ್ದ 400 ಟನ್‌ಗಳಷ್ಟು ಕಸವನ್ನು ಹೊರಗೆ ತೆಗೆಸಿ ಎಂಎಸ್‌ಜಿಪಿಎಲ್ ಕಸ ಸಂಸ್ಕರಣಾ ಘಟಕಕ್ಕೆ ಸಾಗಿಸಿದ್ದೇವೆ. ಕೆರೆ ಪುನರುಜ್ಜೀವನದ ಬಳಿಕ 10 ಎಕರೆ ಪ್ರದೇಶದಲ್ಲಿ ನೀರು ನಿಲ್ಲುತ್ತಿದೆ. ಜಲಕಾಯದ ಸುತ್ತ ಸುಮಾರು 2 ಕಿ.ಮೀ ಉದ್ದದ ನಡಿಗೆ ಪಥ ನಿರ್ಮಿಸಲಾಗಿದೆ. ಎರಡು ಕಡೆ ಸ್ಥಳೀಯ ಪ್ರಭೇದದ ಗಿಡಗಳಿರುವ ಮಿಯಾವಾಕಿ ಕಾಡನ್ನು ಬೆಳೆಸಲಾಗಿದೆ. ಮಕ್ಕಳು ಆಡಲು ಆಟಿಕೆಗಳನ್ನು ಅಳವಡಿಸಲಾಗಿದೆ. ಬಯಲು ವ್ಯಾಯಾಮ ಶಾಲೆ ನಿರ್ಮಿಸಲಾಗಿದೆ' ಎಂದು ಗ್ರಾಮ ಪಂಚಾಯಿತಿ ಸದಸ್ಯ ಲಿಂಗರಾಜು ಅರಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಾಗಿನ ಅರ್ಪಣೆ: '25 ವರ್ಷಗಳಲ್ಲಿ ಈ ಕೆರೆ ಕೋಡಿ ಹರಿದಿದ್ದನ್ನು ನೋಡಿಲ್ಲ. ಒಂದು ವಾರದಿಂದ ಈಚೆಗೆ ಬಂದ ಮಳೆಯಿಂದಾಗಿ ಕೆರೆ ಭರ್ತಿಯಾಗಿ ಕೋಡಿ ಹರಿದಿರುವುದು ಸ್ಥಳೀಯರ ಸಡಗರಕ್ಕೆ ಕಾರಣವಾಗಿದೆ. ಇದೇ 20ರಂದು ಕೆರೆಗೆ ಬಾಗಿನ ಅರ್ಪಿಸಲು ಸಿದ್ಧತೆ ನಡೆಸಿದ್ದೇವೆ' ಎಂದು ಅವರು ಮಾಹಿತಿ ನೀಡಿದರು.



ಕನ್ನಮಂಗಲ ಕೆರೆ ತುಂಬಿ ಹರಿಯುತ್ತಿರುವುದು

'ನೈಸರ್ಗಿಕ ಸೋಸುವಿಕೆ'

'ಈ ಕೆರೆಗೆ ಶುದ್ಧೀಕರಣಗೊಂಡ ಕೊಳಚೆ ನೀರು ಸೇರ್ಪಡೆಯಾಗುತ್ತದೆ. ನೀರು ಶುದ್ಧೀಕರಣಕ್ಕೆ ನೀರು 48 ಗಂಟೆ ಕಾಲ ನಿಂತು, ಜೌಗು ಪ್ರದೇಶದ ಮೂಲಕ ಹಾದು ಹೋಗುವ ನೈಸರ್ಗಿಕ ಸೋಸುವಿಕೆ ವಿಧಾನವನ್ನು ಅನುಸರಿಸಲಾಗುತ್ತಿದೆ' ಎಂದು ಲಿಂಗರಾಜು ಅರಸ್ ತಿಳಿಸಿದರು.

ಅಂಕಿ-ಅಂಶಗಳು

18 ಎಕರೆ — ಕನ್ನಮಂಗಲ ಕೆರೆಯ ವಿಸ್ತೀರ್ಣ

10 ಎಕರೆ — ಕೆರೆಯಲ್ಲಿ ನೀರು ಸಂಗ್ರಹಕ್ಕೆ ಬಳಕೆಯಾಗುತ್ತಿರುವ ಜಾಗ

ಆಹಾರ ಭದ್ರತೆ ಸೂಚ್ಯಂಕದಲ್ಲಿ ಭಾರತಕ್ಕೆ 71ನೇ ಸ್ಥಾನ

ನವದೆಹಲಿ (ಪಿಟಿಐ): ಜಾಗತಿಕ ಆಹಾರ ಭದ್ರತೆ (ಜಿಎಫ್‌ಎಸ್) ಸೂಚ್ಯಂಕದಲ್ಲಿ ಭಾರತವು 113 ದೇಶಗಳ ಪೈಕಿ 71ನೆಯ ಸ್ಥಾನ ಪಡೆದಿದೆ. ಕೈಗೆಟಕುವ ದರದಲ್ಲಿ ಆಹಾರ ಸಿಗುವ ವಿಚಾರದಲ್ಲಿ ಭಾರತವು ಶ್ರೀಲಂಕಾ ಮತ್ತು ಪಾಕಿಸ್ತಾನಕ್ಕಿಂತ ಹಿಂದೆ ಇದೆ ಎಂದು ವರದಿಯೊಂದು ಹೇಳಿದೆ.

ಕೈಗೆಟಕುವ ದರದಲ್ಲಿ ಆಹಾರ ವಿಚಾರದಲ್ಲಿ ಪಾಕಿಸ್ತಾನವು (52.6 ಅಂಕ) ಭಾರತಕ್ಕಿಂತ (50.2 ಅಂಕ) ಹೆಚ್ಚಿನ ಅಂಕ ಪಡೆದಿದೆ, ಶ್ರೀಲಂಕಾ 62.9 ಅಂಕ ಪಡೆದಿದೆ. ಎಕನಾಮಿಸ್ಟ್ ಇಂಪ್ಯಾಕ್ಟ್ ಮತ್ತು ಕಾರ್ಟೆವಾ ಅಗ್ರಿಸೈನ್ಸ್ ಸಂಸ್ಥೆಗಳು ಈ ವರದಿ ಸಿದ್ಧಪಡಿಸಿವೆ.

ಐರ್ಲೆಂಡ್, ಆಸ್ಟ್ರೇಲಿಯಾ, ಬ್ರಿಟನ್, ಫಿನ್‌ಲೆಂಡ್, ಸ್ವಿಟ್ಜರ್ಲೆಂಡ್, ನೆದರ್ಲೆಂಡ್, ಕೆನಡಾ, ಜಪಾನ್, ಫ್ರಾನ್ಸ್ ಮತ್ತು ಅಮೆರಿಕ ಮೊದಲ ಸ್ಥಾನಗಳಲ್ಲಿ ಇವೆ. ಈ ದೇಶಗಳ ಜಿಎಫ್‌ಎಸ್ ಅಂಕವು 77.8ರಿಂದ 80ರ ನಡುವೆ ಇದೆ ಎಂದು ವರದಿಯು ಹೇಳಿದೆ.

ಕೈಗೆಟಕುವ ದರದಲ್ಲಿ ಆಹಾರ, ಲಭ್ಯತೆ, ಗುಣಮಟ್ಟ, ಸುರಕ್ಷತೆ ಮಾನದಂಡಗಳ ಆಧಾರದಲ್ಲಿ ದೇಶಗಳಿಗೆ ಅಂಕ ನೀಡಲಾಗಿದೆ. ಆಹಾರ ಭದ್ರತೆಯನ್ನು ಸೂಚಿಸುವ 58 ಅಂಶಗಳನ್ನು ವರದಿಯು ಪರಿಗಣಿಸಿದೆ. ಜಿಎಫ್‌ಎಸ್ ಸೂಚ್ಯಂಕದಲ್ಲಿ ಪಾಕಿಸ್ತಾನ 75ನೆಯ ಸ್ಥಾನದಲ್ಲಿ, ಶ್ರೀಲಂಕಾ 77ರಲ್ಲಿ, ನೇಪಾಳ ಮತ್ತು ಬಾಂಗ್ಲಾದೇಶ ಕ್ರಮವಾಗಿ 79 ಮತ್ತು 84ನೆಯ ಸ್ಥಾನದಲ್ಲಿ ಇವೆ.

ಚೀನಾ ದೇಶವು 34ನೆಯ ಸ್ಥಾನದಲ್ಲಿದೆ. ಆಹಾರದ ಲಭ್ಯತೆ, ಗುಣಮಟ್ಟ, ಸುರಕ್ಷತೆ, ಆಹಾರ ಉತ್ಪಾದನೆಗಾಗಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ವಿಭಾಗಗಳಲ್ಲಿ ಭಾರತವು ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ ಮತ್ತು ಶ್ರೀಲಂಕಾಕ್ಕಿಂತ ಉತ್ತಮ ಸ್ಥಾನದಲ್ಲಿದೆ. ಆಹಾರ ಭದ್ರತೆ ವಿಚಾರದಲ್ಲಿ ಹತ್ತು ವರ್ಷಗಳಲ್ಲಿ ಭಾರತದ ಅಂಕಗಳಲ್ಲಿ 2.7ರಷ್ಟು ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ಪಾಕಿಸ್ತಾನದ ಅಂಕಗಳು 9ರಷ್ಟು, ನೇಪಾಳದ ಅಂಕಗಳು 7ರಷ್ಟು ಮತ್ತು ಬಾಂಗ್ಲಾದೇಶದ ಅಂಕಗಳು 4.7ರಷ್ಟು ಜಾಸ್ತಿ ಆಗಿವೆ.

9,100ಕ್ಕೆ ಇಳಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಮುಖ ಆಗಿದ್ದು, 20 ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆ ಇದೆ. 9,100 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಮಂಗಳವಾರ 85 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 349 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.41 ರಷ್ಟು ವರದಿಯಾಗಿದೆ. 7 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಚಿಕ್ಕಬಳ್ಳಾಪುರ, ಗದಗ, ಹಾವೇರಿ ಹಾಗೂ ಕಲಬುರ್ಗಿಯಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 161 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.84 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 14 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಐವರು, ಉಡುಪಿಯಲ್ಲಿ ಮೂವರು, ದಕ್ಷಿಣ ಕನ್ನಡ, ಧಾರವಾಡ, ಕೊಡಗು, ಮೈಸೂರು, ತುಮಕೂರು ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 4.01 ರಷ್ಟು ದೃಢಪಟ್ಟಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,967ಕ್ಕೆ ತಲುಪಿದೆ.

ಸೋಂಕಿತರಲ್ಲಿ 399 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.36 ಲಕ್ಷ ದಾಟಿದೆ. ಗದಗವು ಕೋವಿಡ್ ಮುಕ್ತವಾಗಿದೆ. ಯಾದಗಿರಿ ಸೇರಿದಂತೆ 5 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ.

ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಲ್ಡೊಮೀಟರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.21 ಕೋಟಿ ▲	3.41 ಕೋಟಿ ▲
ಸಕ್ರಿಯ ಪ್ರಕರಣ	1.77 ಕೋಟಿ ▼	1.72 ಲಕ್ಷ ▼
ಗುಣಮುಖ	21.94 ಕೋಟಿ ▲	3.34 ಕೋಟಿ
ಸಾವು	49.25 ಲಕ್ಷ ▲	4.52 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.47 ಲಕ್ಷ ▲	14,911 ▲
ಗುಣಮುಖ	4.43 ಲಕ್ಷ ▲	19,101 ▲
ಸಾವು	4,968 ▲	194 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
53,135 ▲	34,325 ▲	49,018 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
95.88 ▼	7.85 ▲	14.04 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.39 ಲಕ್ಷ
ತಮಿಳುನಾಡು	35,928 ▲
ಕೇರಳ	27,002 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.94 ▲
ಕೇರಳ	48.68 ▲
ತಮಿಳುನಾಡು	26.89 ▲

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಸೋಂಕಿತರಿಗೆ ಪ್ರತಿಕಾಯ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಗಂಭೀರವಾಗಿ ಅಸ್ವಸ್ಥರಾದವರಿಗೆ ನಗರದ ಕೆಲ ಖಾಸಗಿ ಆಸ್ಪತ್ರೆಗಳು ಪ್ರಾಯೋಗಿಕವಾಗಿ ಪ್ರತಿಕಾಯ ಚಿಕಿತ್ಸೆ ಒದಗಿಸಿದ್ದು, ಸೋಂಕಿತರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿ ಅಭಿವೃದ್ಧಿ ಸಮಿತಿಯು ಎರಡು ನಿರ್ದಿಷ್ಟ ಗುಂಪುಗಳಿಗೆ ಕ್ಯಾಸಿರಿವಿಮಾಬ್ ಮತ್ತು ಇಮ್‌ಡೆವಿಮಾಬ್ ಪ್ರತಿಕಾಯಗಳನ್ನು ಸಂಯೋಜಿಸುವ ಚಿಕಿತ್ಸೆಯನ್ನು ಶಿಫಾರಸು ಮಾಡಿತ್ತು. ಅಪೋಲೊ ಆಸ್ಪತ್ರೆಯಲ್ಲಿ 40 ಹಾಗೂ ಸಕ್ರಾ ವರ್ಲ್ಡ್ ಆಸ್ಪತ್ರೆಯಲ್ಲಿ 18 ಸೋಂಕಿತರಿಗೆ ಈ ಚಿಕಿತ್ಸೆ ನೀಡಲಾಗಿದೆ.

'ಈ ಚಿಕಿತ್ಸೆಯ ಮೂಲಕ ಕೋವಿಡ್‌ನಿಂದ ಸಾವಿನ ಸಾಧ್ಯತೆಯನ್ನು ಶೇ 70 ರಷ್ಟು ಕಡಿಮೆ ಮಾಡಿ, ಅಪಾಯದಿಂದ ಪಾರು ಮಾಡಬಹುದು. ಮಧುಮೇಹ, ಶ್ವಾಸಕೋಶ ಸಮಸ್ಯೆ, ಪಿತ್ತಜನಕಾಂಗದ ಅಸ್ವಸ್ಥತೆ ಸೇರಿದಂತೆ ವಿವಿಧ ದೀರ್ಘಕಾಲಿನ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕೋವಿಡ್ ಪೀಡಿತರಿಗೆ ಈ ಚಿಕಿತ್ಸೆ ನೀಡಬಹುದು. ರೋಗನಿರೋಧಕ ಶಕ್ತಿ ಕಡಿಮೆ ಇರುವ ವಯಸ್ಕರು ಹಾಗೂ ಮಕ್ಕಳಿಗೆ ಕೂಡ ಈ ಚಿಕಿತ್ಸೆ ಚೇತರಿಕೆಗೆ ಸಹಕಾರಿ' ಎಂದು ವೈದ್ಯಕೀಯ ತಜ್ಞರು ಅಭಿಮತ ವ್ಯಕ್ತಪಡಿಸಿದರು.

'ಕೋವಿಡ್‌ನಿಂದ ಗಂಭೀರವಾಗಿ ಅಸ್ವಸ್ಥರಾದ 40 ಮಂದಿಗೆ ನಮ್ಮ ತಂಡವು ಪ್ರತಿಕಾಯ ಚಿಕಿತ್ಸೆ ನೀಡಿದೆ. ಅವರು ಈಗ ಚೇತರಿಸಿಕೊಳ್ಳುತ್ತಿದ್ದಾರೆ. ರೋಗಿಯ ಸ್ಥಿತಿಗತಿಯ ಆಧಾರದ ಮೇಲೆ ಚಿಕಿತ್ಸೆ ನಿರ್ಧರಿಸಲಾಗುತ್ತದೆ' ಎಂದು ಅಪೋಲೊ ಆಸ್ಪತ್ರೆಯ ಶ್ವಾಸಕೋಶ ತಜ್ಞ ಡಾ. ರವೀಂದ್ರ ಮೆಹ್ತಾ ತಿಳಿಸಿದರು.

'ಸೋಂಕಿತ ವ್ಯಕ್ತಿಗೆ ಸೂಕ್ತ ಸಮಯದಲ್ಲಿ ಪ್ರತಿಕಾಯ ಚಿಕಿತ್ಸೆ ಒದಗಿಸಿದಲ್ಲಿ ಆಸ್ಪತ್ರೆ ಅವಧಿಯನ್ನು ಕಡಿತ ಮಾಡಬಹುದು. ಕೋವಿಡೇತರ ಕಾಯಿಲೆಗಳು ಇದ್ದರೂ ಸೋಂಕಿನಿಂದ ವ್ಯಕ್ತಿಯನ್ನು ರಕ್ಷಿಸಬಹುದು. ಈ ಚಿಕಿತ್ಸೆಯಿಂದ ಸೋಂಕಿನ ತೀವ್ರತೆ ತಡೆಯಬಹುದಾಗಿದ್ದು, ತೀವ್ರ ನಿಗಾ ಘಟಕಕ್ಕೆ ದಾಖಲಾಗುವುದನ್ನು ತಪ್ಪಿಸಬಹುದು' ಎಂದು ಸಕ್ರಾ ವರ್ಲ್ಡ್ ಆಸ್ಪತ್ರೆಯ ವೈದ್ಯಕೀಯ ಸಲಹೆಗಾರ ಡಾ.ಟಿ.ಆರ್. ಹೇಮಕುಮಾರ್ ವಿವರಿಸಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ

12,49,662 ಒಟ್ಟು ಪ್ರಕರಣಗಳು ▲ (12,49,501 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,776 ▲	12,26,666 ▲	16,219 ▲

ದಿನದ ಏರಿಕೆ

ಹೊಸ ಪ್ರಕರಣ	161 ▲
ಗುಣಮುಖ	125 ▼
ಸಾವು	05 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಹೃದಯ ವೈಫಲ್ಯ: ಮಿತ್ರಾ ಕ್ಲಿಪ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ವೈಫಲ್ಯ ಸಮಸ್ಯೆಗೆ ಒಳಗಾಗಿದ್ದ 54 ವರ್ಷದ ವ್ಯಕ್ತಿಯೊಬ್ಬರಿಗೆ ನಾರಾಯಣ ಹೆಲ್ತ್ ಸಿಟಿಯ ಹೃದ್ರೋಗ ವಿಭಾಗದ ವೈದ್ಯರು 'ಮಿತ್ರಾ ಕ್ಲಿಪ್' ಅಳವಡಿಸುವ ಮೂಲಕ ರೋಗಿ ಚೇತರಿಸಿಕೊಳ್ಳಲು ನೆರವಾಗಿದ್ದಾರೆ.

ಅಸ್ವಾಸ್ಥ ವ್ಯಕ್ತಿಗೆ ಮೂರು ತಿಂಗಳಿನಿಂದ ಉಸಿರಾಟದ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಹೃದಯದ ಕಾರ್ಯಕ್ಷಮತೆ ಕಡಿಮೆಯಾಗಿತ್ತು. ರಕ್ತವು ಎಡ ಹೃತ್ಕರ್ಣಕ್ಕೆ ಹರಿಯುವುದನ್ನು ತಡೆಯುವ ಕವಾಟವು ಸೋರುವ ಸ್ಥಿತಿಯಲ್ಲಿತ್ತು. ಎರಡನೇ ಅಭಿಪ್ರಾಯ ಪಡೆಯಲು ಇಲ್ಲಿಗೆ ಬಂದಿದ್ದರು. ಹೃದಯ ವಿಜ್ಞಾನದ ವೈದ್ಯರ ತಂಡವು ಮೌಲ್ಯಮಾಪನ ಮಾಡಿ, ಹೊಸ ಚಿಕಿತ್ಸಾ ವಿಧಾನ ನಡೆಸಲು ನಿರ್ಧರಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.

'ಈ ವಿಧಾನದಲ್ಲಿ ಸಣ್ಣದಾದ ರಂಧ್ರ ಮಾಡಿ, ಸಾಧನವನ್ನು ಅಳವಡಿಕೆ ಮಾಡಲಾಗುತ್ತದೆ. ರಕ್ತಸ್ರಾವವನ್ನೂ ತಡೆಯಬಹುದು. ಈ ಮಾದರಿಯ ಚಿಕಿತ್ಸೆಯಿಂದ ರೋಗಿ ಬೇಗ ಚೇತರಿಸಿಕೊಳ್ಳುತ್ತಾನೆ' ಎಂದು ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಸತೀಶ್ ಗೋವಿಂದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಗಾರು–ಹಿಂಗಾರು ಚಲನೆ: ಹೆಚ್ಚು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಗಾರು ಮಾರುತಗಳ ನಿರ್ಗಮನ ಹಾಗೂ ಹಿಂಗಾರು ಮಾರುತಗಳ ಪ್ರವೇಶದ ನಡುವಿನ ಹವಾಮಾನ ವೈಪರೀತ್ಯ ಹಾಗೂ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಎರಡು ವಾರಗಳಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಹೆಚ್ಚು ಮಳೆ ಸುರಿಯಿತು' ಎಂದು ಕೃಷಿ ಹವಾಮಾನ ತಜ್ಞ ಎಂ.ಬಿ.ರಾಜೇಗೌಡ ತಿಳಿಸಿದರು.

'ಹವಾಮಾನದ ಈ ವೈಪರೀತ್ಯಗಳಿಂದ ಪ್ರಸ್ತುತ ಮೋಡಗಳ ಸಾಂದ್ರತೆ ಹೆಚ್ಚಿದೆ ಹಾಗೂ ಯಾವುದೇ ದಿಕ್ಕಿಗೆ ಚಲಿಸಲು ವಾತಾವರಣದ ಒತ್ತಡ ಅವಕಾಶ ಕೊಡದ ಕಾರಣ ಮಳೆ ಹೆಚ್ಚು ಸುರಿಯುತ್ತಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಮುಂಗಾರು ಜೂನ್ ಮೊದಲ ವಾರದಲ್ಲಿ ಪ್ರಾರಂಭಗೊಂಡು ಅಕ್ಟೋಬರ್ ಮೂರನೇ ವಾರದವರೆಗೆ ಇರುವುದು ವಾಡಿಕೆ. ನಂತರ ಮುಂಗಾರು ಮಳೆಯ ಹಿಂತೆಗೆಯುವಿಕೆಯು, ರಾಜ್ಯದ ಈಶಾನ್ಯ ಜಿಲ್ಲೆಗಳ ಮೂಲಕ ಹಾಯ್ದು ಪಶ್ಚಿಮ ಕರಾವಳಿ ಮಾರ್ಗವಾಗಿ ಅರಬ್ಬಿ ಸಮುದ್ರಕ್ಕೆ ತಲುಪುತ್ತದೆ' ಎಂದು ವಿವರಿಸಿದರು.

'ಈ ವೇಳೆ ವಾತಾವರಣದ ತೇವಾಂಶವನ್ನು ಜೊತೆಯಲ್ಲಿ ತರುತ್ತದೆ. ಮೋಡಗಳ ಸಾಂದ್ರತೆ ಹೆಚ್ಚಾದಾಗ ಮೋಡಗಳ ಸಿಡಿಲಿಕೆ (ಮೇಘ ಸ್ಫೋಟ) ಉಂಟಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅತಿ ಹೆಚ್ಚು ಮಳೆ ಸುರಿಯುತ್ತದೆ. ರಾಜ್ಯದಲ್ಲಿ ಈ ಎರಡೂ ಪರಿಸ್ಥಿತಿಗಳು ಏಕ ಕಾಲದಲ್ಲಿ ಸಂಭವಿಸಿದ್ದರಿಂದ ವಾಡಿಕೆಗಿಂತ ಅತಿ ಹೆಚ್ಚು ಮಳೆಯಾಗುತ್ತಿದ್ದು, ತಿಂಗಳಾಂತ್ಯಕ್ಕೆ ಇದು ಕೊನೆಗೊಳ್ಳಲಿದೆ' ಎಂದು ಅವರು ಹೇಳಿದರು.

ಭೂಕಂಪನ ಸಂತ್ರಸ್ತರಿಗೆ ತಲಾ ₹50 ಸಾವಿರ ಪರಿಹಾರ ವಿತರಣೆ

ಪ್ರಜಾವಾಣಿ ವಾರ್ತೆ

ಗಡಿಕೇಶ್ವಾರ (ಕಲಬುರಗಿ ಜಿಲ್ಲೆ): ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ ಕಂದಾಯ ಸಚಿವ ಆರ್. ಅಶೋಕ ಅವರು, ಭೂಕಂಪನದಿಂದ ಬಿರುಕುಬಿಟ್ಟ ಮನೆಗಳ ಮಾಲೀಕರಿಗೆ ತಲಾ ₹ 50 ಸಾವಿರ ಪರಿಹಾರ ವಿತರಿಸಿದರು.

ಗ್ರಾಮದಲ್ಲಿ ತೆರೆದ ಕಾಳಜಿ ಕೇಂದ್ರದಲ್ಲಿನ ಸಂತ್ರಸ್ತರ ಗೋಳು ಆಲಿಸಿದ ಅವರು, 'ಬಿರುಕುಬಿಟ್ಟ 20 ಮನೆಗಳ ದುರಸ್ತಿಗಾಗಿ ತಾತ್ಕಾಲಿಕ ಪರಿಹಾರ ನೀಡಲಾಗುವುದು. ಪದೇಪದೇ ಭೂಕಂಪನದ ಕಾರಣ ಸಂಕಷ್ಟ ಎದುರಿಸಿದವರು, ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದವರಿಗೂ ಪರಿಹಾರ ನೀಡುವ ಸಂಬಂಧ ಒಂದು ಸಮಿತಿ ರಚಿಸಿ ವರದಿ ತರಿಸಿಕೊಳ್ಳುತ್ತೇನೆ' ಎಂದರು.

'ಸದ್ಯ ಸಂಭವಿಸುತ್ತಿರುವ ಭೂಕಂಪನ ಹಾಗೂ ಸ್ಫೋಟಕ ಸದ್ದಿನಿಂದ ಯಾವುದೇ ಅಪಾಯ ಎದುರಾಗುವುದಿಲ್ಲ ಎಂದು ವಿಜ್ಞಾನಿಗಳು ಪ್ರಾಥಮಿಕ ವರದಿ ನೀಡಿದ್ದಾರೆ. ಇನ್ನೂ ಒಂದು ತಿಂಗಳು ಇಲ್ಲಿ ಅಧ್ಯಯನ ನಡೆಯಲಿದ್ದು, ಅಂತಿಮ ವರದಿ ಬಂದ ನಂತರ ಸರ್ಕಾರ ಮುಂದಿನ ಹೆಜ್ಜೆ ಇಡಲಿದೆ' ಎಂದರು.

ಬ್ಯಾಂಕ್ ಆಫ್ ಬರೋಡದಿಂದ ರೈತ ದಿವಸ್ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಆರ್ಥಿಕ ಬೆಳವಣಿಗೆಗೆ ರೈತರು ನೀಡಿರುವ ಕೊಡುಗೆಯನ್ನು ಪ್ರಶಂಸಿಸಲು ಮತ್ತು ಉತ್ತೇಜಿಸಲು ಬ್ಯಾಂಕ್ ಆಫ್ ಬರೋಡ ರೈತ ದಿವಸ್ ಆಚರಿಸುತ್ತಿದೆ' ಎಂದು ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಖುರಾನಾ ಹೇಳಿದರು.

ಬ್ಯಾಂಕ್ ಆಫ್ ಬರೋಡ ಆಲಗೊಂಡನಹಳ್ಳಿಯಲ್ಲಿ ಸೋಮವಾರ ಆಯೋಜಿಸಿದ್ದ ರೈತ ದಿವಸ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ತುಂಬುತ್ತಿರುವ ಹಿನ್ನಲೆಯಲ್ಲಿ ಬ್ಯಾಂಕ್, ರೈತ ದಿವಸ್ ಆಚರಣೆಯನ್ನು-ದೇಶವ್ಯಾಪಿ ಹಮ್ಮಿಕೊಂಡಿದೆ.

ವಿಶ್ವ ಆಹಾರ ದಿನವಾದ ಅಕ್ಟೋಬರ್ 16ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. 'ಕೃಷಿ ಮಾರುಕಟ್ಟೆ ಸಂಸ್ಕರಣ ಕೇಂದ್ರಗಳನ್ನು ಆರಂಭಿಸಿ ರೈತರಿಗೆ ಉತ್ತೇಜನ ನೀಡುವ ಮೂಲಕ ಅವರ ಅಭಿವೃದ್ಧಿಗೆ ಬ್ಯಾಂಕ್ ಶ್ರಮಿಸುತ್ತಿದೆ' ಎಂದು ಖುರಾನಾ ತಿಳಿಸಿದರು.

ಬ್ಯಾಂಕ್‌ನ ಬೆಂಗಳೂರು ವಲಯ ಪ್ರಬಂಧಕ ಸುಧಾಕರ್ ಡಿ.ಎ. ನಾಯಕ್ ಮಾತನಾಡಿ, 'ರೈತರ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕ್, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಿದೆ. ಕೃಷಿ ಉತ್ಪನ್ನಗಳಿಗೆ ಹಣಕಾಸಿನ ನೆರವು ಒದಗಿಸುವುದು, ಕೃಷಿ ಮಾರುಕಟ್ಟೆ ಚಟುವಟಿಕೆಗಳಿಗೆ ಹೆಚ್ಚಿನ ಗಮನ ನೀಡುವುದು' ಎಂದರು.

ಕಾರ್ಯಕ್ರಮದಲ್ಲಿ ರೈತರಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಸಾಲ ವಿತರಿಸಲಾಯಿತು. ಸಾಧಕ ರೈತರನ್ನು ಸನ್ಮಾನಿಸಲಾಯಿತು. ಶಿಬಿರದ ಮುಖ್ಯಸ್ಥ ಉದಯ ಹೆಗಡೆ, ದೊಡ್ಡನಲ್ಲಾಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಚಂದ್ರಶೇಖರ್ ಕಾರ್ಯಕ್ರಮದಲ್ಲಿ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

ಪತ್ರಕರ್ತರಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯು 2019, 2020 ಮತ್ತು 2021ನೇ ಸಾಲಿನ 'ಅಭಿಮಾನಿ ಪ್ರಶಸ್ತಿ' ಹಾಗೂ 'ಮೈಸೂರು ದಿಗಂತ' ದತ್ತಿನಿಧಿ ಪ್ರಶಸ್ತಿಗಳಿಗೆ ಪತ್ರಕರ್ತರಿಂದ ಲೇಖನ ಹಾಗೂ ವರದಿಗಳನ್ನು ಆಹ್ವಾನಿಸಿದೆ.

ಸಾಮಾಜಿಕ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ವರದಿಗಳಿಗೆ 'ಅಭಿಮಾನಿ ಪ್ರಕಾಶನ' ಸಂಸ್ಥೆ ಹಾಗೂ ಅತ್ಯುತ್ತಮ ಮಾನವೀಯ ವರದಿಗಳನ್ನು ಬರೆದ ಪತ್ರಕರ್ತರಿಗೆ 'ಮೈಸೂರು ದಿಗಂತ' ಪತ್ರಿಕಾ ಸಂಸ್ಥೆ ಈ ದತ್ತಿ ಪ್ರಶಸ್ತಿಗಳನ್ನು ನೀಡಲಿವೆ. ಪ್ರಶಸ್ತಿ ಮೊತ್ತ ತಲಾ ₹10 ಸಾವಿರ.

ಈ ಮೂರು ವರ್ಷಗಳಲ್ಲಿ ಪ್ರಕಟಗೊಂಡಿರುವ ಉತ್ತಮ ಲೇಖನ ಅಥವಾ ವರದಿಗಳಿಗೆ ಪ್ರಶಸ್ತಿಗಳನ್ನು ವಾರ್ಷಿಕವಾರು ಪ್ರತ್ಯೇಕವಾಗಿ ನೀಡಲಾಗುವುದು. ಅರ್ಜಿಗಳನ್ನೂ ಆಯಾ ವರ್ಷಗಳಿಗೆ ಪ್ರತ್ಯೇಕವಾಗಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ನವೆಂಬರ್ 23 ಕೊನೆಯ ದಿನ.

ಕನ್ನಡ ದೈನಿಕ, ವಾರ ಪತ್ರಿಕೆ ಹಾಗೂ ಸುದ್ದಿ ವಾಹಿನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಬಹುದು. ವರದಿಗಳಲ್ಲಿ ಬೈಲೈನ್ ಪ್ರಕಟವಾಗದಿದ್ದರೆ, ಸಂಪಾದಕರಿಂದ ದೃಢೀಕರಣ ಪತ್ರವನ್ನು ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕಾರ್ಯದರ್ಶಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಅಂಬೇಡ್ಕರ್ ವೀದಿ.

ಸಿಐಎಸ್‌ಸಿಇ: 10,12ನೇ ತರಗತಿ ಪರೀಕ್ಷೆ ಮುಂದೂಡಿಕೆ

ನವದೆಹಲಿ (ಪಿಟಿಐ): ಸಿಐಎಸ್‌ಸಿಇ (ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್) 10 ಮತ್ತು 12ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ಅನಿವಾರ್ಯ ಕಾರಣಗಳಿಂದಾಗಿ ಸಿಐಎಸ್‌ಸಿಇ 10 ಹಾಗೂ 12ನೇ ತರಗತಿಯ 2021–2022ನೇ ಸಾಲಿನ ಮೊದಲ ಅವಧಿಯ ಸೆಮಿಸ್ಟರ್ ಪರೀಕ್ಷೆಯನ್ನು ಮುಂದೂಡಲು ನಿರ್ಧರಿಸಲಾಗಿದೆ. ಪರೀಕ್ಷೆಯ ಪರಿಷ್ಕೃತ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು' ಎಂದು ಸಿಐಎಸ್‌ಸಿಇ ಮಂಡಳಿಯ ಕಾರ್ಯದರ್ಶಿ ಗೆರ್ರೆ ಅರ್ಥೂನ್ ಅವರು ಮಂಗಳವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

10 ಹಾಗೂ 12ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಯು ನವೆಂಬರ್ 15 ರಿಂದ ಆರಂಭವಾಗಬೇಕಿತ್ತು.

'ಅರ್ಹತೆಯುಳ್ಳ ದಲಿತರು ಅರ್ಚಕರಾಗಲಿ'

ಮೈಸೂರು: 'ಅರ್ಚಕರಿಗೆ ಆಗಮ ಶಾಸ್ತ್ರ, ದೇವತಾರ್ಚನೆಯ ವಿಧಿವಿಧಾನಗಳ ಪರಿಚಯವಿರಬೇಕು. ಮಂತ್ರಗಳನ್ನು ಶುದ್ಧವಾಗಿ ಉಚ್ಚರಿಸಬೇಕು. ಅದನ್ನು ಬಲ್ಲ ಯಾವುದೇ ದಲಿತ ಅರ್ಚಕ ಆಗಬಹುದು' ಎಂದು ಗ.ನಾ.ಭಟ್ಟ, ಎಸ್.ಎಂ.ಜಾಮದಾರ್ ಅವರು ಪ್ರತಿಪಾದಿಸಿದರೆ, 'ಮುಜರಾಯಿ ಕಾಯ್ದೆಯಡಿ ಆಗಮಶಾಸ್ತ್ರ ಹೇರಲಾಗುತ್ತಿದೆ. ಗ್ರಾಮದೇವತೆಗಳು, ಭೂತ ಕೋಲಗಳನ್ನು ಬ್ರಾಹ್ಮಣೀಕರಿಸಲಾಗುತ್ತಿದೆ. ಭಾಷೆ ಶುದ್ಧವಾಗಿ ಬರಬೇಕು ಎಂಬುದು ಹುದ್ದೆಯಿಂದ ದಲಿತರನ್ನು ಹೊರಗಿಡುವುದಕ್ಕಿರುವ ಮಾನದಂಡವಾಗಿದೆ' ಎಂದು ಜಿ.ಎನ್. ನಾಗರಾಜ್, ಸಬಿತಾ ಬನ್ನಾಡಿ ಹೇಳಿದರು.

'ಪ್ರಜಾವಾಣಿ' ಮಂಗಳವಾರ ಹಮ್ಮಿಕೊಂಡಿದ್ದ 'ದಲಿತರಿಗೆ ಅರ್ಚಕ ಹುದ್ದೆ ಮತ್ತು ಮುಜರಾಯಿ ಕಾಯ್ದೆ' ಕುರಿತ ಸಂವಾದದಲ್ಲಿ ಈ ರೀತಿಯ ಅಭಿಪ್ರಾಯಗಳು ವ್ಯಕ್ತವಾದವು.

ಪೂರ್ಣ ಸಂವಾದ ವೀಕ್ಷಿಸಲು: www.facebook.com/prajavani.net

ಪ್ರಜಾವಾಣಿ ಸಂವಾದ

'ಅರ್ಹತೆ ಇದ್ದವರು ಅರ್ಚಕರಾಗಬಹುದು'




ಯಾವುದೇ ವೃತ್ತಿಗೆ ಅರ್ಹತೆ ಇರುತ್ತದೆ. ಅರ್ಚಕ ವೃತ್ತಿಗೂ ಆಗಮ ಶಾಸ್ತ್ರ, ದೇವತಾರ್ಚನೆಯ ವಿಧಿವಿಧಾನಗಳ ಪರಿಚಯವಿರಬೇಕು. ಆಯಾ ದೇವತೆಗೆ ಸಂಬಂಧಿಸಿದ ಮಂತ್ರಗಳನ್ನು ಕಲಿತಿರಬೇಕು. ಸಂಸ್ಕೃತ ದೇವರಿಗೆ ಅರ್ಪಿತವಾದ ಭಾಷೆ. ಮಂತ್ರಗಳನ್ನು ಶುದ್ಧವಾಗಿ ಉಚ್ಚರಿಸಬೇಕು. ಇದನ್ನು ಬಲ್ಲ ಯಾವುದೇ ದಲಿತ ಅರ್ಚಕ ಆಗಬಹುದು. ದಲಿತರೂ ಮನುಷ್ಯರೇ. ಮಂತ್ರಗಳನ್ನು ಕಲಿತು ಬರುವುದಾದರೆ ಆಕ್ಷೇಪವಿಲ್ಲ.

ಪಂಚೆ ಉಡುವುದಕ್ಕೂ, ಶಲ್ಯ ಹೊದ್ದುಕೊಳ್ಳುವುದಕ್ಕೂ ಪದ್ಧತಿ ಇದೆ. ನೋಡಿದ ಕೂಡಲೇ ಅವರು ಶಾಸ್ತ್ರೀಯ ವ್ಯಕ್ತಿಗಳೋ ಅಲ್ಲವೋ ಎಂಬುದು ಗೊತ್ತಾಗುತ್ತದೆ. ಬಾಯಿ ಬಿಟ್ಟಾಗ ಲೋಪ ದೋಷಗಳು ಗೊತ್ತಾಗುತ್ತವೆ. ವೇದದಲ್ಲಿ ಸಣ್ಣ ಸ್ವರ ವ್ಯತ್ಯಾಸವಾದರೂ ವೈದಿಕರು ಸಹಿಸುವುದಿಲ್ಲ.

ಸರ್ಕಾರದ ಸೌಲಭ್ಯಗಳಿಗಾಗಿ ಅನೇಕ ಅಪಸವ್ಯಗಳು ನಡೆಯುತ್ತಿವೆ. ಎಲ್ಲವನ್ನು, ಎಲ್ಲರನ್ನು ಸೀಮಿತಗೊಳಿಸುವ ಪರಿಪಾಠ ಆರಂಭವಾಗಿದೆ. ವಾಲ್ಮೀಕಿಯನ್ನೂ ಒಂದು ಜನಾಂಗಕ್ಕೆ ಕಟ್ಟಿಹಾಕುವ ಮನಸ್ಥಿತಿ ನಿರ್ಮಾಣವಾಗಿದೆ. ಅರ್ಚಕರಾಗಿ ನೇಮಕಗೊಳ್ಳಬೇಕಾದರೆ ಸಂಸ್ಕೃತ ಪಾಠಶಾಲೆಯಲ್ಲಿ ಐದು ವರ್ಷ ಓದಬೇಕು. ವೇದಾಗಮ– ವಿಧಿವಿಧಾನಗಳನ್ನು ಕಲಿಯಬೇಕು. ಯಾರೂ ಬೇಕಾದರೂ ವೇದವನ್ನು ಓದಬಹುದು. ಅರ್ಚಕರಾಗಬಹುದು. ಬ್ರಾಹ್ಮಣರೇ ಅರ್ಚಕರಾಗಬೇಕು ಎಂಬ ಕಟ್ಟುಪಾಡೇನು ಇಲ್ಲ. ಆದರೆ, ಅರ್ಹತೆ ಇರಬೇಕು. ಬರೀ ಮಡಿ ಉಟ್ಟುಕೊಂಡು ದೇವತಾರ್ಚನೆ ಮಾಡಿದರೆ ಮೌಲ್ಯ ಬರುವುದಿಲ್ಲ.

ಗ.ನಾ.ಭಟ್ಟ, ಸಂಸ್ಕೃತ ವಿದ್ವಾಂಸ

ಕಾಯ್ದೆಯಡಿ ಆಗಮ ಶಾಸ್ತ್ರದ ಹೇರಿಕೆ



ಮರ, ಅದರಡಿ ಮೂರ್ತಿ, ಅದಕ್ಕೆ ಮೂರಡಿ ಕಟ್ಟಡ ಹೀಗೆ ದೇಗುಲಗಳು ಬೆಳೆದಿವೆ. ಅವನ್ನು ಮೊದಲು ಶೂದ್ರರೇ ಪೂಜಿಸುತ್ತಿದ್ದರು. ಕರ್ನಾಟಕದ ಸಾವಿರಾರು ದೇಗುಲಗಳಲ್ಲಿ ಶೂದ್ರರೇ ತಮ್ಮ ಪರಂಪರೆಗೆ ತಕ್ಕಂತೆ ಪೂಜೆ ನಡೆಸುತ್ತಿದ್ದಾರೆ. ಆದರೆ, ದೇವಸ್ಥಾನ ಜನಪ್ರಿಯವಾಗುತ್ತಿದ್ದಂತೆ ವೈದಿಕರ ಪ್ರವೇಶವಾಗುತ್ತದೆ. ಮಾರಮ್ಮನ ದೇವಾಲಯಕ್ಕೂ ವೈದಿಕ ಪುರೋಹಿತರ ಹಸ್ತಕ್ಷೇಪ ನಡೆದಿದೆ.

ಚಿಕ್ಕ ಗುಡಿಗಳಿಗೆ ಗರ್ಭಗುಡಿ, ಪ್ರಾಂಗಣ ರಚಿಸಿ ಶೂದ್ರರು, ದಲಿತರನ್ನು ಹೊರಹಾಕಲಾಗಿದೆ. ಅದಕ್ಕೆ ಸಂಸ್ಕೃತ, ಆಗಮಶಾಸ್ತ್ರಗಳ ವಿಧಿಗಳನ್ನು ಹೇರಲಾಗುತ್ತದೆ. ಕರಾವಳಿಯ ಭೂತ, ದೈವ, ಕೋಲಗಳಲ್ಲೂ ಬ್ರಾಹ್ಮಣೀಕರಣ ಪ್ರಕ್ರಿಯೆ ನಡೆದಿದೆ. ಆದಾಯ ಬರುವ ದೇವಸ್ಥಾನಗಳೇ ವೈದಿಕರ ಗುರಿಯಾಗುತ್ತವೆಯೇ ಹೊರತು ಆದಾಯ ಬರದ ಸಣ್ಣ ದೇಗುಲಗಳತ್ತ ಅವರು ಸುಳಿಯುವುದೇ ಇಲ್ಲ.

ದಲಿತರು, ಹಿಂದುಳಿದವರು, ಶಿವಶರಣರಿಗೆ ದೇವರು ಒಲಿದಿಲ್ಲವೇ. ಬೇಡರ ಕಣ್ಣಪ್ಪ, ಕನಕದಾಸರಿಗೆ ಶಿವ, ವಿಷ್ಣು ಒಲಿದಿಲ್ಲವೇ. ಅವರೇನು ಸಂಸ್ಕೃತ ಕಲಿತಿದ್ದರಾ? ಆಗಮಶಾಸ್ತ್ರಗಳನ್ನು ತೂರಿ ಕನ್ನಡದಲ್ಲೇ ಪೂಜೆ ಮಾಡಿದರು. ಶುದ್ಧ–ಅಶುದ್ಧ, ಪಾಂಡಿತ್ಯದ ಪ್ರಶ್ನೆ ಬರಲೇಬಾರದು. ಸಂವಿಧಾನದ ಸಮಾನತೆಯ ತತ್ವವನ್ನು ಸ್ಥಾಪಿಸುವ ಭಾಗವಾಗಿ ದಲಿತರಿಗೆ ದೇವಸ್ಥಾನಗಳಲ್ಲಿ ಅರ್ಚಕ ಹುದ್ದೆ ನೀಡಬೇಕು. ಜನಪದ ನಂಬಿಕೆಗಳ ಮೇಲೆ ಮುಜರಾಯಿ ಕಾಯ್ದೆಯ ಮೂಲಕ ಆಗಮದ ಹೇರಿಕೆಯನ್ನು ಕರ್ನಾಟಕದ ಹಲವು ದೇಗುಲಗಳಲ್ಲಿ ಮಾಡಲಾಗಿದೆ. ಹಾಗಾಗಿ ಕಾಯ್ದೆಯನ್ನು ತಿದ್ದುಪಡಿ ಮಾಡಲೇಬೇಕು.

ಜಿ.ಎನ್.ನಾಗರಾಜ್, ಸಿಪಿಎಂ ರಾಜ್ಯ ಮಂಡಳಿ ಸದಸ್ಯ

ಹೊರಗಿಡಲು ಭಾಷೆಯೇ ಮಾನದಂಡ



ಹಿಂದೂ ಅನ್ನುವ ದೊಡ್ಡ ಛತ್ರಿಯ ಕೆಳಗೆ ಇರುವ ದೇವಾಲಯಗಳು, ವಿಧಿ ವಿಧಾನಗಳು, ಸಮುದಾಯಗಳು ಒಂದೇ ಅಲ್ಲ. ಅರ್ಚಕರು ಒಂದೇ ಜಾತಿಯವರಲ್ಲ. ಆದರೆ, ಪರಂಪರೆ ಎಂದ ಕೂಡಲೇ ವೇದ ಆಗಮ ಮಾತ್ರವೇ. ಜನಪದದಲ್ಲಿ ಹಲವು ಪರಂಪರೆಗಳು ಇವೆ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು– ಧಾರ್ಮಿಕ ದತ್ತಿ ಅಧಿನಿಯಮ ಕಾಯ್ದೆ ಇವೆಲ್ಲವನ್ನೂ ಗಮನಿಸಬೇಕಾಗುತ್ತದೆ.

ಸಾಮಾಜಿಕ ಮನ್ನಣೆಯ ಸ್ವರೂಪ ಹಾಗೂ ಆರ್ಥಿಕ ನೆಲೆಗೂ ಧರ್ಮವೇ ಶಕ್ತಿ. ಅದು ಇನ್ನೊಬ್ಬರನ್ನು ಕೀಳರಿಮೆಗೆ ತಳ್ಳಿ ಆಳುವ ಅವಕಾಶವನ್ನು ಸೃಷ್ಟಿಸಿಕೊಳ್ಳುತ್ತದೆ. ಗ್ರಾಮದೇವತೆಯ ಪೂಜೆಗೆ ಸಂಸ್ಕೃತ ಮಂತ್ರ ಬೇಕಿಲ್ಲ. ಆ ದೇವತೆಗಳ ದೇವಾಲಯಗಳಲ್ಲಿ ಅರ್ಚಕರಾಗುವ ಬ್ರಾಹ್ಮಣರು ಹಳೆಯ ವಿಧಿವಿಧಾನಗಳನ್ನು ಮುಂದುವರಿಸುವುದಿಲ್ಲ. ಬ್ರಾಹ್ಮಣರೂ ಸ್ಥಳೀಯ ಪರಂಪರೆಯನ್ನು ಕಲಿಯಬೇಕಲ್ಲವೇ?

ನಮ್ಮ ಮನೆಯ ಸಮೀಪದ ಶನೀಶ್ವರ ದೇವಾಲಯದಲ್ಲಿ ದಲಿತ ಅರ್ಚಕರೊಬ್ಬರಿದ್ದರು. ದೇಗುಲ ಜನಪ್ರಿಯವಾಗುತ್ತಿದ್ದಂತೆ ದೇವಾಲಯ ಸಮಿತಿ ರಚನೆಯಾಯಿತು. ಹಲವು ವರ್ಷಗಳಿಂದ ಪೂಜಿಸಿದ ಅರ್ಚಕನನ್ನು ಪರೀಕ್ಷೆಗೊಡ್ಡಲಾಯಿತು. 'ನಿನಗೆ ನಮ್ಮ ವಿಧಿ– ವಿಧಾನಗಳು, ಹೋಮ ಬರುತ್ತದೆಯೇ' ಎಂಬ ಪರೀಕ್ಷೆಗಳಾದವು. ಆ ಪರೀಕ್ಷೆಗಳಲ್ಲಿ ಅರ್ಚಕ ಉತ್ತೀರ್ಣನಾದಾಗ ಸಮಿತಿಯವರು 'ನೀನು ಹಿಂದಿನ ಜನ್ಮದಲ್ಲಿ ಬ್ರಾಹ್ಮಣನಾಗಿದ್ದೆ. ಅದಕ್ಕೆ ಪಾಸು ಮಾಡಿದೆ' ಎಂದರಂತೆ.


ಸಂಸ್ಕೃತ, ಆಗಮ, ಶಾಸ್ತ್ರ ಎಂಬ ಮಾನದಂಡಗಳು ಶಕ್ತಿ ಕೇಂದ್ರಿತ ರಾಜಕಾರಣದ ಭಾಗ. ಅವುಗಳ ಮೂಲಕ ನಿರ್ದಿಷ್ಟ ವರ್ಗ ಇಡೀ ಧಾರ್ಮಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದೆ. ಭಾಷೆ ಶುದ್ಧವಾಗಿ ಬರಬೇಕು ಎಂಬುದು ಹುದ್ದೆಯಿಂದ ಕೆಲವರನ್ನು ಹೊರಗಿಡುವುದಕ್ಕಿರುವ ಮಾನದಂಡ.

ಸಬಿತಾ ಬನ್ನಾಡಿ, ಅಂಕಣಕಾರ್ತಿ

'ಮತದಾರರ ವಿರೋಧ ಕಟ್ಟಿಕೊಳ್ಳಲು ಇಷ್ಟವಿಲ್ಲ'

ಧಾರ್ಮಿಕ ಆಡಳಿತ ದುರ್ಬಳಕೆಯಾಗಬಾರದು ಎಂದು 1863ರಲ್ಲಿ ಮುಜರಾಯಿ ಕಾಯ್ದೆಯನ್ನು ಬ್ರಿಟಿಷರು ಜಾರಿಗೊಳಿಸಿದರು. ಪ್ರಭುತ್ವದ ಕೆಳಗೆ ಧಾರ್ಮಿಕ ಸಂಸ್ಥೆಗಳು ಇರಬೇಕು. ಧರ್ಮವು ಪ್ರಭುತ್ವವನ್ನು ನಿಯಂತ್ರಿಸಬಾರದು ಎಂಬುದೇ ಅದರ ಉದ್ದೇಶವಾಗಿತ್ತು. ಈ ಹಿಂದೆ ಭಾರತದಲ್ಲಿ 18 ಶಾಸ್ತ್ರಗಳ ಪ್ರಕಾರ ಪುರೋಹಿತನೇ ಮೇಲಿದ್ದರೆ ರಾಜ ಕೆಳಗೆ ಇದ್ದ. ಅದೊಂದು ದಬ್ಬಾಳಿಕೆಯಾಗಿತ್ತು. ಅದನ್ನು ಬ್ರಿಟಿಷರು ಕಡಿಮೆ ಮಾಡಿದರು.

2012ರ ಮುಜರಾಯಿ ಕಾಯ್ದೆಯಲ್ಲಿ ದಲಿತನು ಪುರೋಹಿತನಾಗಬಾರದು ಎಂದು ಎಲ್ಲಿಯೂ ಹೇಳಿಲ್ಲ. ಆದರೆ, ಮಂತ್ರಘೋಷಗಳು ಬರಬೇಕು. ಪೂಜೆ ಮಾಡುವ ವಿಧಿವಿಧಾನಗಳು ಗೊತ್ತಿರಬೇಕು. ಅದಕ್ಕೆ ಬೇಕಾದ ಶಿಕ್ಷಣದ ಪ್ರಮಾಣ ಪತ್ರ ಪಡೆದಿರಬೇಕು. ಅರ್ಚಕರಾಗಿ ನೇಮಕಗೊಂಡರೂ ಸಂಸ್ಕೃತ ಶ್ಲೋಕ ಹೇಳಲು ಬರಲಿಲ್ಲವೆಂದರೆ ಅವರನ್ನು ತೆಗೆದುಹಾಕಬಹುದು. ಸಪ್ತ ವ್ಯಸನಗಳಿಂದ ಅರ್ಚಕ ದೂರ ಇರಬೇಕು. ಹಿಂದೂ ಆಗಿರಬೇಕು. ಮುಜರಾಯಿ ಇಲಾಖೆಯ ಆಯುಕ್ತ ಕೂಡ ಹಿಂದೂ ಆಗಿರಬೇಕು.



ದೇಶದಲ್ಲಿ 20 ಲಕ್ಷಕ್ಕೂ ಹೆಚ್ಚು ದೇವಾಲಯಗಳಿವೆ. ರಾಜ್ಯದಲ್ಲಿ ಪ್ರತಿ 300 ಜನರಿಗೆ ಒಂದು ದೇವಸ್ಥಾನವಿದೆ. ಈ ಎಲ್ಲ ದೇವಾಲಯಗಳು ಮುಜರಾಯಿ ಕಾಯ್ದೆ ವ್ಯಾಪ್ತಿಯಲ್ಲಿಲ್ಲ. ರಾಜ್ಯದ 1 ಲಕ್ಷ ದೇವಾಲಯಗಳಲ್ಲಿ ಸುಮಾರು 30 ಸಾವಿರ ದೇವಾಲಯಗಳು ಮುಜರಾಯಿ ಕಾಯ್ದೆಯಡಿ ಬರುತ್ತವೆ. ಅವುಗಳಲ್ಲಿ ಅಧಿಕೃತ ಮತ್ತು ಘೋಷಿಸಲ್ಪಟ್ಟ ದೇವಸ್ಥಾನಗಳು ಎಂಬ ಎರಡು ವಿಭಾಗಗಳಿವೆ. ಆನುವಂಶಿಕ, ಖಾಸಗಿ ದೇವಾಲಯಗಳಲ್ಲಿ ವೇದಾಗಮವನ್ನು ಹೇರುವಂತಿಲ್ಲ. ಅದಲ್ಲದೆ ಸಂಯುಕ್ತ ಧಾರ್ಮಿಕ ಸಂಸ್ಥೆಗಳೂ ಇವೆ. ಉದಾಹರಣೆಗೆ ಶಿರಹಟ್ಟಿಯ ಫಕೀರೇಶ್ವರ. ಇಲ್ಲಿ ಎರಡು ಧರ್ಮಗಳು ಒಟ್ಟಿಗೇ ಕಾರ್ಯನಿರ್ವಹಿಸುತ್ತಿವೆ.

ಹಿಂದೆಯೂ ಅರ್ಹತೆ ಪಡೆದ ದಲಿತ ಅರ್ಚಕರನ್ನು 1988ರ ಸುಮಾರಿನಲ್ಲಿ ನೇಮಿಸಲಾಗಿತ್ತು. ಒಂದೇ ವಾರದಲ್ಲಿ ಎಸ್.ಆರ್.ಬೊಮ್ಮಾಯಿ ಸರ್ಕಾರವು ಅರ್ಚಕರನ್ನು ತೆಗೆದುಹಾಕಿತು. ಮತದಾರರ ವಿರೋಧ ಕಟ್ಟಿಕೊಳ್ಳಲು ಸರ್ಕಾರಕ್ಕೆ ಇಷ್ಟವಿಲ್ಲ.

ಎಸ್.ಎಂ.ಜಾಮದಾರ್, ನಿವೃತ್ತ ಐಎಎಸ್ ಅಧಿಕಾರಿ

ದಲಿತ ಯುವಕನ ಕಟ್ಟಿ ಮೆರವಣಿಗೆ

ಮಳವಳ್ಳಿ: ಹಸುವಿನ ಕಳವು ಆರೋಪ ಹೊರಿಸಿ ಪರಿಶಿಷ್ಟ ಸಮುದಾಯದ ಯುವಕನೊಬ್ಬನನ್ನು ಹಸುವಿಗೆ ಕಟ್ಟಿ ಹಲ್ಲೆ ಮಾಡಿ, ಮೆರವಣಿಗೆ ನಡೆಸಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಮಂಗಳವಾರ ವೈರಲ್ ಆಗಿತ್ತು.

ತಾಲ್ಲೂಕಿನ ಹಣಕೊಳ ಗ್ರಾಮದ ಸುರೇಶ್ ವರ್ಧನ್ ಹಲ್ಲೆಗೊಳಗಾದ ಯುವಕ. ದುಗ್ಗನಹಳ್ಳಿಯ ರಾಜು, ಹಣಕೊಳ ಗ್ರಾಮದ ಸುಂದರಮ್ಮ, ಮಳವಳ್ಳಿಯ ಮಲ್ಲಯ್ಯ, ಗಿರೀಶ್ ವಿರುದ್ಧ ಗ್ರಾಮಾಂತರ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ದುಗ್ಗನಹಳ್ಳಿಯಲ್ಲಿ ವಾರದ ಹಿಂದೆ ಘಟನೆ ನಡೆದಿದೆ. ನಂತರ ಗ್ರಾಮದ ಮುಖಂಡರು ಸೇರಿ ರಾಜಿ ಸಂಧಾನ ಮಾಡಿದ್ದರು ಎನ್ನಲಾಗಿದೆ. ಆದರೆ, ಸೋಮವಾರ ವಿಡಿಯೊ ವೈರಲ್ ಆಗಿದ್ದು, ಹಲ್ಲೆಗೊಳಗಾದ ಯುವಕ ತನ್ನ ಸಮುದಾಯದ ಮುಖಂಡರೊಂದಿಗೆ ಠಾಣೆಗೆ ತೆರಳಿ ದೂರು ನೀಡಿದ್ದಾರೆ.

ಇದೇ 24 ರಿಂದ 30 ರವರೆಗೆ ಸರ್ಕಾರದಿಂದ 'ಕನ್ನಡಕ್ಕಾಗಿ ನಾವು' ವಿನೂತನ ಅಭಿಯಾನ

'ಮಾತಾಡ್ ಮಾತಾಡ್ ಕನ್ನಡ' ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಾಜ್ಯೋತ್ಸವಕ್ಕೆ ಮೊದಲೇ ರಾಜ್ಯದಲ್ಲಿ 'ಕನ್ನಡದ ಕಲರವ' ಸೃಷ್ಟಿಸುವ ವಿಶಿಷ್ಟ ಕಾರ್ಯಕ್ರಮ 'ಕನ್ನಡಕ್ಕಾಗಿ ನಾವು' ಅಭಿಯಾನವನ್ನು ಸರ್ಕಾರ ಹಮ್ಮಿಕೊಂಡಿದೆ.

ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳು, ಕಾರ್ಖಾನೆಗಳು, ಐಟಿ–ಬಿಟಿ ಕಂಪನಿಗಳು, ಅಂಗಡಿ ಮುಂಗಟ್ಟು, ಮನೆ– ಮನೆಗಳಲ್ಲಿ, ದೃಶ್ಯ ಮಾಧ್ಯಮಗಳಲ್ಲಿ ಸಂಪೂರ್ಣ ಕನ್ನಡದಲ್ಲಿ ಮಾತನಾಡುವ, ಬರೆಯುವ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಈ ಅಭಿಯಾನವನ್ನು ಹಬ್ಬದ ರೀತಿಯಲ್ಲಿ ಆಚರಿಸಲಾಗುವುದು. ಪ್ರೀತಿಯಿಂದ ಕನ್ನಡವನ್ನು ಸಂಭ್ರಮಿಸುವ ಒಂದು ವಾರದ ಉತ್ಸವ ಇದಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, 'ಮಾತಾಡ್ ಮಾತಾಡ್ ಕನ್ನಡ' ಲಾಂಛನವನ್ನೂ ಬಿಡುಗಡೆ ಮಾಡಿದರು.

'ಈ ಅಭಿಯಾನ ಇದೇ 24 ರಿಂದ 30 ರವರೆಗೆ ರಾಜ್ಯದಲ್ಲಿರುವ ಎಲ್ಲ ಕನ್ನಡಿಗರು, ಕನ್ನಡೇತರ ಭಾಷಿಕರು ಪ್ರೀತಿ ಮತ್ತು ಅಭಿಮಾನದಿಂದ ಕನ್ನಡದಲ್ಲಿ ಮಾತನಾಡಬೇಕು. ನವೆಂಬರ್ ಕೊನೆಯವರೆಗೂ ಅದನ್ನು ಮುಂದುವರಿಸಬೇಕು. ಆದರೆ, ಇದು ಕಡ್ಡಾಯ ಅಥವಾ ಯಾರ ಮೇಲೂ ಒತ್ತಾಯಪೂರ್ವಕ ಅಲ್ಲ' ಎಂದು ತಿಳಿಸಿದರು.

'ಈ ಸಂದರ್ಭದಲ್ಲಿ ಎಲ್ಲರೂ ಕನ್ನಡದಲ್ಲೇ ಮಾತನಾಡುವುದು, ಕನ್ನಡದಲ್ಲೇ ವ್ಯವಹರಿಸುವುದು, ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡವನ್ನೇ ಬಳಸುವುದು, ಕನ್ನಡೇತರರಿಗೆ ಕನ್ನಡ ಕಲಿಸುವುದು, ಕನ್ನಡದಲ್ಲೇ ಸಹಿ ಮಾಡುವುದು, ಎಲ್ಲ ಮಾಧ್ಯಮಗಳಲ್ಲಿಯೂ ಸರಿಯಾದ ಕನ್ನಡವನ್ನೇ ಬಳಸುವ ಮೂಲಕ ಕನ್ನಡದ ವಾತಾವರಣ ಸೃಷ್ಟಿಸಲು ಪ್ರೇರಣೆ ನೀಡುವುದು ನಮ್ಮ ಆಶಯ. ಎಲ್ಲ ವ್ಯಕ್ತಿಗಳಿಗೂ ಮತ್ತು ಮನೆಗಳಿಗೂ ಕನ್ನಡ ಭಾಷೆಯ ಮಹತ್ವ ತಿಳಿಸುವುದೇ ನಮ್ಮ ಗುರಿಯಾಗಿದೆ' ಎಂದರು.

'ಈ ಅಭಿಯಾನಕ್ಕೆ 24 ರಂದು ಚಾಲನೆ ನೀಡಲಾಗುವುದು. ಕರ್ನಾಟಕದಲ್ಲಿ ನೆಲೆಸಿರುವ ಹೊರ ರಾಜ್ಯಗಳ ಜನರು ಒಂದು ವಾರದಲ್ಲಿ ಕನಿಷ್ಠ 100 ಕನ್ನಡ ವಾಕ್ಯಗಳನ್ನು ಕಲಿಯುವ ಮೂಲಕ ಕನ್ನಡದ ಹಬ್ಬದಲ್ಲಿ ಪಾಲ್ಗೊಳ್ಳಬೇಕು' ಎಂದು ಅವರು ಮನವಿ ಮಾಡಿದರು.

ಪ್ರಮುಖ ಕಾರ್ಯಕ್ರಮಗಳು

- **ನಾಟಕ, ನೃತ್ಯ, ಸಂಗೀತ:**
  ರಾಜ್ಯದ 5 ರಂಗಾಯಣಗಳು ಮತ್ತು ವಿವಿಧ ಅಕಾಡೆಮಿಗಗಳ ಸಹಯೋಗದಲ್ಲಿ ರಾಜ್ಯದ ಆಯ್ದ ಕಡೆಗಳಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿ ಬಿಂಬಿಸುವ ನಾಟಕಗಳು, ನೃತ್ಯ, ಸಂಗೀತ ಕಾರ್ಯಕ್ರಮ.
- **ಸಾಮೂಹಿಕ ಕನ್ನಡ ಗೀತೆ ಗಾಯನ**
  ಇದೇ 28 ರಂದು ಲಕ್ಷ ಕಂಠದಲ್ಲಿ 3 ಕನ್ನಡ ಗೀತೆಗಳ ಗಾಯನ. ವಿಧಾನಸೌಧದ ಮೆಟ್ಟಿಲು, ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳು, ಜಿಲ್ಲೆ, ತಾಲ್ಲೂಕು, ಗ್ರಾಮ, ಗಡಿನಾಡು, 18 ರಾಜ್ಯಗಳು ಮತ್ತು 14 ದೇಶಗಳಲ್ಲಿ ಕನ್ನಡ ಗೀತೆಗಳ ಗಾಯನ. ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮವ', ನಿಸಾರ್ ಅಹಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ', ಡಾ.ರಾಜ್‌ಕುಮಾರ್ ಹಾಡಿರುವ 'ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು' ಈ ಗೀತೆಗಳ ಗಾಯನ.
- **ಕನ್ನಡದಲ್ಲಿ ಮಾತನಾಡುವ ಸ್ಪರ್ಧೆ**
  ಅನ್ಯ ಭಾಷೆಯ ಒಂದೂ ಪದ ಬಳಸದೇ ನಿರರ್ಗಳವಾಗಿ ಕನ್ನಡದಲ್ಲಿ ಮಾತನಾಡುವ ಸ್ಪರ್ಧೆ. ಕನ್ನಡ ನಾಡು, ನುಡಿ, ಪರಂಪರೆಗೆ ಸಂಬಂಧಿಸಿದ ವಿಷಯಗಳ ಕುರಿತು ನಾಲ್ಕು ನಿಮಿಷಗಳ ವಿಡಿಯೊ ಸೆಲ್ಫಿ ತೆಗೆದು ಕಳಿಸಬೇಕು. ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದವರಿಗೆ ಪ್ರಥಮ ₹5,000, ದ್ವಿತೀಯ ₹3,000 ಮತ್ತು ತೃತೀಯ ₹2,000 ಬಹುಮಾನ.
  ರಾಜ್ಯಮಟ್ಟದಲ್ಲಿ ಪ್ರಥಮ ಬಹುಮಾನ ₹50,000, ದ್ವಿತೀಯ ₹30,000 ಮತ್ತು ತೃತೀಯ ಬಹುಮಾನ ₹20,000 ನೀಡಲಾಗುವುದು. ಅ.28 ರೊಳಗೆ ವಿಡಿಯೊ ಸೆಲ್ಫಿ ತೆಗೆದು ಕಳಿಸಬೇಕು.
- ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರ ಮತ್ತು ಗೋವಾ ರಾಜ್ಯಗಳಿಗೆ ಹೊಂದಿಕೊಂಡಿರುವ ಗಡಿ ಭಾಗದ ತಾಲ್ಲೂಕುಗಳಲ್ಲಿ ಕನ್ನಡಕ್ಕಾಗಿ ನಾವು ಅಭಿಯಾನ.

4500 ಅರ್ಜಿಗಳು



ವಿ.ಸುನಿಲ್ ಕುಮಾರ್

ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ 4,500 ಅರ್ಜಿಗಳು ಬಂದಿದ್ದು, ಅ.28 ಅಥವಾ 29 ರಂದಿ ಮುಖ್ಯಮಂತ್ರಿ ನೇತೃತ್ವದಲ್ಲಿ ಅಂತಿಮಗೊಳಿಸಲಾಗುತ್ತದೆ ಎಂದು ಸುನಿಲ್ ಕುಮಾರ್ ಹೇಳಿದರು.

ಪ್ರಶಸ್ತಿ ಆಯ್ಕೆಗೆ ಎಷ್ಟು ಮಂದಿ ಶಿಫಾರಸು ಮಾಡಿದ್ದಾರೆ ಎಂಬುದು ಮಾನದಂಡವಲ್ಲ ಅವರ ಸಾಧನೆಯೇ ಮಾನದಂಡವಾಗಲಿದೆ ಎಂದು ಅವರು ತಿಳಿಸಿದರು.

'ಪೈರಸಿ ತಡೆಗೆ ಕಾಯ್ದೆ ತರಲು ಬದ್ಧ'

ಬೆಂಗಳೂರು: 'ಪೈರಸಿ ತಡೆಗೆ ಕಾಯ್ದೆ ತರುವ ಅವಶ್ಯಕತೆ ಬಿದ್ದಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. ಖಂಡಿತವಾಗಿಯೂ ಅದನ್ನು ಜಾರಿಗೆ ತರುತ್ತೇವೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಪೈರಸಿ ತಡೆಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಹಾಗೂ ಇವುಗಳ ವಿಚಾರಣೆಗೆ ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸಬೇಕು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿಗೆ ಮಂಗಳವಾರ ಬಂದ ಸಚಿವರಿಗೆ ಮನವಿ ಸಲ್ಲಿಸಿದ ವೇಳೆ ಅವರು ಈ ಭರವಸೆ ನೀಡಿದರು.

'ಆನ್‌ಲೈನ್ ಜೂಜಾಟ ನಿಷೇಧಿಸಲು ಮಸೂದೆ ತರಲು ಮುಂದಾದಾಗ ನಮ್ಮ ಮೇಲೆ ಒತ್ತಡ ಬಹಳಷ್ಟಿತ್ತು. ಆದರೂ, ಯಾರನ್ನೂ ಬೀದಿಪಾಲು ಮಾಡಲು ನಾವು ಬಿಡುವುದಿಲ್ಲ ಎಂದು ಇದನ್ನು ಜಾರಿಗೊಳಿಸಿದೆವು. ಹಾಗೆಯೇ ಪೈರಸಿ ತಡೆಯಲು ಕಠಿಣ ಕ್ರಮ ಕೈಗೊಳ್ಳುತ್ತೇವೆ. ಮಲ್ಟಿಪ್ಲೆಕ್ಸ್ ಹಾಗೂ ಚಿತ್ರಮಂದಿರಗಳಲ್ಲಿ ಟಿಕೆಟ್ ದರ ನಿಯಂತ್ರಣದ ಕುರಿತೂ ಅಧಿಕಾರಿಗಳ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.

'ಸಿನಿಮಾ, ಸಾವಿರಾರು ಜನರಿಗೆ ಅನ್ನ ಕೊಡುವ ಉದ್ಯಮ. ಇದು ನಷ್ಟಕ್ಕೆ ಒಳಗಾಗಬಾರದು. ಇದರ ರಕ್ಷಣೆಗೆ ಕಾಯ್ದೆಗಳನ್ನು ತರುತ್ತೇವೆ. ಸರ್ಕಾರ ಈಗಾಗಲೇ ಸೈಬರ್ ಅಪರಾಧ ವಿಭಾಗವನ್ನು ಸದೃಢಗೊಳಿಸಿದ್ದು, ತಜ್ಞರನ್ನೇ ಇಲ್ಲಿ ನೇಮಿಸಿದ್ದೇವೆ. ಅಧಿಕಾರಿಗಳಿಗೆ ಮತ್ತಷ್ಟು ತರಬೇತಿ ನೀಡುವ ನಿಟ್ಟಿನಲ್ಲಿ ಈಗಾಗಲೇ ಗುಜರಾತ್ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ. ತರಬೇತಿಗಾಗಿ 20 ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ. ಇನ್ಫೋಸಿಸ್ ಕೂಡಾ ಈ ನಿಟ್ಟಿನಲ್ಲಿ ಸರ್ಕಾರದ ಜೊತೆ ಕೈಜೋಡಿಸಿದೆ' ಎಂದರು.

ಕೃಷಿ ವಿವಿ ಪ್ರಾಧ್ಯಾಪಕ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ



ಗಂಗಾಪ್ರಸಾದ್

ಶಿವಮೊಗ್ಗ: ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ತಳಿ ಅಭಿವೃದ್ಧಿ ಮತ್ತು ಅನುವಂಶೀಯತೆ ವಿಭಾಗದ ಮುಖ್ಯಸ್ಥ ಪ್ರೊ.ಗಂಗಾಪ್ರಸಾದ್ (59) ಅವರ ಮೃತದೇಹ ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿ ಸಮೀಪದ ಚಿಕ್ಕಬಾಸೂರು ತಾಂಡಾದ (ವಿಜಯಪುರ) ಕೆರೆ ಸಮೀಪ ಮಂಗಳವಾರ ಪತ್ತೆಯಾಗಿದೆ.

ಕೊಲೆ ಶಂಕೆ ವ್ಯಕ್ತಪಡಿಸಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ದೊಗ್ಗನಾಳು ಗ್ರಾಮದ ಗಂಗಾಪ್ರಸಾದ್ ಶಿವಮೊಗ್ಗದ ಬಸವೇಶ್ವರ ನಗರದಲ್ಲಿ ನೆಲೆಸಿದ್ದರು. ಎರಡು ದಿನಗಳ ಹಿಂದೆ ಮನೆಯಿಂದ ಹೋದವರು ಮತ್ತೆ ಮರಳಿರಲಿಲ್ಲ. ಕಾರು ಸಾಸ್ವೆಹಳ್ಳಿಯಲ್ಲಿ ಪತ್ತೆಯಾಗಿದೆ. ಅವರ ಸಾವು ಅನುಮಾನಾಸ್ಪದವಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಭಟ್ರಹಳ್ಳಿ ಗೂಳಪ್ಪ, ಗೌರಿ ಕೊರಗ, ಲಕ್ಷ್ಮಿ ಸಿದ್ದಿಗೆ ಪ್ರಶಸ್ತಿ

11 ಸಾಧಕರಿಗೆ ವಾಲ್ಮೀಕಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಭಟ್ರಹಳ್ಳಿ ಗೂಳಪ್ಪ



ಗೌರಿ ಕೊರಗ



ಲಕ್ಷ್ಮಿಗಣಪತಿ ಸಿದ್ದಿ



ಪ್ರೊ.ನಿರಂಜನ



ತಿಪ್ಪೇಸ್ವಾಮಿ



ಅಶ್ವತ್ಥರಾಮಯ್ಯ



ಬಿ.ಎಲ್.ವೇಣು



ಕೆ.ಆರ್.ಪಾಟೀಲ



ಜಂಬಯ್ಯ



ಕೆ.ಸಿ. ನಾಗರಾಜು



ಮಾರಪ್ಪ ನಾಯಕ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ನೀಡುವ 'ಶ್ರೀಮಹರ್ಷಿ ವಾಲ್ಮೀಕಿ ಪ್ರಶಸ್ತಿ'ಗೆ 2020 ರ ಸಾಲಿಗೆ ಐದು ಸಾಧಕರು ಮತ್ತು 2021 ನೇ ಸಾಲಿಗೆ ಆರು ಸಾಧಕರು ಸೇರಿ ಒಟ್ಟು 11 ಜನರನ್ನು ಆಯ್ಕೆ ಮಾಡಲಾಗಿದೆ.

ಪರಿಶಿಷ್ಟ ಕಲ್ಯಾಣ ಮತ್ತು ಸಾರಿಗೆ ಸಚಿವ ಬಿ.ಶ್ರೀರಾಮುಲು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬುಧವಾರ ಬೆಳಿಗ್ಗೆ 11 ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಪ್ರಶಸ್ತಿ ಪುರಸ್ಕೃತರಿಗೆ ₹5 ಲಕ್ಷ ನಗದು, 20 ಗ್ರಾಂ ಚಿನ್ನದ ಪದಕದ ಜೊತೆಗೆ ಫಲಕವನ್ನು ನೀಡಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡುವರು.

2021 ನೇ ಸಾಲಿನ ಪ್ರಶಸ್ತಿ:

- **ಕೆ. ಸಿ ನಾಗರಾಜು** (ಸಮಾಜ ಸೇವೆ), ಮಧುಗಿರಿ ತಾಲ್ಲೂಕಿನ ಇವರು ಸಂಘ–ಸಂಸ್ಥೆಗಳ ಮೂಲಕ ಜನಪರ ಕಾರ್ಯಕ್ರಮ ಮತ್ತು ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ.
- **ಲಕ್ಷ್ಮಿ ಗಣಪತಿ ಸಿದ್ದಿ** (ಸಮಾಜ ಸೇವೆ), ಉತ್ತರಕನ್ನಡ ಜಿಲ್ಲೆಯ ಇವರು 35 ವರ್ಷಗಳಿಂದ ನಾಟಿ ವೈದ್ಯೆಯಾಗಿ 300 ಕ್ಕೂ ಹೆಚ್ಚು ಹೆರಿಗೆ ಮಾಡಿಸಿದ್ದಾರೆ.
- **ಪ್ರೊ.ಎಸ್.ಆರ್.ನಿರಂಜನ** (ಶಿಕ್ಷಣ ಕ್ಷೇತ್ರ), ಮೈಸೂರಿನ ಇವರು ವಿಜ್ಞಾನ ಕ್ಷೇತ್ರದಲ್ಲಿ ಹಲವು ಸಂಶೋಧನೆಗಳನ್ನು ನಡೆಸಿ, ಹಕ್ಕುಸ್ವಾಮ್ಯಗಳನ್ನು ಪಡೆದಿದ್ದಾರೆ.
- **ಭಟ್ರಹಳ್ಳಿ ಗೂಳಪ್ಪ** (ಸಮಾಜ ಸೇವೆ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನವರಾದ ಇವರು, 35 ವರ್ಷಗಳಿಂದ 75 ಎಕರೆಯಲ್ಲಿ ಅರಣ್ಯ ಬೆಳೆಸಿದ್ದಾರೆ.
- **ಅಶ್ವತ್ಥರಾಮಯ್ಯ** (ಸಮಾಜ ಸೇವೆ) ಬೆಂಗಳೂರಿನ ಇವರು ವಾಲ್ಮೀಕಿ ಸಮಾಜದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ.
- **ಜಂಬಯ್ಯ ನಾಯಕ** (ಸಮಾಜ ಸೇವೆ), ಹೊಸಪೇಟೆಯವರಾದ ಇವರು, ಪರಿಶಿಷ್ಟ ಪಂಗಡಗಳ ಜನಾಂಗದವರ ಶ್ರೇಯೋಭಿವೃದ್ಧಿಗಾಗಿ ಸೇವೆ ಸಲ್ಲಿಸಿದ್ದಾರೆ.

2020 ನೇ ಸಾಲಿನ ಪ್ರಶಸ್ತಿ:

- **ಡಾ.ಕೆ.ಆರ್.ಪಾಟೀಲ**, ಹುಬ್ಬಳ್ಳಿಯ ಇವರು ಬುಡಕಟ್ಟು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನೆರವಾಗಿದ್ದಾರೆ. ಧಾರವಾಡ ಮತ್ತು ವಿಜಯನಗರದಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ.
- **ಬಿ.ಎಲ್.ವೇಣು** (ಸಾಹಿತ್ಯ), ಇವರು ಸಾಹಿತ್ಯ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿ ಗಣನೀಯ ಕೊಡುಗೆ ನೀಡಿದ್ದಾರೆ.
- **ಗೌರಿ ಕೊರಗ** (ಸಮಾಜ ಸೇವೆ), ಉಡುಪಿ ಜಿಲ್ಲೆ ಬ್ರಹ್ಮಾವರ ತಾಲ್ಲೂಕಿನ ಇವರು, ಕೊರಗ ಜನಾಂಗದ ಅಭ್ಯುದಯಕ್ಕೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಚಳವಳಿಗಳ ಮೂಲಕ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.
- **ಮಾರಪ್ಪ ನಾಯಕ** (ಸಂಘಟನೆ) ಇವರು ಪರಿಶಿಷ್ಟ ಪಂಗಡದ ಜನರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದ ಪ್ರಮುಖ ಯೋಜನೆಗಳಾದ ಗಂಗಾ ಕಲ್ಯಾಣ, ಭೂ ಒಡೆತನ, ಏತ ನೀರಾವರಿ ಯೋಜನೆಗಳ ಸಮರ್ಪಕ ಜಾರಿ ತರಲು ಶ್ರಮಿಸಿದ್ದಾರೆ.
- **ತಿಪ್ಪೇಸ್ವಾಮಿ ಎಚ್.** (ಸಿರಿಗೆರೆ ತಿಪ್ಪೇಶ್), (ಸಮಾಜ ಸೇವೆ), ವಾಲ್ಮೀಕಿ ಸಮಾಜಕ್ಕೆ ನ್ಯಾಯ ಒದಗಿಸಲು ಅನೇಕ ಹೋರಾಟಗಳನ್ನು ಮಾಡಿದ್ದಾರೆ.

ಅತ್ಯಾಚಾರ ಯತ್ನ: ಸರ್ಕಾರಿ ಅಭಿಯೋಜಕನ ವಿರುದ್ಧ ದೂರು

ಮಂಗಳೂರು: ಅತ್ಯಾಚಾರಕ್ಕೆ ಯತ್ನಿಸಿದ ಆರೋಪದ ಮೇಲೆ ಇಲ್ಲಿನ ಲೋಕಾಯುಕ್ತ ವಿಭಾಗದ ವಿಶೇಷ ಸರ್ಕಾರಿ ಅಭಿಯೋಜಕ ಕೆ.ಎಸ್.ಎನ್. ರಾಜೇಶ್ ವಿರುದ್ಧ ಪಾಂಡೇಶ್ವರದ ಮಹಿಳಾ ಠಾಣೆಯಲ್ಲಿ ದೂರು ದಾಖಲಾಗಿದೆ. ಕಾನೂನು ವಿದ್ಯಾರ್ಥಿನಿಯೊಬ್ಬರು ರಾಜೇಶ್ ವಿರುದ್ಧ ದೂರು ನೀಡಿದ್ದಾರೆ.

'ಆಗಸ್ಟ್ 8ರಂದು ಕರಂಗಲ್ಪಾಡಿಯಲ್ಲಿರುವ ರಾಜೇಶ್ ಅವರ ಕಚೇರಿಯಲ್ಲಿ ತರಬೇತಿಗೆ ಸೇರಿದ್ದೆ. ಲೈಂಗಿಕವಾಗಿ ಬಳಸಿಕೊಳ್ಳಲು ಒತ್ತಾಯಿಸಿದ್ದ ಈ ವ್ಯಕ್ತಿ, ಸೆಪ್ಟೆಂಬರ್ 25ರಂದು ಚೇಂಬರ್‌ಗೆ ಕರೆದು ಅಸಭ್ಯವಾಗಿ ವರ್ತಿಸಿ, ಅತ್ಯಾಚಾರ ಮಾಡಲು ಯತ್ನಿಸಿದರು' ಎಂದು ವಿದ್ಯಾರ್ಥಿನಿ ದೂರಿನಲ್ಲಿ ತಿಳಿಸಿದ್ದಾರೆ.

'ಮಂಗಳೂರು ದಕ್ಷಿಣದ ಎಸಿಪಿ ರಂಜಿತ್ ಬಂಡಾರು ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ. ಪಾರದರ್ಶಕವಾಗಿ ತನಿಖೆ ನಡೆಯುತ್ತದೆ' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಎರಡು ದಿನಗಳ ಹಿಂದೆ ರಾಜೇಶ್ ಮತ್ತು ಸಂತ್ರಸ್ತ ವಿದ್ಯಾರ್ಥಿನಿ ಮಾತನಾಡಿದ್ದು ಎನ್ನಲಾದ ಮೊಬೈಲ್ ಕರೆಯ ಧ್ವನಿಮುದ್ರಣ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ವಿದ್ಯಾರ್ಥಿನಿಯನ್ನು ಕಚೇರಿಗೆ ಬರುವಂತೆ ಮತ್ತು 'ಮುಂದೆಂದೂ ಈ ರೀತಿ ನಡೆದುಕೊಳ್ಳುವುದಿಲ್ಲ, ಇಲ್ಲಿಗೇ ಬಿಟ್ಟು ಬಿಡು' ಎಂದು ವಕೀಲ ವಿನಂತಿಸುವ ಮಾತು ಈ ಧ್ವನಿ ಮುದ್ರಣದಲ್ಲಿತ್ತು.

ರಾಜೇಶ್, ಲೋಕಾಯುಕ್ತದಲ್ಲಿ ದಾಖಲಾಗುವ ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಂತ್ರಸ್ತರ ಪರವಾಗಿ ವಾದಿಸಲು ಸರ್ಕಾರದಿಂದ ನೇಮಕಗೊಂಡಿರುವ ವಕೀಲ.

ವಿವೇಕ ರೈ, ಜಯಂತ ಕಾಯ್ಕಿಣಿ ಸೇರಿ ಏಳು ಜನರಿಗೆ 'ಮಾಸ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಬಿ.ಎ. ವಿವೇಕ ರೈ




ಕಾಯ್ಕಿಣಿ



ಆಶಾದೇವಿ



ವಸುಮತಿ



ಮಾಧವ ಕುಲಕರ್ಣಿ



ವಿಜಯರಾಘವನ್



ಎಚ್.ಎಲ್.ಪುಷ್ಪಾ

ಬೆಂಗಳೂರು: ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ವತಿಯಿಂದ ನೀಡಲಾಗುವ ಈ ಸಾಲಿನ 'ಮಾಸ್ತಿ ಪ್ರಶಸ್ತಿ' ಪ್ರಕಟಗೊಂಡಿದ್ದು, ವಿದ್ವಾಂಸ ಬಿ.ಎ. ವಿವೇಕ ರೈ, ಕವಿ ಜಯಂತ ಕಾಯ್ಕಿಣಿ ಸೇರಿದಂತೆ ಏಳು ಮಂದಿ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿನ ಸಾಧನೆಯನ್ನು ಪರಿಗಣಿಸಿ, ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ನೇತೃತ್ವದಲ್ಲಿ ಈ ಆಯ್ಕೆ ನಡೆಸಲಾಗಿದೆ.

ಪುರಸ್ಕೃತರು: ಬಿ.ಎ. ವಿವೇಕ ರೈ (ಜಾನಪದ), ಜಯಂತ ಕಾಯ್ಕಿಣಿ (ಕಾವ್ಯ), ವಿಮರ್ಶಕ ಮಾಧವ ಕುಲಕರ್ಣಿ (ವಿಮರ್ಶೆ), ಕಥೆಗಾರ ಆರ್. ವಿಜಯರಾಘವನ್ (ಕಾವ್ಯ), ವಿಮರ್ಶಕಿ ಎಂ.ಎಸ್. ಆಶಾದೇವಿ (ವಿಮರ್ಶೆ), ಲೇಖಕಿ ವಸುಮತಿ ಉಡುಪ (ಸೃಜನಶೀಲ) ಮತ್ತು ಎಚ್.ಎಲ್. ಪುಷ್ಪಾ (ಕಾವ್ಯ) ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 25 ಸಾವಿರ ನಗದು, ಮಾಸ್ತಿ ಪ್ರಶಸ್ತಿ ಫಲಕ ಹಾಗೂ ಸನ್ಮಾನ ಒಳಗೊಂಡಿದೆ. ಪ್ರೊ.ಎಂ.ಎಚ್. ಕೃಷ್ಣಯ್ಯ, ಜಿ.ಎನ್. ರಂಗನಾಥರಾವ್, ಬಿ.ಆರ್. ಲಕ್ಷ್ಮಣ ರಾವ್, ಕೃಷ್ಣಮೂರ್ತಿ ಹನೂರು, ಉಷಾ ಕೇಸರಿ ಹಾಗೂ ಡಿ.ಎಂ. ರವಿಕುಮಾರ್ ಆಯ್ಕೆ ಸಮಿತಿಯಲ್ಲಿ ಇದ್ದರು. ನ.6 ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಂದಗಿ ತಾಲ್ಲೂಕಿನ ಬಮ್ಮನಹಳ್ಳಿಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರ ಸ್ವಾಮಿ ಹೇಳಿಕೆ

ಆರ್.ಎಸ್.ಎಸ್ ಸಹವಾಸವೇ ಬೇಡ

ಪ್ರಜಾವಾಣಿ ವಾರ್ತೆ



ವಿಜಯಪುರ: 'ಅಯ್ಯೋ... ನನಗೆ ಆರ್.ಎಸ್.ಎಸ್ ಸಹವಾಸ ಬೇಡ. ವಿಧಾನಸಭೆ ಕಲಾಪ ನಡೀತಿದ್ದರೆ ಅದೆಂಥದ್ದೋ ನೀಲಿ ಚಿತ್ರ ನೋಡಿಕೊಂಡು ಕೂರೋದು, ಈ ಥರಹದ್ದೇ ತಾನೆ ಅವರ ಶಾಖೆಯಲ್ಲಿ ಅವರಿಗೆ ಕಲಿಸಿದ್ದು. ಅದನ್ನು ಕಲಿಯಲು ಹೋಗಬೇಕಾ?' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್ ಕುಮಾರ ಕಟೀಲ್ ಹೇಳಿಕೆಗೆ ತಿರುಗೇಟು ನೀಡಿದರು.

'ನನಗೆ ಅವರ ಶಾಖೆ ಬೇಡ, ಈ ಬಡಜನರ ಬಾಂಧವ್ಯದ ಶಾಖೆ ಸಾಕು. ಆರ್‌ಎಸ್‌ಎಸ್‌ನಿಂದ ಬಂದಿರುವ ಹಾಗೂ ಬಿಜೆಪಿ ನಾಯಕರುಗಳ ಬಗ್ಗೆ ಚರ್ಚೆ ಮಾಡೋಕೆ ಹೋದರೆ, ದಿನವೆಲ್ಲಾ ಚರ್ಚೆ ಮಾಡಬಹುದು' ಎಂದು ಸಿಂದಗಿ ತಾಲ್ಲೂಕಿನ ಬಮ್ಮನಹಳ್ಳಿ ಗ್ರಾಮದಲ್ಲಿ ಸುದ್ದಿಗಾರರ ಪ್ರಶ್ನೆಗೆ ಹೀಗೆ ಉತ್ತರಿಸಿದರು.

ವೈಯಕ್ತಿಕ ಚರ್ಚೆ ಬೇಡ: 'ನಾನು ಕೀಳು ಮಟ್ಟಕ್ಕಿಳಿದು ಚರ್ಚಿಸುವ ಅವಶ್ಯಕತೆ ಇಲ್ಲ. ವೈಯಕ್ತಿಕ ವಿಚಾರಗಳನ್ನು ಚರ್ಚೆ ಮಾಡಬೇಡಿ ಎಂದು ಎರಡೂ ಪಕ್ಷಗಳ ನಾಯಕರಿಗೆ ನಾನು ಹೇಳುತ್ತೇನೆ. ನಮಗೆ ಅದು ಬೇಕಿಲ್ಲ. ದೇಶದಲ್ಲಿ ಬಡತನ ಇದೆ, ಬಡತನ ಹೇಗೆ ಹೋಗಲಾಡಿಸಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿ. ವೈಯಕ್ತಿಕವಾಗಿ ಯಾವುದೋ ನಾಯಕರ ಬಗ್ಗೆ ಚರ್ಚಿಸಿದರೆ ಅದಕ್ಕೆ ಮಿತಿ ಇರುವುದಿಲ್ಲ' ಎಂದು ರಾಹುಲ್ ಗಾಂಧಿ ಪೆಡ್ಲರ್ ಎಂಬ ಬಿಜೆಪಿ ಹೇಳಿಕೆಗೆ ಪ್ರತಿಕ್ರಿಯಿಸಿದರು.

'ನನ್ನ ಕಂಡರೆ ಸಿದ್ದರಾಮಯ್ಯಗೆ ಭಯ ಇದೆ. ನನಗೇನೂ ಅವರ ಭಯವಿಲ್ಲ. ನಾನೇಕೆ ಭಯ ಬೀಳಲಿ? ಅದಕ್ಕಾಗಿಯೇ ಪದೇ ಪದೇ ಜೆಡಿಎಸ್ ಬಗ್ಗೆ ಮಾತನಾಡುತ್ತಾರೆ. ನಮ್ಮ ಹೆಸರು ಕೆಡಕೋದು ಅವರೇ. ವಿಧಿಯಿಲ್ಲದೆ ಸ್ಪಷ್ಟನೆ ಕೊಡೋಕೆ ನಾನು ಮಾತನಾಡುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಸಿಂದಗಿ ತಾಲ್ಲೂಕು ಯಂಕಂಚಿ ಗ್ರಾಮದಲ್ಲಿ ಮಂಗಳವಾರ ಅಭ್ಯರ್ಥಿ ನಾಜಿಯಾ ಅಂಗಡಿ ಪರ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಮತಯಾಚಿಸಿ ಮಾತನಾಡಿದರು. ಡಾ.ಮನಿಯಾರ, ಮಾಜಿ ಸಚಿವ ಎಸ್‌.ಎಂ.ನಬಿ, ಮಲ್ಲಿಕಾರ್ಜುನ ಯಂಡಿಗೇರಿ, ಗುರುಲಿಂಗಪ್ಪಗೌಡ ಪಾಟೀಲ ಇದ್ದಾರೆ.

ನಾನು ಬಿಜೆಪಿ ಏಜೆಂಟ್ ಅಲ್ಲ: ದೇವೇಗೌಡ

ವಿಜಯಪುರ: 'ಮತಕ್ಷೇತ್ರದ ಜೆಡಿಎಸ್‌ನ ಒಂಬತ್ತು ಪ್ರಮುಖರ ಅಭಿಪ್ರಾಯದ ಮೇರೆಗೆ ಮುಸ್ಲಿಂ ಮಹಿಳೆಯನ್ನು ವಿಧಾನಸೌಧದಲ್ಲಿ ಕೂರಿಸಲು ಮುಂದಾದರೆ ನನ್ನನ್ನು ಬಿಜೆಪಿ ಏಜೆಂಟ್ ಎಂದು ಕಾಂಗ್ರೆಸ್ ಪಕ್ಷದವರು ಮಾಡುತ್ತಿರುವ ಆರೋಪ ಸರಿಯಲ್ಲ. ಬದುಕಿನ ಕೊನೆ ಘಟ್ಟದಲ್ಲಿರುವ ನಾನು ಅಂಥ ಪಾಪದ ಕೆಲಸ ಮಾಡುವುದಿಲ್ಲ' ಎಂದು ಜೆಡಿಎಸ್ ರಾಷ್ಟ್ರೀಯ ಪಕ್ಷದ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಹೇಳಿದರು.

ಸಿಂದಗಿ ತಾಲ್ಲೂಕಿನ ಯಂಕಂಚಿ ಗ್ರಾಮದಲ್ಲಿ ಮಂಗಳವಾರ ಜೆಡಿಎಸ್ ಅಭ್ಯರ್ಥಿ ನಾಜಿಯಾ ಅಂಗಡಿ ಪರ ಮತಯಾಚಿಸಿ ಮಾತನಾಡಿ, 'ನಾವು ಸೋಲಿಗಾಗಿ ಚುನಾವಣೆಯಲ್ಲಿ ಸ್ಪರ್ಧೆ ಮಾಡ್ತೀವಾ' ಎಂದು ವಿರೋಧಿಗಳಿಗೆ ಪ್ರಶ್ನಿಸಿದರು.

'ಇಂಥ ಇಳಿ ವಯಸ್ಸಿನಲ್ಲೂ ಕಳೆದ ಐದು ದಿನಗಳಿಂದ ಚುನಾವಣಾ ಪ್ರಚಾರ ನಡೆಸಿದ್ದು ನನ್ನ ಸತ್ವ ಪರೀಕ್ಷೆಯಾಗಿದೆ. ನಿಮ್ಮ ಮನೆ ಬಾಗಿಲಿಗೆ 30 ವರ್ಷಗಳ ನಂತರ ಬಂದಿರುವೆ. ನನ್ನ ಬೆಂಬಲದಿಂದ ಬೆಳೆದ ಮನುಷ್ಯ ದಿವಂಗತ ಎಂ.ಸಿ. ಮನಗೂಳಿ, ಅವರ ಪುತ್ರನಿಗೆ ಕಾಂಗ್ರೆಸ್‌ಗೆ ಹೋಗಬೇಡ ಎಂದು ತಿಳಿಸಿದ 3-4 ಗಂಟೆಗಳಲ್ಲಿ ಆ ಪಕ್ಷಕ್ಕೆ ಸೇರಿರುವುದು ಆಘಾತ ಉಂಟುಮಾಡಿದೆ' ಎಂದು ಹೇಳಿದರು.

ಶೆಟ್ಟರ್ ವಾಗ್ದಾಳಿ

ಹುಬ್ಬಳ್ಳಿ: 'ಎಚ್.ಡಿ. ಕುಮಾರಸ್ವಾಮಿ ಅವರ ಮೇಲೆಯೇ ಸಾಕಷ್ಟು ಭ್ರಷ್ಟಾಚಾರದ ಆರೋಪಗಳಿವೆ. ಹೀಗಿದ್ದಾಗ ಅವರು ಭ್ರಷ್ಟಾಚಾರದ ಕುರಿತು ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಗ್ಗೆ ಯಾವ ನೈತಿಕತೆ ಮೇಲೆ ಮಾತನಾಡುತ್ತಾರೆ' ಎಂದು ಶಾಸಕ ಜಗದೀಶ ಶೆಟ್ಟರ್ ಪ್ರಶ್ನಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕುಮಾರಸ್ವಾಮಿ ಆರ್‌ಎಸ್‌ಎಸ್ ಅನ್ನು ಟೀಕಿಸಿ 'ಪ್ರಜಾವಾಣಿ'ಯಲ್ಲಿ ಲೇಖನ ಬರೆದಿದ್ದಾರೆ. ದೆಹಲಿಯ ಎಡಪಂಥೀಯ ಪತ್ರಕರ್ತ ಬರೆದ ಪುಸ್ತಕವನ್ನು ಆ ಲೇಖನಕ್ಕೆ ಆಧಾರ ನೀಡುತ್ತಾರೆ. ಆರ್‌ಎಸ್‌ಎಸ್ ಕುರಿತು ಎಷ್ಟೋ ಪುಸ್ತಕಗಳು ಪ್ರಕಟವಾಗಿದೆ. ಅವುಗಳನ್ನು ಓದಲಿ. ಟೀಕಿಸಲೇಬೇಕೆಂದು ಟೀಕಿಸುವುದು ಸರಿಯಲ್ಲ. ಒಮ್ಮೆ ಶಾಖೆಗೆ ಬಂದರೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಏನು ಎನ್ನುವುದು ತಿಳಿಯುತ್ತದೆ' ಎಂದರು.

'ಸಚಿವ ಸ್ಥಾನ ಸಿಗದೆ ನೊಂದು ಸಿ.ಎಂ. ಉದಾಸಿ ಮೃತಪಟ್ಟಿದ್ದಾರೆ' ಎನ್ನುವ ಡಿ.ಕೆ. ಶಿವಕುಮಾರ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶೆಟ್ಟರ್, 'ಸಿ.ಎಂ. ಉದಾಸಿ ನನ್ನ ಆತ್ಮೀಯರಾಗಿದ್ದರು. ಅವರು ಎಂದಿಗೂ ಸಚಿವ ಸ್ಥಾನಕ್ಕಾಗಿ ಆಸೆ ಪಟ್ಟವರಲ್ಲ. ಹಾಗೆಯೇ, ಸಚಿವನಾಗಬೇಕೆಂದು ನನ್ನೊಂದಿಗೆ ಎಂದಿಗೂ ಚರ್ಚಿಸಿಲ್ಲ. ಚುನಾವಣೆ ಸಮಯದಲ್ಲಿ ಅಪಪ್ರಚಾರ ಮಾಡುವುದು ಕಾಂಗ್ರೆಸ್ ಸಂಸ್ಕೃತಿ' ಎಂದು ದೂರಿದರು.

ನಾನೇಕೆ ಕಾಲು ಕೆರೆದು ಜಗಳ ತೆಗೆಯಲಿ: ಎಚ್‌ಡಿಕೆ

ಕಲಬುರಗಿ: 'ನಾನು ಯಾರ ಬಳಿಯೂ ಕಾಲು ಕೆರೆದು ಜಗಳಕ್ಕೆ ಹೋಗಿಲ್ಲ. ನನಗೆ ಮಾಡಲು ಸಿಕ್ಕಾಪಟ್ಟೆ ಕೆಲಸಗಳಿವೆ. ಮೊದಲು ಸಿದ್ದರಾಮಯ್ಯ ಅವರೇ ಜಗಳಕ್ಕೆ ಬರುತ್ತಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಸಿಂದಗಿ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ತೆರಳಲು ನಗರದ ವಿಮಾನ ನಿಲ್ದಾಣಕ್ಕೆ ಬಂದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನಗೇನು ಮಾಡಲು ಬೇರೆ ಕೆಲಸ ಇಲ್ವಾ? ನಾನೇಕೆ ಅವರ ಉಸಾಬರಿಗೆ ಹೋಗಲಿ?' ಎಂದರು.

ಜಮೀರ್ ನನ್ನ ಸ್ನೇಹಿತನಲ್ಲ: ಕಾಂಗ್ರೆಸ್ ಮುಖಂಡ ಜಮೀರ್ ಅಹ್ಮದ್ ಅವರು ತಮ್ಮನ್ನು ಪದೇ ಪದೇ ಟೀಕಿಸುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಜಮೀರ್ ಅಹ್ಮದ್ ಈಗ ನನ್ನ ಸ್ನೇಹಿತ ಅಲ್ಲ. ಹಳೆಯ ಸ್ನೇಹಿತ. ಅವರ ಬಗ್ಗೆ ನಾನು ಮಾತಾಡುವುದಿಲ್ಲ. ಮೇಲೆ ದೇವರಿದ್ದಾನೆ. ಅವನೇ ನೋಡಿಕೊಳ್ಳುತ್ತಾನೆ' ಎಂದು ಆಕಾಶದತ್ತ ಬೆರಳು ತೋರಿಸಿದರು.

ಕಾಂಗ್ರೆಸ್ 3ನೇ ಸ್ಥಾನದಲ್ಲಿದೆ: ಸಿಂದಗಿಯಲ್ಲಿ ಜೆಡಿಎಸ್–ಬಿಜೆಪಿ ಮಧ್ಯೆ ನೇರ ಹಣಾಹಣಿ ಇದ್ದು, ಕಾಂಗ್ರೆಸ್ ಮೂರನೇ ಸ್ಥಾನದಲ್ಲಿದೆ ಎಂದರು.

'ಕಾಂಗ್ರೆಸ್–ಬಿಜೆಪಿ ಎರಡು ಪಕ್ಷಗಳೂ ಪರ್ಸೆಂಟೇಜ್ ತೆಗೆದುಕೊಳ್ಳುವುದರಲ್ಲಿ ಮುಂದಿದ್ದಾರೆ. ಈ ರಾಜ್ಯದಲ್ಲಿ ಎರಡೂ ಪಕ್ಷಗಳನ್ನು ಅಧಿಕಾರದಿಂದ ಕಿತ್ತುಹಾಕಲು ರಾಜ್ಯದ ಜನತೆ ಮನಸ್ಸು ಮಾಡಬೇಕಿದೆ. ಎರಡೂ ಪಕ್ಷಗಳು ಜನತೆಯ ದುಡ್ಡನ್ನು ಲೂಟಿ ಹೊಡೆಯುತ್ತಿವೆ' ಎಂದು ಕುಮಾರಸ್ವಾಮಿ ಆರೋಪಿಸಿದರು.

'ಕಾಮಾಲೆ ಕಣ್ಣಿಗೆ ಎಲ್ಲವೂ ಹಳದಿ'

ಹುಬ್ಬಳ್ಳಿ: 'ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೆಪಿಎಸ್‌ಸಿಯಿಂದ ಗುಮಾಸ್ತನವರೆಗೂ ಕುಟುಂಬದವರನ್ನೇ ನೇಮಿಸಿದ್ದರು. ಜೀವನ ಪೂರ್ತಿ ಅಪ್ಪ, ಮಕ್ಕಳು ಕುಟುಂಬ ರಾಜಕಾರಣವನ್ನೇ ಮಾಡುತ್ತ ಬಂದಿದ್ದಾರೆ. ಕಾಮಾಲೆ ಕಣ್ಣಿಗೆ ಎಲ್ಲವೂ ಹಳದಿಯೇ. ಅದಕ್ಕಾಗಿಯೇ ಅವರು ಆರ್‌ಎಸ್‌ಎಸ್‌ಗೆ ಬಯ್ಯುತ್ತಿರುವುದು. ಆರ್‌ಎಸ್‌ಎಸ್ ಶಾಖೆಗೆ ಬರಲು ಈಗಾಗಲೇ ಅವರಿಗೆ ಕರೆ ನೀಡಿದ್ದೇನೆ. ಅಲ್ಲಿ ಏನೇನು ಕಲಿಸುತ್ತಾರೆ ಎಂದು ಅವರೇ ತಿಳಿಯಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ ಕಟೀಲ್ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯಗೆ ಕೇಸರಿ ಜಿಗುಪ್ಸೆ ಏಕೆ: ಸುನಿಲ್ ಕುಮಾರ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗ ಕೇಸರಿ ಬಣ್ಣವನ್ನು ವಿರೋಧಿಸುವವರು ಮುಂದೆ ಹಣೆಗೆ ಕುಂಕುಮ ಇಡುವುದನ್ನು ಮತ್ತು ದೇವರು ಪೂಜೆ ಮಾಡುವುದಕ್ಕೂ ಆಕ್ಷೇಪ ಎತ್ತಲೂಬಹುದು' ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಇಂಧನ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.


ವಿಧಾನಸೌಧದಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಸರ್ಕಾರಿ ಕಚೇರಿಗಳು, ಪೊಲೀಸ್ ಇಲಾಖೆಯಲ್ಲಿ ಆಯುಧ ಪೂಜೆ ಆರಂಭಿಸಿದ್ದು ಬಿಜೆಪಿ ಸರ್ಕಾರವಲ್ಲ. ಆಯುಧ ಪೂಜೆ ಪರಂಪರಾಗತವಾಗಿ ಬಂದಿದೆ. ಪೂಜೆಯ ದಿನ ತಮಗೆ ಇಷ್ಟವಾದ ದಿರಿಸು ಹಾಕಿಕೊಳ್ಳುತ್ತಾರೆ. ಒಬ್ಬ ವ್ಯಕ್ತಿಗೆ ಖಾಸಗಿ ಬದುಕು ಎಂಬುದು ಇಲ್ಲವೆ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರಿಗೆ ಕೇಸರಿ ಬಣ್ಣದ ಬಗ್ಗೆ ಜಿಗುಪ್ಸೆ ಏಕೆ? ಕೇಸರಿ ಬಣ್ಣವನ್ನು ಒಂದು ಪಕ್ಷಕ್ಕೆ ಏಕೆ ಸೀಮಿತಗೊಳಿಸುತ್ತೀರಿ? ಕೇಸರಿ ಎಂದೊಡನೆ ಏಕೆ ವಿಚಲಿತರಾಗುತ್ತೀರಿ, ಅಸಹಿಷ್ಣುತೆ ಏಕೆ? ಪೊಲೀಸ್ ಠಾಣೆಯಲ್ಲಿ ಆಯುಧಪೂಜೆ ಮಾಡಿರುವುದರಲ್ಲಿ ತಪ್ಪೇನಿದೆ. ತ್ಯಾಗ ಸಂಕೇತವಾದ ಕೇಸರಿ ಶಾಲು ಧರಿಸಿರುವುದರಲ್ಲೂ ತಪ್ಪಿಲ್ಲ. ಕರ್ತವ್ಯದಲ್ಲಿ ಇಲ್ಲದಾಗ ತಮ್ಮ ಇಷ್ಟದ ಬಟ್ಟೆ ಧರಿಸಿದ್ದಾರೆ. ಕಾನೂನು ಚೌಕಟ್ಟು ಎಂದು ಪರಂಪರೆಯನ್ನು ಮರೆಯಬಾರದು' ಎಂದು ಅವರು ಹೇಳಿದರು.

ಆರ್‌ಎಸ್‌ಎಸ್ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬಾಯಿಬಂದಂತೆ ಮಾತನಾಡುತ್ತಿರುವುದಕ್ಕೆ ಹತಾಶೆಯೇ ಕಾರಣ ಎಂದು ಸುನಿಲ್ ತಿಳಿಸಿದರು.

ಬಿಜೆಪಿ ಕಡೆಗಣಿಸಿಲ್ಲ: ಯಡಿಯೂರಪ್ಪ ತಿರುಗೇಟು

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: 'ಬಿಜೆಪಿ ನನ್ನನ್ನು ಕಡೆಗಣಿಸಿಲ್ಲ. ಕಣ್ಣೀರು ಹಾಕಿಕೊಂಡು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿಲ್ಲ. ಅದು ಸ್ವಯಂ ನಿರ್ಧಾರ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದರು.

'ಪ್ರಧಾನಿ ನರೇಂದ್ರ ಮೋದಿ ಸೇರಿ ಪಕ್ಷದ ಯಾವ ಮುಖಂಡರೂ ಕಡೆಗಣಿಸಿಲ್ಲ. ಯಾರ ಒತ್ತಡವೂ ನನ್ನ ಮೇಲಿಲ್ಲ. ಬಿಜೆಪಿ ಆಂತರಿಕ ವಿಚಾರ, ಪ್ರಧಾನಿ, ಆರ್‌ಎಸ್‌ಎಸ್ ಕುರಿತು ಹೇಳಿಕೆ ನೀಡುವ ಮೊದಲು ಸಿದ್ದರಾಮಯ್ಯ ನಾಲಿಗೆ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲಿ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ತಕ್ಕಂತೆ ನಡೆದುಕೊಳ್ಳಲಿ. ಇಲ್ಲದಿದ್ದರೆ ಜನರು ತಕ್ಕಪಾಠ ಕಲಿಸುವರು' ಎಂದು ಎಚ್ಚರಿಸಿದರು.

'ಸಿಂದಗಿ, ಹಾನಗಲ್ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸುವರು. ಅ.20, 21ರಂದು ಸಿಂದಗಿ, 22, 23ರಂದು ಹಾನಗಲ್‌ನಲ್ಲಿ ಪ್ರಚಾರ ನಡೆಸುವೆ. ಅಗತ್ಯವಿದ್ದರೆ ಹಾನಗಲ್‌ನಲ್ಲಿ ಹೆಚ್ಚುವರಿಯಾಗಿ ಒಂದು ದಿನ ಪ್ರಚಾರ ಕೈಗೊಳ್ಳುವೆ' ಎಂದು ವಿವರ ನೀಡಿದರು.


'ಕೇಂದ್ರ, ರಾಜ್ಯ ಸರ್ಕಾರಗಳು ಯಾರಿಗೂ ಅನ್ಯಾಯ ಮಾಡಿಲ್ಲ. ಅಲ್ಪಸಂಖ್ಯಾತರಿಗೆ ವಂಚನೆ ಮಾಡಿದ ಒಂದಾದರೂ ಉದಾಹರಣೆಯನ್ನು ಸಿದ್ದರಾಮಯ್ಯ ಕೊಡಲಿ. ಪ್ರಾಮಾಣಿಕ ಕೆಲಸ ಮಾಡಲಾಗಿದೆ. ಅಲ್ಪಸಂಖ್ಯಾತರು ಬೇಸರ ಮಾಡಿಕೊಳ್ಳುವ ಅಗತ್ಯವೇ ಇಲ್ಲ' ಎಂದರು.

ಪರಿಸರವಾದಿ ಮಾಧವ ಗಾಡ್ಗೀಲ್ ಅಭಿಪ್ರಾಯ

'ಅನಾಹುತ ಕೇವಲ ಕೇರಳದಲ್ಲಿ ಸಂಭವಿಸುತ್ತಿದೆ ಎಂಬುದು ತಪ್ಪು ತಿಳಿವಳಿಕೆ. ಗೋವಾ, ಮಹಾರಾಷ್ಟ್ರಗಳೂ ಈ ಪರಿಸ್ಥಿತಿ ಎದುರಿಸಿವೆ'

'ಪಶ್ಚಿಮ ಘಟ್ಟದಲ್ಲಿ ಪರಿಸ್ಥಿತಿ ಹದಗೆಡುತ್ತಿದೆ'

ತಿರುವನಂತಪುರ (ಪಿಟಿಐ): ಪಶ್ಚಿಮ ಘಟ್ಟಗಳಲ್ಲಿ ಪರಿಸ್ಥಿತಿ ಹದಗೆಡುತ್ತಿದೆ ಎಂದು ಖ್ಯಾತ ಪರಿಸರವಾದಿ ಮಾಧವ ಗಾಡ್ಗೀಲ್ ಹೇಳಿದ್ದಾರೆ. ವಿಪತ್ತುಗಳನ್ನು ಕೊನೆಗೊಳಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುವಂತೆ ಜನಪ್ರತಿನಿಧಿಗಳ ಮೇಲೆ ಒತ್ತಡ ಹೇರುವಂತೆ ಅವರು ಜನರನ್ನು ಒತ್ತಾಯಿಸಿದ್ದಾರೆ.



ಕೇರಳದಲ್ಲಿ ಭಾರಿ ಭೂಕುಸಿತ ಹಾಗೂ ಪ್ರಾಣಹಾನಿ ಸಂಭವಿಸಿದ್ದು, ಗಾಡ್ಗೀಲ್ ಮತ್ತು ಅವರ ನೇತೃತ್ವದ ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿಯು ಸಿದ್ಧಪಡಿಸಿದ ವರದಿ ಮತ್ತೆ ಚರ್ಚೆಗೆ ಬಂದಿದೆ. 2011ರಲ್ಲಿ ಕೇಂದ್ರ ಪರಿಸರ ಸಚಿವಾಲಯಕ್ಕೆ ಸಲ್ಲಿಸಿದ ಗಾಡ್ಗೀಲ್ ವರದಿಯು ಪರಿಸರ ಸೂಕ್ಷ್ಮ ಘಟ್ಟಗಳನ್ನು ಸಂರಕ್ಷಿಸುವ ಕ್ರಮಗಳನ್ನು ಶಿಫಾರಸು ಮಾಡಿತ್ತು.

ಪಶ್ಚಿಮ ಘಟ್ಟಗಳಲ್ಲಿ ಸಂಭವಿಸುತ್ತಿರುವ ಅನಾಹುತಗಳಿಗೆ ಕಲ್ಲು ಗಣಿಗಾರಿಕೆಯಂತಹ ಪರಿಸರ ಹಾನಿಕಾರಕ ಚಟುವಟಿಕೆಗಳನ್ನು ಗಾಡ್ಗೀಲ್ ಅವರು ದೂಷಿಸಿದ್ದಾರೆ. ವರದಿಯನ್ನು ಜಾರಿಗೆ ತರುವ ಸಮಯ ಮುಗಿದಿದೆ ಎಂಬ ಮಾತನ್ನು ಅವರು ತಳ್ಳಿಹಾಕಿದ್ದಾರೆ.

'ವರದಿಯನ್ನು ಜನರ ಸಂಪೂರ್ಣ ಭಾಗವಹಿಸುವಿಕೆಯೊಂದಿಗೆ ಜಾರಿಗೊಳಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಪೊಲೀಸ್ ಠಾಣೆ ಎದುರು ಧ್ವಜಾರೋಹಣ'

ಪ್ರಜಾವಾಣಿ ವಾರ್ತೆ

ವಿಜಯಪುರ: ಪೊಲೀಸ್ ಕೇಸರಿಕರಣ ವಿರೋಧಿಸಿ ಚುನಾವಣೆ ಬಳಿಕ ಕಾಂಗ್ರೆಸ್‌ನಿಂದ ಪೊಲೀಸ್ ಠಾಣೆ ಎದುರು ರಾಷ್ಟ್ರಧ್ವಜ ಹಾರಿಸಿ, ಪೊಲೀಸರಿಗೆ ಖಾಕಿ ಸಮವಸ್ತ್ರ ಉಡುಗೊರೆ ನೀಡುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಸಿಂದಗಿ ತಾಲ್ಲೂಕಿನ ಬಳಗಾನೂರಿನಲ್ಲಿ ಮಂಗಳವಾರ ಕಾಂಗ್ರೆಸ್ ಚುನಾವಣಾ ಪ್ರಚಾರಸಭೆಯಲ್ಲಿ ಅವರು ಮಾತನಾಡಿದರು.

ಪೊಲೀಸ್ ಸಿಬ್ಬಂದಿ ಸಮವಸ್ತ್ರದ ಬದಲು ಕೇಸರಿ ಬಟ್ಟೆ ಧರಿಸಿರುವುದು ಅಪಾಯಕಾರಿ ಬೆಳವಣಿಗೆ. ಉಪಚುನಾವಣೆ ಇಲ್ಲದಿದ್ದರೆ, ನಾನೇ ಹೋಗಿ ಪೊಲೀಸ್ ಠಾಣೆ ಮುಂದೆ ರಾಷ್ಟ್ರಧ್ವಜ ಹಾರಿಸುತ್ತಿದ್ದೆ ಎಂದು ಹೇಳಿದರು.

ಸಂವಿಧಾನದ ಹೆಸರಲ್ಲಿ ಪ್ರಮಾಣ ಮಾಡಿದ ಮುಖ್ಯಮಂತ್ರಿಗಳು, ಗೃಹ ಸಚಿವರು, ಪೊಲೀಸ್ ಅಧಿಕಾರಿಗಳು ಪೊಲೀಸ್ ಠಾಣೆಯನ್ನೂ ಕೇಸರಿಕರಣ ಮಾಡಲು ಹೊರಟಿರುವುದು ಸಹಿಸಿಕೊಂಡಿರಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದರು.

'ಜೆಡಿಎಸ್ ಹೆಸರು ಮಾತ್ರ ಜಾತ್ಯತೀತ. ಆದರೆ, ಕೋಮುವಾದಿಗಳ ಜೊತೆ ಭಾಯಿ, ಭಾಯಿ. ಈ ಒಳ ಒಪ್ಪಂದಕ್ಕೆ ಸಿಂದಗಿ ಮತದಾರರು ಮನ್ನಣೆ ನೀಡಬಾರದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಜೆಡಿಎಸ್‌ಗೆ ಕೊಡುವ ಒಂದು ಮತ ಕೂಡ ಬಿಜೆಪಿಗೆ ಕೊಟ್ಟಂತೆ. ಜೆಡಿಎಸ್ ಉದ್ದೇಶ ಏನೆಂಬುದು ಅಲ್ಪಸಂಖ್ಯಾತರಿಗೆ ಮನವರಿಕೆಯಾಗಿದೆ. ಮತದಾರರು ದಡ್ಡರಲ್ಲ ಎಂದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಮಾತನಾಡಿ, 'ಜೆಡಿಎಸ್ ಯಾವತ್ತೂ ಬಿಜೆಪಿ ಪರವಾದ ಪಕ್ಷ. ಸಿಂದಗಿ ಕ್ಷೇತ್ರದಲ್ಲಿ ಜೆಡಿಎಸ್ ಟಿಕೆಟ್ ಯಾರಿಗೆ ನೀಡಬೇಕೆಂಬುದು ಬಿಜೆಪಿ ಕಚೇರಿಯಲ್ಲಿ ನಿರ್ಧಾರವಾಗಿದೆ. ಜೆಡಿಎಸ್ ಪಕ್ಷವು ಬಿಜೆಪಿಯ 'ಬಿ ಟೀಮ್' ಎಂದು ಆರೋಪಿಸಿದರು.

'ಮೋದಿ ದಲಿತ ಪ್ರೀತಿ; ಬರೀ ಬಾಯಿಮಾತಿನದು'



ಸುರ್ಜೇವಾಲಾ

ಕಲಬುರಗಿ: 'ಪ್ರಧಾನಿ ನರೇಂದ್ರ ಅವರ ಬಿಜೆಪಿಯು ಯಾವ ರಾಜ್ಯದಲ್ಲೂ ದಲಿತ ಮುಖ್ಯಮಂತ್ರಿಯನ್ನು ಮಾಡಿಲ್ಲ. ಆದರೆ ನಾವು ಪಂಜಾಬ್‌ದಲ್ಲಿ ದಲಿತ ಮುಖ್ಯಮಂತ್ರಿ ಮಾಡಿದ್ದೇವೆ. ಮೋದಿ ಅವರದ್ದು ಬರೀ ಬಾಯಿ ಮಾತಿನ ದಲಿತ ಪ್ರೀತಿ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಆರೋಪಿಸಿದರು.

ಸಿಂದಗಿ ಉಪಚುನಾವಣೆ ಪ್ರಚಾರಕ್ಕೆ ತೆರಳಲು ನಗರದ ವಿಮಾನ ನಿಲ್ದಾಣಕ್ಕೆ ಬಂದಿದ್ದ ವೇಳೆ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ತೈಲ ಬೆಲೆ, ಅನಿಲ ಬೆಲೆ, ಅಗತ್ಯ ವಸ್ತುಗಳ ಬೆಲೆ ನೋಡಿದರೆ ಜನರನ್ನು ಹೇಗೆ ಲೂಟಿ ಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ' ಎಂದರು.

'ವಿದೇಶದ ತೊಗರಿ ಬೇಳೆ ದೇಶಕ್ಕೆ ಬರಲಿದೆ. ನಮ್ಮ ದೇಶದ ರೈತರ ಬೇಳೆ ಮಾರಾಟ ಆಗದು' ಎಂದು ಹೇಳಿದರು.

ತಮ್ಮನ್ನು ರಾಜ್ಯ ಉಸ್ತುವಾರಿಯಿಂದ ಬದಲಾಯಿಸುವಂತೆ ರಾಜ್ಯದ ನಾಯಕರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿರುವ ಕುರಿತು ಪ್ರತಿಕ್ರಿಯೆ ನೀಡಿದ ಸುರ್ಜೇವಾಲಾ, 'ಕಾಂಗ್ರೆಸ್ ಒಂದು ಕುಟುಂಬ. ಕುಟುಂಬದ ಮುಖ್ಯಸ್ಥರಿಗೆ ಪತ್ರ ಬರೆಯಲು ಮುಕ್ತ ಅವಕಾಶ ಇದೆ. ಪಕ್ಷದ ಯಾರೇ ಕಾರ್ಯಕರ್ತರು ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆಯಬಹುದು. ತಮ್ಮ ಅಭಿಪ್ರಾಯವನ್ನು ತಿಳಿಸುವುದರಲ್ಲಿ ತಪ್ಪೇನಿಲ್ಲ' ಎಂದರು.



ಈದ್‌ಮಿಲಾದ್...

ಕೊಪ್ಪಳದಲ್ಲಿ ಮಂಗಳವಾರ ನಡೆದ ಈದ್‌ಮಿಲಾದ್ ಮೆರವಣಿಗೆ ವೇಳೆ ಡಿಜೆ ಸದ್ದಿಗೆ ಕುಣಿದು ಕುಪ್ಪಳಿಸಿದ ಯುವಕರು ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

'ಡ್ರಗ್ ಪೆಡ್ಲರ್ ದೇಶ ಮುನ್ನಡೆಸುವರೇ?'

ಒಂದನೇ ಪುಟದಿಂದ

ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರೆ, ಸಾಬ್ರಕಾ ಸಾತ್ ಸಾಬ್ರಕಾ ವಿಕಾಸ್ (ಸಾಬರ ಸಾಥ್, ಸಾಬರ ವಿಕಾಸ)' ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ ಎಂದು ವ್ಯಂಗ್ಯವಾಡಿದ ಅವರು, ಕಾಂಗ್ರೆಸ್‌ಗೆ ಸೋಲಿನ ಭೀತಿ ಇದೆ. ಬಹುಸಂಖ್ಯಾತರ ಮತಗಳು ತಮಗೆ ದೊರೆಯದು ಎಂದು ಸಿದ್ದರಾಮಯ್ಯ ಅವರಿಗೆ ಖಚಿತವಾಗಿದೆ. ಅದಕ್ಕಾಗಿ ತಾವು ಮುಖ್ಯಮಂತ್ರಿಯಾಗಿದ್ದಾಗ ಅಲ್ಪಸಂಖ್ಯಾತರಿಗೆ ಸಾವಿರಾರು ಕೋಟಿ ಅನುದಾನ ನೀಡಿದ್ದೆ ಎಂದು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯಗೆ ಮುಖ್ಯಮಂತ್ರಿ ಆಗುವ ತವಕ. ಆದರೆ, ಅದಕ್ಕೆ ಡಿ.ಕೆ. ಶಿವಕುಮಾರ ಪೈಪೋಟಿ ನೀಡುತ್ತಿದ್ದಾರೆ. ಈ ಜೋಡೆತ್ತು ಈಗ ಒಂದೊಂದು ದಿಕ್ಕಿನತ್ತ ಸಾಗುತ್ತಿದ್ದು ಕಾಡೆತ್ತುಗಳಾಗಿವೆ. ಒಳಜಗಳ ಆರಂಭವಾಗಿದೆ. ಮುಂದಿನ ವಿಧಾನಸಭಾ ಚುನಾವಣೆ ವೇಳೆ ರಾಜ್ಯ ಕಾಂಗ್ರೆಸ್ ಎರಡು ಹೋಳಾಗಲಿದೆ' ಎಂದು ಭವಿಷ್ಯ ನುಡಿದರು.

'ರಾಜ್ಯದಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಜೆಡಿಎಸ್ ಮತ್ತು ಕಾಂಗ್ರೆಸ್ ಹೇಗಾದರೂ ಮಾಡಿ ಅಲ್ಪಸಂಖ್ಯಾತರ ಮತಗಳನ್ನು ಪಡೆಯಬೇಕು ಎಂದು ಆರ್‌ಎಸ್‌ಎಸ್‌ಗೆ ಬಯ್ಯುವ ಕೆಲಸ ಮಾಡುತ್ತಿವೆ. ಆ ಮೂಲಕ ಅಲ್ಪಸಂಖ್ಯಾತರ ಓಲೈಕೆಗೆ ಅವರು ಮುಂದಾಗುತ್ತಿದ್ದಾರೆ' ಎಂದು ಆರೋಪಿಸಿದರು.

ಉತ್ತರಾಖಂಡದಲ್ಲಿ ಮಳೆ ಅಬ್ಬರ: 42 ಮಂದಿ ಸಾವು

- ಪ್ರಧಾನಿಯವರು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಜತೆಗೆ ಮಾತನಾಡಿ ಪರಿಸ್ಥಿತಿಯ ಮಾಹಿತಿ ಪಡೆದಿದ್ದಾರೆ
- ವಾತಾವರಣ ಸಹಜ ಸ್ಥಿತಿಗೆ ಮರಳುವವರೆಗೆ ಚಾರ್‌ಧಾಮ್‌ನತ್ತ ಯಾತ್ರೆ ಮುಂದುವರಿಸಬಾರದು ಎಂದು ಸರ್ಕಾರ ಕೋರಿದೆ

ಡೆಹ್ರಾಡೂನ್/ನೈನಿತಾಲ್ (ಪಿಟಿಐ): ಉತ್ತರಾಖಂಡದ ವಿವಿಧ ಭಾಗಗಳಲ್ಲಿ ಭಾರಿ ಮಳೆಯ ಅಬ್ಬರ ಮಂಗಳವಾರವೂ ಮುಂದುವರಿದಿದೆ. ಮಳೆಯ ಹೊಡೆತಕ್ಕೆ ಮಂಗಳವಾರ 42 ಮಂದಿ ಬಲಿಯಾಗಿದ್ದಾರೆ. ಎರಡು ದಿನಗಳಲ್ಲಿ ಮಳೆಯಿಂದಾದ ಸಾವಿನ ಸಂಖ್ಯೆ 47ಕ್ಕೆ ಏರಿಕೆಯಾಗಿದೆ.

ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಮಳೆ ಮುಂದುವರಿದಿದೆ. ಫತೇಪುರ ಜಿಲ್ಲೆಯಲ್ಲಿ ಮನೆಯೊಂದು ಕುಸಿದು ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ. ಬೇರೆಡೆ ಇತರ ಇಬ್ಬರು ಮೃತಪಟ್ಟಿದ್ದಾರೆ. ವಾಯುಭಾರ ಕುಸಿತದಿಂದಾಗಿ ಭಾರಿ ಮಳೆಯಿಂದ ಸಮಸ್ಯೆಗೆ ಒಳಗಾಗಿದ್ದ ಒಡಿಶಾದಲ್ಲಿ ಇನ್ನೆರಡು ದಿನ ಮಳೆ ಸುರಿಯಲಿದೆ ಎಂಬ ಎಚ್ಚರಿಕೆಯನ್ನು ಹವಾಮಾನ ಇಲಾಖೆ ನೀಡಿದೆ. ಒಡಿಶಾದ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ರಾಜಸ್ಥಾನದಲ್ಲಿಯೂ ಮತ್ತೆ ಮಳೆ ಬೀಳುವ ಮುನ್ಸೂಚನೆಯನ್ನು ಇಲಾಖೆ ಕೊಟ್ಟಿದೆ.

ಉತ್ತರಾಖಂಡದ ಪ್ರವಾಸಿತಾಣ ನೈನಿತಾಲ್, ರಾಜ್ಯದ ಇತರ ಭಾಗಗಳಿಂದ ಸಂಪರ್ಕ ಕಡಿದುಕೊಂಡಿದೆ. ನೈನಿತಾಲ್ ಸಂಪರ್ಕಿಸುವ ಮೂರು ರಸ್ತೆಗಳಲ್ಲಿ ಭೂಕುಸಿತವಾಗಿದೆ.

ರಾಜ್ಯದ ಹಲವೆಡೆ ಭೂಕುಸಿತ ಸಂಭವಿಸಿದೆ. ಅವಶೇಷಗಳ ಅಡಿಯಲ್ಲಿ ಇನ್ನೂ ಹಲವರು ಸಿಲುಕಿರಬಹುದು. ಹಾಗಾಗಿ, ಸಾವಿನ ಸಂಖ್ಯೆ ಹೆಚ್ಚಬಹುದು ಎಂಬ ಭೀತಿಯನ್ನು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ವ್ಯಕ್ತಪಡಿಸಿದ್ದಾರೆ.

ಸೇನೆಯ ಮೂರು ಹೆಲಿಕಾಪ್ಟರ್‌ಗಳು ರಕ್ಷಣಾ ಕಾರ್ಯಾಚರಣೆಗಾಗಿ ತಕ್ಷಣವೇ ಬರಲಿವೆ. ಅವುಗಳಲ್ಲಿ ಎರಡನ್ನು ನೈನಿತಾಲ್ ಜಿಲ್ಲೆಗೆ ಕಳುಹಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ನೈನಿತಾಲ್ ಪಟ್ಟಣದ ಹಲವು ಭಾಗಗಳು ಜಲಾವೃತವಾಗಿವೆ. ವಿದ್ಯುತ್, ದೂರ ಸಂಪರ್ಕ ಮತ್ತು ಅಂತರ್ಜಾಲ ಸಂಪರ್ಕವು ಹಲವೆಡೆ ಸ್ಥಗಿತಗೊಂಡಿದೆ.

ಕೇರಳದಲ್ಲಿ ಮತ್ತೆ ಮಳೆ: ಕೇರಳದಲ್ಲಿ ಬುಧವಾರ–ಗುರುವಾರ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ಕೊಟ್ಟಿದೆ. ರಾಜ್ಯದ 11 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ (6 ಸೆಂ.ಮೀ. ನಿಂದ 20 ಸೆಂ. ಮೀ. ಮಳೆ) ಘೋಷಿಸಲಾಗಿದೆ. ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಇದೇ 21ರವರೆಗೆ ಈ ಹಿಂದೆಯೇ ಆರೆಂಜ್ ಅಲರ್ಟ್ ಘೋಷಿಸಲಾಗಿತ್ತು.

ಇದೇ 15–16ರಂದು ಕೇರಳದ ಕೆಲವು ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿದಿತ್ತು ಮತ್ತು ಭೂಕುಸಿತ ಸಂಭವಿಸಿತ್ತು. 24 ಜನರು ಮೃತರಾಗಿದ್ದರು. ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಇನ್ನೂ ಮುಂದುವರಿದಿದೆ.

ಕೇರಳದಲ್ಲಿ ಹತ್ತಕ್ಕೂ ಹೆಚ್ಚು ಜಲಾಶಯಗಳು ತುಂಬಿವೆ. ಹಲವು ಜಲಾಶಯಗಳಿಂದ ನೀರು ಹೊರಗೆ ಹರಿಸಲಾಗುತ್ತಿದೆ. ಅಣೆಕಟ್ಟೆಗಳ ಕೆಳ ಭಾಗಗಳಲ್ಲಿ ಇರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.



ಕೇರಳದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಇಡುಕ್ಕಿ ಜಲಾಶಯ ಭರ್ತಿಯಾಗಿದ್ದು, ಕ್ರಸ್ಟ್ ಗೇಟ್ ತೆರೆದು ನೀರನ್ನು ಹೊರಬಿಡುತ್ತಿರುವ ದೃಶ್ಯ ಮಂಗಳವಾರ ಕಂಡಿದ್ದು ಹೀಗೆ –ಪಿಟಿಐ ಚಿತ್ರ

ದಕ್ಷಿಣ ಒಳನಾಡಿನಲ್ಲಿ ಮಳೆ ಸಾಧ್ಯತೆ: 13 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಇದೇ 20ರಿಂದ 24ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನೈರುತ್ಯ ಮುಂಗಾರಿನ ಪ್ರಭಾವ ತಗ್ಗಿರುವುದರಿಂದ ರಾಜ್ಯದಾದ್ಯಂತ ಮಳೆ ನಿಂತಿತ್ತು. ಇದೇ 21ರಿಂದ ಮತ್ತೆ ಮಳೆ ಹೆಚ್ಚಾಗುವ ಹಾಗೂ ಹಿಂಗಾರು ಪ್ರವೇಶಿಸುವ ಲಕ್ಷಣಗಳು ಇರುವುದಾಗಿ ಇಲಾಖೆ ಮಾಹಿತಿ ನೀಡಿದೆ. ಆದರೆ, ದಕ್ಷಿಣ ಒಳನಾಡಿನಲ್ಲಿ ಅ.20ರಿಂದಲೇ ಮಳೆ ಹೆಚ್ಚಾಗುವ ಮುನ್ಸೂಚನೆಗಳು ಕಂಡುಬಂದಿವೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಇದೇ 24ರವರೆಗೂ ಹೆಚ್ಚು ಮಳೆಯಾಗುವ ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿಯ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅ.22ರಿಂದ ಮಳೆ ಹೆಚ್ಚಾಗಲಿದೆ.

ಮಳೆ–ಎಲ್ಲಿ, ಎಷ್ಟು?: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಮಂಗಳವಾರ 4 ಸೆಂ.ಮೀ ಮಳೆಯಾಗಿದೆ.
ಮದ್ದೂರು 3, ಬೆಂಗಳೂರು ಹಾಗೂ ರಾಮನಗರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.
ಕಾರವಾರದಲ್ಲಿ 33 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 19 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

'ಸಂಸ್ಕಾರವೇ ಇಲ್ಲದ ತುಚ್ಛ ವ್ಯಕ್ತಿ ಕಟೀಲ್'

ಪ್ರಜಾವಾಣಿ ವಾರ್ತೆ



ದಿನೇಶ್ ಗುಂಡೂರಾವ್

ಬೆಂಗಳೂರು: 'ರಾಹುಲ್ ಗಾಂಧಿ ಅವರನ್ನು ಡ್ರಗ್ ಪೆಡ್ಲರ್ ಎಂದಿರುವ ನಳಿನ್ ಕುಮಾರ್ ಕಟೀಲ್ ಜೋಕರ್ ಮಾತ್ರ ಅಲ್ಲ, ಸಂಸ್ಕಾರವೇ ಇಲ್ಲದ ತುಚ್ಛ ವ್ಯಕ್ತಿ' ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ವಾಗ್ದಾಳಿ ನಡೆಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಶತಮಾನದ ಶ್ರೇಷ್ಠ ಅವಿವೇಕಿಯಂತೆ ವರ್ತಿಸುವ ಕಟೀಲ್ ಅವರಿಗೆ ಬಹುಶಃ ಡ್ರಗ್ಸ್ ತೆಗೆದುಕೊಳ್ಳುವ ಅಭ್ಯಾಸ ಇರಬಹುದು. ಡ್ರಗ್ಸ್ ನಶೆಯಲ್ಲೇ ಇಂಥ ಅಸಂಬದ್ಧ ಮಾತುಗಳನ್ನು ಆಡುತ್ತಾರೆನೋ' ಎಂದಿದ್ದಾರೆ.

'ಕಟೀಲ್ ಅವರು ಬಿಜೆಪಿಯಂಥ ರಾಷ್ಟ್ರೀಯ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಸಭ್ಯತೆಯಿಂದ ಮಾತನಾಡುವ ಸಂಸ್ಕೃತಿ ಕಲಿಯಲಿ. ಇಲ್ಲವೇ ಈ ರೀತಿ ಮಾತನಾಡುವುದು ಆರೆಸ್ಸೆಸ್ ಕಲಿಸಿದ ಸಂಸ್ಕಾರ ಎಂದು ಬಹಿರಂಗವಾಗಿ ಒಪ್ಪಿಕೊಳ್ಳಲಿ' ಎಂದಿದ್ದಾರೆ.

'ರಾಹುಲ್ ಗಾಂಧಿ ಬಗ್ಗೆ ಕಟೀಲ್ ನೀಡಿರುವ ಹೇಳಿಕೆ, ಅವರ ಕೊಳಕು ಮನಃಸ್ಥಿತಿಯನ್ನು ಅನಾವರಣ ಮಾಡಿದೆ. ಸಂಸ್ಕೃತಿ ಮತ್ತು ದೇವರ ಬಗ್ಗೆ ಮಾತನಾಡುವ ಬಿಜೆಪಿಯವರ ಅಶ್ಲೀಲ ವಿಡಿಯೊಗಳು ಹರಿದಾಡುತ್ತಿವೆ. ಆ ಬಗ್ಗೆ ಕ್ರಮವೇನು? ರಾಹುಲ್ ಗಾಂಧಿ ಬಗ್ಗೆ ಅವಹೇಳನಕಾರಿಯಾಗಿ ಮಾತಾನಾಡಲು ಕಟೀಲ್‌ಗೆ ಯಾವ ನೈತಿಕತೆಯಿದೆ' ಎಂದೂ ಪ್ರಶ್ನಿಸಿದ್ದಾರೆ.

'ಬಿಜೆಪಿಯವರಿಗೆ ಸಂಸ್ಕಾರದ ಗಂಧಗಾಳಿ ಗೊತ್ತಿದ್ದರೆ ಹಾಗೂ ಸಾರ್ವಜನಿಕ ಭಾಷಾ ಪ್ರಯೋಗದ ಅರಿವಿದ್ದರೆ, ಅವಿವೇಕತನದ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ಕಟೀಲ್ ವಿರುದ್ಧ ಕ್ರಮ ತೆಗೆದುಕೊಳ್ಳಲಿ' ಎಂದೂ ಆಗ್ರಹಿಸಿದ್ದಾರೆ.

ಕಟೀಲ್ ಅಯೋಗ್ಯ: ಮಹದೇವಪ್ಪ



ಬೆಂಗಳೂರು: 'ಸಂವಿಧಾನ ವಿರೋಧಿ ನಡವಳಿಕೆಗಳಿಂದ ಕುಖ್ಯಾತಿ ಹೊಂದಿರುವ ಮಾನಸಿಕ ಭ್ರಷ್ಟರಾದ ಆರೆಸ್ಸೆಸ್‌ನಲ್ಲಿ ಎಂಥ ಸಂಸ್ಕೃತಿ ಕಲಿಸುತ್ತಾರೆ ಎಂಬುದಕ್ಕೆ ಅಯೋಗ್ಯನಂತೆ ಮಾತನಾಡುವ ನಳಿನ್ ಕುಮಾರ್ ಕಟೀಲ್ ಉದಾಹರಣೆ' ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಟೀಕಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಸಂವಿಧಾನ ವಿರೋಧಿಯಾದ ಆರೆಸ್ಸೆಸ್‌ನಿಂದ ಸಂವಿಧಾನಾತ್ಮಕ ಆಡಳಿತ ವ್ಯವಸ್ಥೆಗೆ ಬರುವವರು ಎಂಥ ವಂಚಕರು ಎನ್ನುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಪರಮ ಉದಾಹರಣೆ' ಎಂದಿದ್ದಾರೆ.

'ಆರೆಸ್ಸೆಸ್ ಪ್ರಕಾರ ನಮಸ್ತೆ ಸದಾ ವತ್ಸಲೇ ಮಾತೃಭೂಮಿ ಎಂದರೆ 'ಸುಳ್ಳು ಹೇಳಿ, ಮಾತೃಭೂಮಿಗೆ ವಂಚನೆ ಮಾಡುವುದು' ಎಂದೂ ವ್ಯಂಗ್ಯವಾಡಿದ್ದಾರೆ.

ಕಟೀಲ್ ವಿರುದ್ಧ ಕಾನೂನು ಹೋರಾಟ: ಶ್ರೀನಿವಾಸ

ನವದೆಹಲಿ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಬೇಷರತ್ ಕ್ಷಮೆ ಕೋರದಿದ್ದರೆ ಅವರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಾಜ್ಯ ಬಿಜೆಪಿ ಕಂಡ ಕೆಟ್ಟ ಅಧ್ಯಕ್ಷರು ಯಾರಾದರೂ ಇದ್ದರೆ ಅದು ಕಟೀಲ್ ಮಾತ್ರ ಎಂದು ಟೀಕಿಸಿದರು.

ಬಿಜೆಪಿ ರಾಷ್ಟ್ರೀಯ ಮುಖಂಡರಾದ ಜೆ.ಪಿ. ನಡ್ಡಾ, ಅಮಿತ್ ಶಾ, ಬಿ.ಎಲ್. ಸಂತೋಷ್ ಅವರು ಕೂಡಲೇ ಕಟೀಲ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಅವರ ವಿರುದ್ಧ ಕಾನೂನು ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಅವರು ಹೇಳಿದರು.



ಸುಭಾಷಿತ

ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು ಜೇನುತುಪ್ಪವ ಹೊಯ್ದಡೆ
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ.

-ಬಸವಣ್ಣ

ಜಾಗತಿಕ ಹಸಿವಿನ ಸೂಚ್ಯಂಕ ಸ್ವವಿಮರ್ಶೆಗೆ ಎಚ್ಚರಿಕೆಯ ಗಂಟೆ

‘ಜಾಗತಿಕ ಹಸಿವಿನ ಸೂಚ್ಯಂಕ- 2021’ರಲ್ಲಿ ಭಾರತ ತೀರಾ ಕೆಳಗಿನ ರ್‍ಯಾಂಕ್ ಪಡೆದಿರುವುದು ದೇಶದಲ್ಲಿ ಚಾಲ್ತಿಯಲ್ಲಿರುವ ಅಭಿವೃದ್ಧಿ ಪರಿಕಲ್ಪನೆಗಳ ಟೊಳ್ಳುತನವನ್ನು ಸೂಚಿಸುವಂತಿದೆ. 2020ರ ‘ಹಸಿವಿನ ಸೂಚ್ಯಂಕ’ದಲ್ಲಿ 107 ದೇಶಗಳ ಪೈಕಿ 94ನೇ ಸ್ಥಾನದಲ್ಲಿದ್ದ ಭಾರತ, ಈ ವರ್ಷ 116 ದೇಶಗಳ ಪೈಕಿ 101ನೇ ಸ್ಥಾನ ಪಡೆದಿದೆ. ನೆರೆದೇಶಗಳಾದ ಬಾಂಗ್ಲಾದೇಶ (76), ಪಾಕಿಸ್ತಾನ (92), ನೇಪಾಳ (76) ಹಾಗೂ ಮ್ಯಾನ್ಮಾರ್ (71) ಭಾರತಕ್ಕಿಂತಲೂ ಉತ್ತಮ ಸ್ಥಾನದಲ್ಲಿವೆ. ದಕ್ಷಿಣ ಏಷ್ಯಾದಲ್ಲಿ ಯುದ್ಧ ಮತ್ತು ಆಂತರಿಕ ಸಂಘರ್ಷದ ದಳ್ಳುರಿಗೆ ಸಿಲುಕಿರುವ ಅಫ್ಗಾನಿಸ್ತಾನ ಮಾತ್ರ ಭಾರತಕ್ಕಿಂತ ಕಳಪೆ ಸ್ಥಿತಿಯಲ್ಲಿದೆ. ಐರ್ಲೆಂಡ್‌ನ ‘ಕನ್ಸರ್ನ್ ವರ್ಲ್ಡ್‌ವೈಡ್’ ಮತ್ತು ಜರ್ಮನಿಯ ‘ವೆಲ್ತ್ ಹಂಗರ್ ಹಿಲ್ಫ್’ ಸಂಸ್ಥೆಗಳು, ವಿಶ್ವದ 116 ದೇಶಗಳಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ‘ಹಸಿವಿನ ಸೂಚ್ಯಂಕ’ (ಜಿಎಚ್‌ಐ) ಸಿದ್ಧಪಡಿಸಿವೆ. ಅಪೌಷ್ಟಿಕತೆ, ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ, ಎತ್ತರ ಮತ್ತು ತೂಕ ಕಡಿಮೆ ಇರುವುದನ್ನು ಪರಿಗಣಿಸಿ ಸೂಚ್ಯಂಕವನ್ನು ಸಿದ್ಧಪಡಿಸಲಾಗುತ್ತದೆ. ‘ಭಾರತದಲ್ಲಿನ ಹಸಿವಿನ ಪರಿಸ್ಥಿತಿಯು ಅಪಾಯಕಾರಿ’ ಎಂದು ಜಿಎಚ್‌ಐ ವರದಿ ಆತಂಕ ವ್ಯಕ್ತಪಡಿಸಿದೆ. ಯೆಮನ್ ಮತ್ತು ಸೊಮಾಲಿಯಾದಂತಹ ಹದಿನೈದು ಕಡು ಬಡ ದೇಶಗಳ ಸಾಲಿಗೆ ಭಾರತ ಸೇರಿಕೊಂಡಿದೆ. ಈ ದುಃಸ್ಥಿತಿ ನಮಗೆ ಕಳವಳ ಹುಟ್ಟಿಸಬೇಕು, ಅವಮಾನ ಉಂಟು ಮಾಡಬೇಕು. ಹಸಿವಿನ ಸೂಚ್ಯಂಕದಲ್ಲಿ ಪಡೆದಿರುವ ಕಳಪೆ ಸ್ಥಾನ ದೇಶದ ಅಭಿವೃದ್ಧಿ ಕಾರ್ಯ-ಕ್ರಮಗಳ ವೈಫಲ್ಯವನ್ನು ಸೂಚಿಸುತ್ತಿದೆ. ಸರ್ಕಾರದ ಯೋಜನೆಗಳು ಅರ್ಹರಿಗೆ ತಲುಪುತ್ತಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಿದೆ. ಕೊರೊನಾ ವೈರಾಣುವನ್ನು ನಿಯಂತ್ರಿಸುವ ಉದ್ದೇಶದಿಂದ ವಿಧಿಸಲಾಗಿದ್ದ ಲಾಕ್‌ಡೌನ್ ಜನರ ಮೇಲೆ ತೀವ್ರ ಪರಿಣಾಮ ಬೀರಿರುವುದು ಭಾರತದ ಕಳಪೆ ಸಾಧನೆಗೆ ಕಾರಣಗಳಲ್ಲೊಂದಾಗಿದೆ.



ಹಸಿವಿನ ಸೂಚ್ಯಂಕದಲ್ಲಿ ದೇಶ ಪಡೆದಿರುವ ಕಳಪೆ ರ್‍ಯಾಂಕ್, ಸರ್ಕಾರದ ಯೋಜನೆಗಳು ಅರ್ಹರಿಗೆ ತಲುಪುತ್ತಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಿದೆ

ಆಹಾರ ಉತ್ಪಾದನೆಯಲ್ಲಿ ಮುಂಚೂಣಿಯ-ಲ್ಲಿರುವ ರಾಷ್ಟ್ರಗಳಲ್ಲಿ ಭಾರತವೂ ಒಂದು. ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯನ್ನು ಹೊಂದಿರುವ ದೇಶ ಎನ್ನುವ ಹೆಗ್ಗಳಿಕೆಯೊಂದಿಗೆ, ಬಡತನ, ಹಸಿವು ಹಾಗೂ ಅಪೌಷ್ಟಿಕತೆಯ ನೆಲೆಯೂ ಆಗಿರುವುದು ವಿಪರ್ಯಾಸ. ಜಾಗತಿಕ ಹಸಿವು ಸೂಚ್ಯಂಕ ಪಟ್ಟಿಯಲ್ಲಿ ಭಾರತ 2015ರಲ್ಲಿ 93 ಹಾಗೂ 2000ದಲ್ಲಿ 83ನೇ ಸ್ಥಾನ ಪಡೆದಿತ್ತು. ಈಗಿನ 101ನೇ ಸ್ಥಾನವನ್ನು ಗಮನಿಸಿದರೆ, ಕಳೆದ ಎರಡು ದಶಕಗಳ ಅವಧಿಯಲ್ಲಿ ಆಹಾರದ ಸಮಸ್ಯೆಯನ್ನು ಪರಿಹರಿಸುವ ಸವಾಲಿನಲ್ಲಿ ನಾವು ಇನ್ನಷ್ಟು ಹಿಂದುಳಿದಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನಡೆಯನ್ನು ಪ್ರಾಂಜಲ ಮನಸ್ಸಿನಿಂದ ನೋಡುವುದು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹಸಿವಿನ ಸೂಚ್ಯಂಕದ ವರದಿಗೆ ಸರ್ಕಾರದ ಕಡೆಯಿಂದ ಸ್ವವಿಮರ್ಶೆಯ ಪ್ರತಿಕ್ರಿಯೆ ವ್ಯಕ್ತವಾಗುವ ಬದಲು, ಭಾರತದ ವರ್ಚಸ್ಸನ್ನು ಕುಂದಿಸುವ ಪಿತೂರಿಯ ರೂಪದಲ್ಲಿ ವರದಿಯನ್ನು ನೋಡಲಾಗುತ್ತಿದೆ. ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯು ವಾಸ್ತವವನ್ನು ಒಪ್ಪಿಕೊಳ್ಳುವುದೇ ಆಗಿದೆ. ಸತ್ಯವನ್ನು ಒಪ್ಪಿಕೊಳ್ಳಲು ಹಿಂದೆಮುಂದೆ ನೋಡುವುದು ಹಾಗೂ ಸಮಾಜದಲ್ಲಿ ಎಲ್ಲವೂ ಸರಿ ಇದೆ ಎನ್ನುವ ಭ್ರಮೆಯನ್ನು ಹುಟ್ಟಿಸುವುದರಿಂದ ಬಿಕ್ಕಟ್ಟು ಬಗೆಹರಿಯುವುದಿಲ್ಲ. ಗೋಡೆಗಳನ್ನು ಕಟ್ಟುವ ಮೂಲಕ ಕೊಳೆಗೇರಿಗಳನ್ನು ಮರೆಮಾಚಬಹುದೇ ಹೊರತು ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಸ್ವಾತಂತ್ರ್ಯಾನಂತರದ ಏಳೂವರೆ ದಶಕಗಳ ನಂತರವೂ ಪಡಿತರ ವಿತರಣೆಯಲ್ಲಿನ ಅವ್ಯವಸ್ಥೆ ಹೋಗಲಾಡಿಸಲು ಸಾಧ್ಯವಾಗಿಲ್ಲ; ತಾಯಂದಿರು ಮತ್ತು ಹಸುಗೂಸುಗಳ ಪೋಷಣೆ ಗಂಭೀರ ಸಮಸ್ಯೆಯಾಗಿಯೇ ಉಳಿದಿದೆ. ಈ ಸಮಸ್ಯೆಗಳನ್ನು ಬಗೆಹರಿಸುವ ದಿಸೆಯಲ್ಲಿ ಸರ್ಕಾರ ಸ್ಪಷ್ಟ ಕಾರ್ಯಯೋಜನೆ ರೂಪಿಸಬೇಕೇ ವಿನಾ ಸಮಸ್ಯೆಯನ್ನೇ ನಿರಾಕರಿಸುವುದು ವಿವೇಕದ ನಡವಳಿಕೆಯಲ್ಲ.

ಹಸಿವಿನ ಸಮಸ್ಯೆಯ ಜೊತೆಗೆ ಆಹಾರವನ್ನು ಪೋಲು ಮಾಡುವ ಹಾಗೂ ಗೋದಾಮುಗಳಲ್ಲಿ ಕೊಳೆಯಿಸುವ ಘಟನೆಗಳು ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವುದನ್ನು ಗಮನಿಸಬೇಕು. ಕೊರೊನಾ ನಿಯಂತ್ರಣಕ್ಕಾಗಿ ದೇಶದಲ್ಲಿ ಲಾಕ್‌ಡೌನ್ ಜಾರಿಗೊಂಡು, ಲಕ್ಷಾಂತರ ವಲಸೆ ಕಾರ್ಮಿಕರು ಹಸಿವಿನಿಂದ ಒದ್ದಾಡುತ್ತಿದ್ದ ಸಮಯದಲ್ಲೇ ಸುಮಾರು 8 ಕೋಟಿ ಟನ್ ಆಹಾರಧಾನ್ಯಗಳು ಗೋದಾಮುಗಳಲ್ಲಿ ಕೊಳೆಯುವ ಸ್ಥಿತಿಯಲ್ಲಿದ್ದವು ಹಾಗೂ ಮುಗ್ಗಲು ಅಕ್ಕಿಯಿಂದ ಸ್ಯಾನಿಟೈಸರ್ ತಯಾ-ರಿಸಬೇಕೆನ್ನುವ ಚಿಂತನೆ ವ್ಯಕ್ತವಾಗಿತ್ತು. ಭಾರತೀಯ ಆಹಾರ ನಿಗಮದ ಗೋದಾಮುಗಳಲ್ಲಿ ಪ್ರತಿವರ್ಷ ಮೂರು ಸಾವಿರ ಟನ್‌ಗೂ ಹೆಚ್ಚಿನ ಆಹಾರಧಾನ್ಯಗಳು ಹಾಳಾಗುತ್ತಿರುವುದರ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾಗಿದೆ. ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಶಾಲಾ ಮಕ್ಕಳಿಗೆ ವಿತರಿಸಲು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಗೋದಾಮುಗಳಲ್ಲಿ ಸಂಗ್ರಹಿಸಿದ್ದ ಸಾವಿರಾರು ಟನ್ ಆಹಾರ ಧಾನ್ಯಗಳು ಅಧಿಕಾರಿಗಳ ನಡುವಿನ ಸಂವಹನದ ಕೊರತೆಯಿಂದಾಗಿ ಕೊಳೆತುಹೋಗಿದ್ದ ಘಟನೆ ಕಳೆದ ವರ್ಷ ವರದಿಯಾಗಿತ್ತು. ಶ್ರೀಮಂತವರ್ಗ ಪ್ರತಿನಿತ್ಯ ಸೇವಿಸುವ ಆಹಾರದಲ್ಲಿ ಐದನೇ ಒಂದು ಪಾಲು ಪೋಲಾಗುತ್ತಿದೆ ಎನ್ನುವ ವರದಿಯೂ ಇದೆ. ಬಡತನ ಮತ್ತು ಹಸಿವು ನಿರ್ಮೂಲನೆಗೆ ‘ಗರೀಬಿ ಹಟಾವೊ’ದಿಂದ ‘ಅನ್ನಭಾಗ್ಯ’ದವರೆಗಿನ ಹಲವು ಯೋಜನೆಗಳು ದೇಶದಲ್ಲಿ ಜಾರಿಗೊಂಡಿವೆ. ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಪಡಿತರ ವಿತರಿಸುವ ಯೋಜನೆಗಳು ಎಲ್ಲ ರಾಜ್ಯಗಳಲ್ಲೂ ಇವೆ. ಇಷ್ಟೆಲ್ಲ ಯೋಜನೆಗಳ ನಂತರವೂ ಹಸಿವಿನ ಸಮಸ್ಯೆ ಬಗೆಹರಿದಿಲ್ಲ. ‘ಹಸಿವುಮುಕ್ತ ಭಾರತ’ದ ಘೋಷಣೆ ಮಾತಿನ ರೂಪದಿಂದ ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ, ಆಹಾರಧಾನ್ಯಗಳ ವೈಜ್ಞಾನಿಕ ಸಂಗ್ರಹ ಮತ್ತು ವಿತರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್

ಹಕ್ಕಿಗಾಗಿ ದನಿ ಎತ್ತೋಣ



ವೈವಿಧ್ಯಕ್ಕೆ ಅವಕಾಶವಿಲ್ಲದ ಸಮಾಜದಲ್ಲಿ ಮಾನವೀಯತೆಗೂ ಸ್ಥಳವಿರುವುದಿಲ್ಲ. ನಾವು ಎಲ್ಲೆಲ್ಲಿ ದ್ವೇಷದ ವಾತಾವರಣವನ್ನು ಕಾಣುತ್ತೇವೋ ಅಲ್ಲೆಲ್ಲಾ ದನಿ ಎತ್ತಬೇಕು, ಮಾನವ ಹಕ್ಕುಗಳಿಗಾಗಿ ಹಾಗೂ ಎಲ್ಲರ ಘನತೆಯ ರಕ್ಷಣೆಯ ಪರವಾಗಿ ನಿಲ್ಲಬೇಕು.

ಆ್ಯಂಟೊನಿಯೊ ಗುಟೆರಸ್, ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ

ಕಿಡಿನುಡಿ



ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ತಂಡದೊಂದಿಗೆ ಭಾರತವು ಕ್ರಿಕೆಟ್ ಆಡಬಾರದು. ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಉಭಯ ದೇಶಗಳ ಪಂದ್ಯವನ್ನು ರದ್ದು ಮಾಡಬೇಕು. ಭಾರತದ ವಿರುದ್ಧ ಭಯೋತ್ಪಾದನೆ ಚಟುವಟಿಕೆಗೆ ಬೆಂಬಲ ನೀಡುವುದನ್ನು ನಿಲ್ಲಿಸುವವರೆಗೂ ಪಾಕ್ ಜೊತೆ ಕ್ರಿಕೆಟ್ ಸಂಬಂಧಗಳನ್ನು ಸಂಪೂರ್ಣವಾಗಿ ಕಡಿದುಕೊಳ್ಳ-ಬೇಕು. ಈ ಮಾತಿಗೆ ಬಿಜೆಪಿ ನಾಯಕರು ಮತ್ತು ಪ್ರಧಾನಿ ಸಹಮತ ವ್ಯಕ್ತಪಡಿಸುತ್ತಾರೆಂಬ ವಿಶ್ವಾಸವಿದೆ.

ಅತಿಶಿ, ಆಮ್ ಆದ್ಮಿ ಪಕ್ಷದ ಶಾಸಕಿ

25 ವರ್ಷಗಳ ಹಿಂದೆ

ಭಾನುವಾರ, 20-10-1996

• ಸೌಂದರ್ಯ ಸ್ಪರ್ಧೆ ‘ಕ್ಷುಲ್ಲಕ’, ಪ್ರತಿಭಟನೆ ಸಲ್ಲ

ಬೆಂಗಳೂರು, ಅ. 19– ‘ಮಹಿಳೆಯರನ್ನು ಕಾಡುತ್ತಿರುವ ಸಾವಿರಾರು ಜ್ವಲಂತ ಸಮಸ್ಯೆ-ಗಳಿರುವಾಗ ವಿಶ್ವ ಸುಂದರಿ ಸ್ಪರ್ಧೆಯಂತಹ ಕ್ಷುಲ್ಲಕ ವಿಷಯಕ್ಕೆ ಪ್ರತಿಭಟಿಸುವುದು ಸರಿಯಲ್ಲ...’

ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ವಿವಿಧ ಕ್ಷೇತ್ರಗಳಲ್ಲಿ ಸಾಕಷ್ಟು ಹೆಸರು ಮಾಡಿರುವ ಮಹಿಳೆಯರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ ಚರ್ಚೆಯಲ್ಲಿ ರಂಗಭೂಮಿ ಮತ್ತು ಚಲನಚಿತ್ರ ಕಲಾವಿದೆ ಅರುಂಧತಿ ನಾಗ್, ಭಾರತದ ಮಾಜಿ ಸುಂದರಿ ರೇಖಾ ಹಂದೆ, ವೀಣಾ ಕಲಾವಿದೆ ಸುಮಾ ಸುಧೀಂದ್ರ, ಶ್ರೇಷ್ಠ ಪ್ರಸೂತಿ ತಜ್ಞೆ ಡಾ. ಕಾಮಿನಿ ರಾವ್, ಖ್ಯಾತ ನೃತ್ಯ ಕಲಾವಿದೆ ಪ್ರತಿಭಾ ಪ್ರಹ್ಲಾದ್ ಹಾಗೂ ವಿದ್ಯಾರ್ಥಿನಿ ನಾಯಕಿ ಉಮಾ ಬೆಂಗಳೂರಿನಲ್ಲಿ ನಡೆಯಲಿರುವ ವಿಶ್ವಸುಂದರಿ ಸ್ಪರ್ಧೆಯನ್ನು ಸಮರ್ಥಿಸಿ-ಕೊಂಡರು.

‘ಜಿಮ್ನಾಸ್ಟಿಕ್ಸ್‌ನಲ್ಲಿ ದೇಹಕ್ಕಂಟಿದ ಉಡುಪನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಸೌಂದರ್ಯ ಸ್ಪರ್ಧೆಯಲ್ಲಿ ಈಜುಡುಗೆ ಧರಿಸಿದರೆ ಪ್ರತಿಭಟಿಸುತ್ತೇವೆ. ಅದನ್ನು ಅಶ್ಲೀಲ ಎನ್ನುತ್ತೇವೆ. ಈಜುವಾಗ ಈಜುಡುಗೆ ಧರಿಸದೆ, ಸೀರೆ ಉಡಲು ಸಾಧ್ಯವೇ?’ ಎಂದು ರೇಖಾ ಹಂದೆ ಪ್ರಶ್ನಿಸಿದರು.

50 ವರ್ಷಗಳ ಹಿಂದೆ

ಬುಧವಾರ, 20-10-1971

• ಭಾರತ- ಪಾಕ್ ಭಿನ್ನಾಭಿಪ್ರಾಯ ನಿವಾರಣೆಗೆ ಮಾತುಕತೆ ಮದ್ದು, ಯುದ್ಧವಲ್ಲ: ಯಾಹ್ಯಾಖಾನ್

ಪ್ಯಾರಿಸ್, ಅ. 19– ಪಾಕಿಸ್ತಾನ ಮತ್ತು ಭಾರತದ ನಡುವಣ ಭಿನ್ನಾಭಿಪ್ರಾಯಗಳನ್ನು ಮಾತುಕತೆಯ ಮೂಲಕ ಬಗೆಹರಿಸಬೇಕೇ ಹೊರತು ಯುದ್ಧದಿಂದಲ್ಲ ಎಂದು ಪಾಕಿಸ್ತಾನದ ಅಧ್ಯಕ್ಷ ಯಾಹ್ಯಾಖಾನ್‌ರವರು ಇಲ್ಲಿ ಇಂದು ಪ್ರಕಟವಾದ ಸಂದರ್ಶನವೊಂದರಲ್ಲಿ ತಿಳಿಸಿದರು.

‘ಯುದ್ಧವು ಜನತೆಯ ಕಷ್ಟಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ. ಇದರಿಂದ ನಿರಾಶ್ರಿತರ ಸಮಸ್ಯೆ ಬಗೆಹರಿಯದು’ ಎಂದು ಫ್ರೆಂಚ್ ದಿನಪತ್ರಿಕೆ ‘ಲೇಮಾಂಡ್’ಗೆ ತಿಳಿಸಿದರು.

ಸರಳ ಕ್ರಮಗಳ ಮೂಲಕ ಭೂಕಂಪಪೀಡಿತ ಜನರ ಆತಂಕ ದೂರ ಮಾಡಬಹುದು

ಚಿಂಚೋಳಿ: ಭೂಕಂಪನದ ಮೂಲ?



ವಿಶ್ಲೇಷಣೆ

ಡಾ. ಬಿ.ಸಿ.ಪ್ರಭಾಕರ್

ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಸುತ್ತಮುತ್ತಲಿನ ಸುಮಾರು 25 ಹಳ್ಳಿಗಳಲ್ಲಿ ಕೆಲವು ದಿನಗಳಿಂದ ಭೂಮಿ ಕಂಪಿಸಿ ಜನ ಭಯಭೀತರಾಗಿದ್ದಾರೆ. ಈ ಭಾಗದಲ್ಲಿ ಭೂಮಿ ಕಂಪಿಸುವುದು ಹಲವಾರು ವರ್ಷಗಳಿಂದ ನಡೆದೇ ಇದೆ. 1993ರಿಂದ ಇತ್ತೀಚಿನ ವರ್ಷಗಳಲ್ಲಿ, ಅಂದರೆ 2008, 2015, 2016ರಲ್ಲಿ ಭೂಕಂಪವಾಗಿದೆ, ಮತ್ತೆ ಮುಂದೆಯೂ ಆಗಲಿದೆ!

ಈ ಹಿನ್ನೆಲೆಯಲ್ಲಿ ಮೂರು ಸರಳ ಕ್ರಮಗಳು ಚಿಂಚೋಳಿಯ ಭೂಕಂಪಪೀಡಿತ ಜನರ ಆತಂಕ ಮತ್ತು ಭಯವನ್ನು ದೂರ ಮಾಡಬಲ್ಲವು: 1. ಇಲ್ಲಿ ದೊಡ್ಡ ಪ್ರಮಾಣದ ಭೂಕಂಪದ ಸಂಭವ ಕಡಿಮೆ ಎಂಬ ಅರಿವು ಮೂಡಿಸುವುದು (ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆಯ ನಕ್ಷೆಯನ್ವಯ ಈ ಪ್ರದೇಶ IIನೇ ವಲಯದಲ್ಲಿದ್ದು ಕಡಿಮೆ ತೀವ್ರತೆಯ ಭೂಕಂಪ ಪ್ರದೇಶವೆಂದು ಗುರುತಿಸಲ್ಪಟ್ಟಿದೆ).

2. ಪ್ರತೀ ಹಳ್ಳಿಯಲ್ಲಿ ಜನಸಂಪರ್ಕ ಸಭೆ ನಡೆಸಿ ಭೂಕಂಪದ ಬಗ್ಗೆ ಸಾಮಾನ್ಯ ಮಾಹಿತಿ ಮತ್ತು ಕಂಪನಗಳಾದಾಗ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಕರಪತ್ರ ಹೊರಡಿಸುವುದು ಹಾಗೂ ಪ್ರಾತ್ಯಕ್ಷಿಕೆ ನೀಡುವುದು.

3. ಪ್ರತೀ ಕುಟುಂಬಕ್ಕೆ ಒಂದರಂತೆ ರಾತ್ರಿ ಮಲಗಲು ತಗಡು ಹೊದಿಕೆಯ ಶೆಡ್ ನಿರ್ಮಿಸಿಕೊಡುವುದು (ಹಗಲು ಭೂಕಂಪ ಸಂಭವಿಸಿದರೆ ಹೇಗಾದರೂ ರಕ್ಷಣೆ ಮಾಡಿಕೊಳ್ಳಬಹುದು). ಜೊತೆಗೆ ಈಗಿರುವ ಮನೆಗಳನ್ನು ಕಂಪನ ತಡೆಯಬಲ್ಲಂತೆ ಸದೃಢಗೊಳಿಸುವುದು ಮತ್ತು ಮುಂದೆ ಕಟ್ಟುವ ಮನೆಗಳಲ್ಲಿ ಭೂಕಂಪ ತಡೆಯುವ ತಂತ್ರಜ್ಞಾನ ಅಳವಡಿಸಿಕೊಳ್ಳುವುದರ ಬಗ್ಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳುವುದು.

ಇದುವರೆಗೆ ಲಭ್ಯವಿರುವ ಮಾಹಿತಿಯ ಪ್ರಕಾರ, ಈ ಭಾಗದಲ್ಲಿ ಯಾವುದೇ ದೊಡ್ಡ ಸ್ತರಭಂಗಗಳಾಗಲೀ ಅಥವಾ ಭೂಚಿಪ್ಪುಗಳ (ಕ್ರಸ್ಟಲ್ ಪ್ಲೇಟ್ಸ್) ಸರಿದಾಡಿಕೆಯಾಗಲೀ ಕಂಡುಬಂದಿಲ್ಲ ಮತ್ತು ಇವು ಇಲ್ಲದೇ ಇರುವುದರಿಂದ ದೊಡ್ಡ ಭೂಕಂಪಗಳು ಉಂಟಾಗುವ ಸಾಧ್ಯತೆ ಕಡಿಮೆ. ಈಗ ಸಂಭವಿಸುತ್ತಿರುವ ಸಣ್ಣ ಕಂಪನಗಳಿಗೆ ಕಾರಣ ಹುಡುಕುತ್ತಾ ಹೋದರೆ, ಆಳದಲ್ಲಿ ಜರುಗುತ್ತಿರಬಹುದಾದ ರಾಸಾಯನಿಕ ಕ್ರಿಯೆಗಳ ಸುಳಿವು ಗೋಚರವಾಗುತ್ತದೆ. ಅದನ್ನು ಅರ್ಥೈಸಿಕೊಳ್ಳಬೇಕಾದರೆ ನಾವು ಸುಣ್ಣ ತಯಾರಿಸುವ ವಿಧಾನವನ್ನು ಜ್ಞಾಪಿಸಿಕೊಳ್ಳಬೇಕು. ಸುಣ್ಣವನ್ನು ತಯಾರಿಸಲು ಸುಣ್ಣದ ಕಲ್ಲನ್ನು ಪುಡಿ ಮಾಡಿ ಕೂಪಿನಲ್ಲಿ (kiln) ಸುಮಾರು 1000 ಡಿಗ್ರಿ ಸೆಲ್ಸಿಯಸ್ ಶಾಖದಲ್ಲಿ ಸುಟ್ಟಾಗ ಕ್ಯಾಲ್ಸಿಯಂ ಕಾರ್ಬೋನೇಟ್ ಅಂಶ ಹೊಂದಿರುವ ಸುಣ್ಣದಕಲ್ಲು ತ್ವರಿತ ಸುಣ್ಣವಾಗಿ (ಕ್ವಿಕ್ ಲೈಮ್) ಪರಿವರ್ತಿತವಾಗುತ್ತದೆ. ಅಂದರೆ ಕ್ಯಾಲ್ಸಿಯಂ ಕಾರ್ಬೋನೇಟ್ ಇಂದ ಕ್ಯಾಲ್ಸಿಯಂ ಆಕ್ಸೈಡ್ ಆಗಿ ಬದಲಾವಣೆ ಹೊಂದುತ್ತದೆ. ಈ ಕ್ರಿಯೆಯಲ್ಲಿ ಇಂಗಾಲದ ಡೈಆಕ್ಸೈಡ್ ಕೂಡ ಬಿಡುಗಡೆಯಾಗುತ್ತದೆ. ಈ ರೀತಿ ತಯಾರಾದ ತ್ವರಿತ ಸುಣ್ಣ ತಣ್ಣಗಾದಮೇಲೆ ನೀರು ಸೇರಿಸಿದರೆ ಅದು ಕೊತಕೊತ ಕುದಿದು ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಆಗಿ ಬದಲಾಗುತ್ತದೆ.

ಚಿಂಚೋಳಿ ಪ್ರಾಂತ್ಯದ ಮೇಲ್ಭಾಗದಲ್ಲಿ ಬೆಸಾಲ್ಟ್ ಮತ್ತು ಅದರ ಕೆಳಗೆ ಸುಣ್ಣದ ಕಲ್ಲುಗಳು ಇವೆ. ಆದರೆ ಇವೆರಡೂ ವಿಭಿನ್ನ ಕಾಲಘಟ್ಟದಲ್ಲಿ ರಚನೆಯಾದವು. ಸುಣ್ಣದ ಕಲ್ಲುಗಳು ಸುಮಾರು 80 ಕೋಟಿ ವರ್ಷಗಳ ಹಿಂದೆ ಉಂಟಾಗಿದ್ದು, ಬೆಸಾಲ್ಟ್ ಶಿಲೆಯು ಕೇವಲ 6 ಕೋಟಿ ವರ್ಷಗಳ ಹಿಂದೆ ಉಗಮವಾಯಿತು. ಡೆಕ್ಕನ್ ಜ್ವಾಲಾಮುಖಿ ಎಂಬ ಮಹಾನ್ ಪ್ರಳಯಕಾರಿ ಜ್ವಾಲಾಮುಖಿಗಳು ಭಾರತದ ಐದು ಲಕ್ಷ ಚದರ ಕಿಲೊ-ಮೀಟರ್‌ನಷ್ಟು ಭೂಪ್ರದೇಶದಲ್ಲಿ ಹರಡಿ ಅಗಾಧ ಭೂವೈಜ್ಞಾನಿಕ ಮಾರ್ಪಾಡುಗಳಿಗೆ ಕಾರಣವಾದವು. 20 ಮೀಟರ್‌ನಿಂದ 5,000 ಮೀಟರ್‌ನಷ್ಟು ದಪ್ಪ ಪದರದ ಬೆಸಾಲ್ಟ್ ಶಿಲೆಗಳು ಸೃಷ್ಟಿಯಾಗಲು ಕಾರಣವಾದ ಈ ಜ್ವಾಲಾಮುಖಿಗಳು ಉತ್ತರ ಕರ್ನಾಟಕದ ಹಲವು ಪ್ರಾಂತ್ಯಗಳನ್ನು ಆವರಿಸಿದವು (ಮನುಷ್ಯನ ಸಂತತಿ ಭೂಮಿಯ ಮೇಲೆ ಆಗ ಇರಲಿಲ್ಲ, ಅದು ಬೇರೆ ಮಾತು!).

ಬೆಸಾಲ್ಟ್ ಶಿಲೆಯ ಉಗಮಕ್ಕೆ ಮುಂಚೆ, ಸುಣ್ಣದ ಕಲ್ಲುಗಳು ಶಿಥಿಲೀಕರಣಕ್ಕೆ ಒಳಪಟ್ಟು ಭೌತಿಕ ಮತ್ತು ರಾಸಾಯನಿಕ ಮಾರ್ಪಾಡುಗಳಾದವು. ಸುಣ್ಣದಕಲ್ಲು ಉಳಿದ ಕಲ್ಲುಗಳಿಗಿಂತ ಹೆಚ್ಚು ಬೇಗ ರಾಸಾಯನಿಕ ಕ್ರಿಯೆಗಳಿಗೆ ಒಳಪಡುವುದರಿಂದ ಅವುಗಳ ಮೇಲ್ಪದರದಲ್ಲಿ ಕ್ಯಾಲ್ಸಿಯಂಯುಕ್ತ ಮಣ್ಣಿನ ಪದರದ ನಿರ್ಮಾಣ, ಟೊಳ್ಳುಗಳು ಉಂಟಾಗುವಿಕೆ, ಅವು ದೊಡ್ಡ ಗುಹೆಗಳಾಗಿ ಮಾರ್ಪಾಡಾಗುವುದು ಮುಂತಾದ ಕ್ರಿಯೆಗಳು ನಿರಂತರವಾಗಿ ಜರುಗಿವೆ. ಕ್ಯಾಲ್ಸಿಯಂಯುಕ್ತ ಮಣ್ಣಿನ ಪದರದಲ್ಲಿ ಕ್ಯಾಲ್ಕ್ರೀಟ್ ಎಂಬ ಕ್ಯಾಲ್ಸಿಯಂ ಕಾರ್ಬೋನೇಟ್- ಸಮೃದ್ಧ ಪದರ ನಿರ್ಮಾಣವಾಗುತ್ತಾ ಹೋಗುತ್ತದೆ. ದೀರ್ಘ ಕಾಲದಲ್ಲಿ ಅನೇಕ ಮೀಟರ್ ದಪ್ಪದ ಇಂತಹ ಪದರಗಳು ಉಂಟಾಗಬಲ್ಲವು. ಇಂತಹ ಶಿಥಿಲೀಕರಣಗೊಂಡ ಮತ್ತು ಮಾರ್ಪಾಡಾದ ಸುಣ್ಣದ ಕಲ್ಲಿನ ಪದರದ ಮೇಲೆ 1000– 1200 ಡಿ.ಸೆಂ. ಉಷ್ಣಾಂಶದ ಲಾವಾರಸ ಹರಿದಾಗ, ಸುಣ್ಣದಕಲ್ಲು ಬೆಂದು ತ್ವರಿತ ಸುಣ್ಣ (ಕ್ಯಾಲ್ಸಿಯಂ ಆಕ್ಸೈಡ್) ಆಗಿ ಪರಿವರ್ತಿತವಾಗುತ್ತದೆ ಮತ್ತು ಅಗಾಧ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ಕೂಡ ಬಿಡುಗಡೆಯಾಗುತ್ತದೆ. ಇಂಗಾಲದ ಡೈ ಆಕ್ಸೈಡ್ ವಾತಾವರಣಕ್ಕೆ ಸೇರಿಹೋದರೂ ಸ್ವಲ್ಪ ಪ್ರಮಾಣದ ಅನಿಲ ಅಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಕಾಲಾಂತರದಲ್ಲಿ ತ್ವರಿತ ಸುಣ್ಣ ಮತ್ತು ಇಂಗಾಲದ ಡೈ ಆಕ್ಸೈಡ್ ಲಾವಾರಸದಲ್ಲಿ ಹುದುಗಿ ಹೋಗಿ ಶಾಶ್ವತವಾಗಿ ಬಂದಿಯಾಗುತ್ತವೆ ಮತ್ತು ಲಾವಾರಸ ಗಟ್ಟಿಯಾಗಿ ಬೆಸಾಲ್ಟ್ ಶಿಲೆಯಾಗುತ್ತದೆ. ಆದರೂ ಬೆಸಾಲ್ಟ್ ಶಿಲೆಯ ಸುಪ್ತ ಶಾಖ ಬಹಳ ಕಾಲ ಸುಣ್ಣದಕಲ್ಲು ಪದರಗಳನ್ನು ನಿರಂತರವಾಗಿ ಶಾಖಕ್ಕೆ ಒಳಪಡಿಸಿ ಕ್ಯಾಲ್ಸಿಯಂ ಆಕ್ಸೈಡ್ ಆಗಿ ಮಾರ್ಪಾಡಾಗಲು ಕಾರಣ-ವಾಗುತ್ತದೆ.

ಅಂದು ಭೂಗರ್ಭದಲ್ಲಿ ಹುದುಗಿಹೋದ ತ್ವರಿತ ಸುಣ್ಣ ಮತ್ತು ಇಂಗಾಲದ ಅನಿಲಗಳು ಇಂದು ಚಲನಶೀಲವಾಗಿ-ರುವುದೇ ಚಿಂಚೋಳಿಯ ಕಂಪನಗಳಿಗೆ ಪ್ರಮುಖ ಕಾರಣ. ಅವು ಚಲನಶೀಲವಾಗಲು ಕಾರಣ ಮಳೆಗಾಲದಲ್ಲಿ ಭೂಮಿಯೊಳಗೆ ಇಂಗುವ ಅಪಾರ ಪ್ರಮಾಣದ ನೀರು. ನೀರು ತ್ವರಿತ ಸುಣ್ಣದ ಸಂಪರ್ಕಕ್ಕೆ ಬಂದಾಗ ಅವು ಕುದಿದು (ಸುಣ್ಣಕ್ಕೆ ನೀರು ಹಾಕಿದಾಗ ಅದು ಕುದಿಯುವಂತೆಯೇ) ಭಾರಿ ಪ್ರಮಾಣದ ನೀರಿನ ಆವಿಯೂ ಉಂಟಾಗಿ, ಆ ಆವಿ ಅಲ್ಲಿ ಮೊದಲೇ ಇರಬಹುದಾದ ಇಂಗಾಲದ ಡೈ ಆಕ್ಸೈಡ್ ಜೊತೆ ಸೇರಿ ಅವು ವಿಸ್ತೃತಗೊಂಡು ಒತ್ತಡ ಹೆಚ್ಚಿದಂತೆಲ್ಲ ಅವು ಸ್ಫೋಟಿಸಿದಾಗ ಹೊರಬರುವ ಶಬ್ದವೇ ನಾವು ಕಂಪನ ಪ್ರದೇಶದಲ್ಲಿ ಕೇಳುವ ಶಬ್ದ. ಈ ಕ್ರಿಯೆ ಅಷ್ಟಕ್ಕೇ ನಿಲ್ಲುವುದಿಲ್ಲ. ಘನ ರೂಪದ ತ್ವರಿತ ಸುಣ್ಣ ಮೆದುವಾದ ಕೇಕ್ ತರಹದ ಸುಣ್ಣದ ರೂಪ ತಳೆದಾಗ ಅದರ ಘನ ವಿಸ್ತಾರದಲ್ಲಿ (ವಾಲ್ಯೂಮ್) ಏರುಪೇರಾ-ಗುತ್ತದೆ. ಅಂದರೆ ಒಂದು ರೀತಿಯ ಭಾಗಶಃ ನಿರ್ವಾತ ಸೃಷ್ಟಿಯಾಗುತ್ತದೆ. ಈ ನಿರ್ವಾತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಭೂಸ್ತರಗಳು ಸರಿದಾಡುವುದು ಮತ್ತು ಕುಸಿಯುವುದು ಸಂಭವಿಸುತ್ತದೆ. ಅಂತಹ ಸಂದರ್ಭದಲ್ಲಿ ಆಘಾತ ಅಲೆಗಳು ಉಂಟಾಗಿ ಅವು ವರ್ತುಲಾಕಾರವಾಗಿ ಪಸರಿಸಿ ಭೂಮಿಯ ಮೇಲ್ಮೈನ ಮಣ್ಣನ್ನು ತೀವ್ರ ಅಲುಗಾಟಕ್ಕೆ ಗುರಿ ಮಾಡಿದಾಗ ನಮಗೆ ಭೂಕಂಪನದ ಅನುಭವವಾಗುತ್ತದೆ. ಚಿಂಚೋಳಿಯ ಸುತ್ತಮುತ್ತ ಜರುಗುತ್ತಿರುವುದು ಬಹುತೇಕ ಇದೇ ಪ್ರಕ್ರಿಯೆ.

ಇವು ಆಗಿಂದಾಗ್ಗೆ ವರ್ಷಗಳ ಅಂತರದಲ್ಲಿ ಸಂಭವಿಸುವುದು ಒಂದು ರೀತಿಯಲ್ಲಿ ಒಳ್ಳೆಯದೇ! ಏಕೆಂದರೆ ಭೂಮಿಯೊಳಗೆ ಯಾವುದೇ ಒತ್ತಡ ಹೆಚ್ಚುತ್ತಾ ಹೋದರೆ ಒಂದು ಹಂತದಲ್ಲಿ ಅದು ಒಮ್ಮೆಲೇ ಸ್ಫೋಟಿಸಿ ದೊಡ್ಡ ಭೂಕಂಪಕ್ಕೆ ಕಾರಣವಾಗಬಹುದು. ಬದಲಿಗೆ ಆ ಒತ್ತಡ ಸಣ್ಣ ಸಣ್ಣ ಕಂಪನಗಳ ಮೂಲಕ ವ್ಯಕ್ತವಾದರೆ ಅಂತಹ ಭೂಪ್ರದೇಶ ಹೆಚ್ಚು ಸುರಕ್ಷಿತ.

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಚಿಂಚೋಳಿ ಪ್ರದೇಶದ ವಿವರವಾದ ವೈಜ್ಞಾನಿಕ ಅಧ್ಯಯನ ಅತ್ಯಂತ ತುರ್ತಾಗಿ ಆಗಬೇಕಾಗಿದೆ. ಭೂಭೌತ ಸರ್ವೇಕ್ಷಣೆ, ಭೂರಚನಾಭಂಗಿಯ ಅಧ್ಯಯನ ಮತ್ತು ಭೂಕಂಪನ ನಕ್ಷೆ ತಯಾರಿಕೆ ತುರ್ತಾಗಿ ಆಗಬೇಕಾಗಿರುವ ಕೆಲಸಗಳು. ಭೂಕಂಪದಂತಹ ನೈಸರ್ಗಿಕ ವಿಕೋಪಗಳನ್ನು ತಡೆಯಲು ಸಾಧ್ಯವಿಲ್ಲದ್ದರಿಂದ, ಅವುಗಳಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸಲು ಸದಾ ಸನ್ನದ್ಧರಾಗಿರುವುದೇ ಸೂಕ್ತ ಮಾರ್ಗ.

ಲೇಖಕ: ನಿವೃತ್ತ ಭೂವಿಜ್ಞಾನ ಪ್ರಾಧ್ಯಾಪಕ



ಚುರುಮುರಿ



ಮತಭ್ರಮಣೆ

• ಲಿಂಗರಾಜು ಡಿ.ಎಸ್.

‘ಸಾ ಮತ, ಮೌಢ್ಯ ಅಂದರೇನು?’ ಅಂತ ಹಳೇ ಪ್ರಶ್ನೆಯ ಹೊಸದಾಗಿ ಕೇಳಿದೆ.

‘ನೋಡ್ರಲಾ ಅದು ನೀವು ತಿಳಕಂಡಂಗಲ್ಲ. ಹಳೇ ರಾಜಕಾರಣಿಗಳು ಕೊಡೋ ಹೊಸಾ ಭರವಸೆ ನಂಬಿ ನಾವು ಮತ ಹಾಕ್ತೀವಲ್ಲ ಅದು ಮೌಢ್ಯ’ ಅಂತ ವಿವರಣೆ ಕೊಟ್ಟರು.

‘ಇದೊಂದ ಸರಿಯಾಗಿ ಯೇಳಿದೆ ಕಲಾ. ಇವು ನಮ್ಮನ್ನ ಜಾತಿ, ಧರ್ಮದ ಲೆಕ್ಕದಲ್ಲಿ ಮತಭ್ರಮಣೆ ಮಾಡ್ತವೆ’ ಯಂಟಪ್ಪಣ್ಣ ನೊಂದ್ಕತು.

‘ಪಕ್ಷಗಳಲ್ಲಿ ಭಿನ್ನಮತ ಜಾಸ್ತಿಯಾಗಿ ಸಾಸಕರು ಆತ್ಮಾಹುತಿ ಮಾಡಿಕ್ಯಂಡು ವೀರಗಲ್ಲಾಯ್ತಲೇ ಇರತರೇ! ಪಾಪದ ಕುಮಾರಣ್ಣ ಪಕ್ಷದ ತಳಿ ಸಂವರ್ಧನೆ ಮಾಡಿಕ್ಯಂಡಿದ್ರೆ ರಾತ್ರೋರಾತ್ರಿ ಕುದುರೆಗಳನ್ನ ಎಪ್ಪೆಸ್ ಮಾಡೋರು ಜಾಸ್ತಿಯಾಗ್ಯವರೆ. ಬೀಜೆಪಿ ಲಾಯದೇಲಿ ಜಾಗ ಸಾಕಾಗದೇ ಹೋರಿಗಳು ಗುಟುರು ಹಾಕುತ್ಲೇ ಇರತವೆ’ ಅಂತ ಚಂದ್ರು ಒಗ್ಗರಣೆ ಹಾಕಿದ.

‘ಸರ್ಕಾರಿ ಉದ್ಯಮಗಳು, ರೋಡುಗಳು ನಮ್ಮ ಮತದ ಥರವೇ ಕುಲಗೆಟ್ಟೋಗ್ಯವೆ. ಭರವಸೆಗಳು ಬಿಲ್ಡಿಂಗ್ ಥರಾ ಕುಸೀತಾವೆ. ರಾಜಕೀಯದ ಖೇಲು ಮೊದಲೇ ತಿಳಕಣಕೆ ಏನಾದ್ರೂ ಒಂದು ದಾರಿ ಹೇಳಿ ಗುರುವೇ?’ ನಾನು ಹೊಸ ವಿಚಾರ ತೆಗೆದೆ.

‘ನಮ್ಮೂರಗೆ ವೀಳೇದೆಲೆ ಮ್ಯಾಲೆ ಅಂಜನ ಹಾಕಿ ನೋಡೋನು ಒಬ್ಬವನೆ ಕಯ್ಯಾ! ಭೂಮಂಡಲದ ಯಾವ ಕೊಯ್‌ಮೂಲೇಲಿ ಏನೇ ನಡೆದ್ರೂ ಅವನಿಗೆ ಕರ್ಣಪಿಶಾಚಿಗಳು ಕಿವೀಲಿ ಬಂದು ಹೇಳ್ತವಂತೆ. ಆಯಪ್ಪನ್ನ ತಕ್ಕೋಗಿ ಅಂಜನ ಹಾಕ್ಸಿ ರಾಜಕಾರಣಿಗಳ ಮಳ್ಳಿ ಆಟ ತಿಳಕಬೋದು ಕನಿರ್ಲಾ’ ತುರೇಮಣೆ ತಮ್ಮ ಆಲೋಚನೆ ತಿಳಿಸಿದರು.

‘ಅಲ್ಲಸಾ, ನಾನೇಳದು ಆಯಪ್ಪನ್ನ ಮೋದಿ ಮಾವಾರು ಮಿಲಿಟರಿಗೆ ನೇಮಿಸಿಕ್ಯಂಡ್ರೆ ಚೀನಾದವು ಯಾವಾಗ ಗಡಿ ದಾಟಿ ಬತ್ತವೆ, ಉಗ್ರಿಗಳು ಯಾವಾಗ ಬುಲೆಟ್ ಹಾರಿಸ್ತವೆ ಅಂತ ತಿಳಕಂದು ತಡೆ ಹೊಡಿಸಬೌದು. ಪಕ್ಷಗಳಲ್ಲಿ ಜಾಸ್ತಿ ನಿಗರಾಡೋರಿಗೆ ಇಡ ಮಾಡಬೌದು!’ ನನ್ನ ವಿಚಾರಧಾರೆಯನ್ನ ಕೇಳಿ ಎಲ್ಲಾರು ಕೈಗೆ ಮೆಟ್ಟು ತಗತಿದ್ದಂಗೆ ನಾನು ಚಂಗನೆ ಪಂಗನೆ ನೆಗೆದು ಹೊಂಟೋದೆ.

ಸಂಗತ

ಶಾಲೆ ಸಬಲೀಕರಣ ‘ಸಂಕೀರ್ಣ’ವಲ್ಲ!

ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಕೊಠಾರಿ ಆಯೋಗ ಶಿಫಾರಸು ಮಾಡಿದ್ದ ಶಾಲಾ ಸಂಕೀರ್ಣ ವ್ಯವಸ್ಥೆಯನ್ನು ಹೊಸ ಶಿಕ್ಷಣ ನೀತಿಯೂ ಪ್ರತಿಪಾದಿಸಿದೆ

• ಡಾ. ಎಚ್.ಬಿ.ಚಂದ್ರಶೇಖರ್

ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯ ವಿಶ್ಲೇಷಣೆಯು ಕುತೂಹಲಕಾರಿ ಅಂಶಗಳನ್ನು ಹೊರಗೆಡಹುತ್ತದೆ. ಶಿಕ್ಷಣ ಇಲಾಖೆಯ 2019-20ನೇ ಸಾಲಿನ ಅಧಿಕೃತ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ 1ರಿಂದ 10ನೇ ತರಗತಿಗೆ ಸಂಬಂಧಿಸಿದಂತೆ ಒಟ್ಟು ಶಾಲೆಗಳ ಸಂಖ್ಯೆ 76,787. ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಡೆಸಲಾಗುವ ಶಾಲೆಗಳ ಸಂಖ್ಯೆ 49,597 (ಶೇ 64.59), ಅನುದಾನಿತ ಶಾಲೆಗಳ ಸಂಖ್ಯೆ 7,264 (ಶೇ 9.46) ಹಾಗೂ ಅನುದಾನರಹಿತ ಶಾಲೆಗಳ ಸಂಖ್ಯೆ 19,926 (ಶೇ 25.95).

ಒಟ್ಟು ಶಾಲೆಗಳ ಸಂಖ್ಯೆಯಲ್ಲಿ ಶೇ 64.59ರಷ್ಟಿರುವ ಸರ್ಕಾರಿ ಸ್ವಾಮ್ಯದ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 45.83 ಲಕ್ಷ (ಶೇ 43.92), ಅನುದಾನಿತ ಶಾಲೆಗಳಲ್ಲಿ 13.17 ಲಕ್ಷ (ಶೇ 12.62) ವಿದ್ಯಾರ್ಥಿಗಳು ಕಲಿಯುತ್ತಿದ್ದರೆ, ಅನುದಾನರಹಿತ ಶಾಲೆಗಳಲ್ಲಿ 45.34 ಲಕ್ಷ (ಶೇ 43.45) ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಈ ವಿಶ್ಲೇಷಣೆಯಿಂದ ಕಂಡುಬರುವ ಅಂಶವೆಂದರೆ, ಕಡಿಮೆ ಸಂಖ್ಯೆಯ ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೆ, ಹೆಚ್ಚಿನ ಸಂಖ್ಯೆಯ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ.

ಸರ್ಕಾರಿ ಶಾಲೆಗಳು ಗ್ರಾಮಗಳಲ್ಲಿ ಸಾಂದ್ರೀಕರಣಗೊಂಡು, ಪ್ರತೀ ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ವರ್ಷದಿಂದ ವರ್ಷಕ್ಕೆ ಕುಸಿತವಾಗುತ್ತಿದೆ. ಲಾಭದ ಆಕಾಂಕ್ಷೆ ಇಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದ, ಶಿಕ್ಷಣದ ಹಕ್ಕನ್ನು ಎಲ್ಲರಿಗೂ ನೀಡುವ ಉದ್ದೇಶದಿಂದ ಸರ್ವ ಶಿಕ್ಷಣ ಅಭಿಯಾನ ಪ್ರಾರಂಭಗೊಂಡ ಸಂದರ್ಭದಲ್ಲಿ ಹಳ್ಳಿ ಹಳ್ಳಿಗೂ ಶಿಕ್ಷಣ ನೀಡಲು ಶಾಲೆಗಳನ್ನು ತೆರೆದಿದ್ದು ಹಾಗೂ ವರ್ಷದಿಂದ ವರ್ಷಕ್ಕೆ ಜನಸಂಖ್ಯಾ ಏರಿಕೆಯ ದರದಲ್ಲಿ ಕುಸಿತ ಮತ್ತು ಸ್ಥಿರತೆ ಕಂಡುಬಂದ ಕಾರಣ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕುಸಿತವಾಗುತ್ತಿದೆ.

ಈ ವಿದ್ಯಮಾನವು ದೇಶದ ಎಲ್ಲಾ ರಾಜ್ಯಗಳಲ್ಲಿ ಇದೆ. 2016-17ನೇ ಸಾಲಿನ ಅಂಕಿ ಅಂಶದ ಪ್ರಕಾರ, ದೇಶದ ಶೇ 28ರಷ್ಟು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಶೇ 14.8ರಷ್ಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 30ಕ್ಕಿಂತ ಕಡಿಮೆ ವಿದ್ಯಾರ್ಥಿಗಳ ಸಂಖ್ಯೆ ಇದ್ದು ಒಂದು ಲಕ್ಷಕ್ಕೂ ಅಧಿಕ ಶಾಲೆಗಳಲ್ಲಿ ಒಬ್ಬರೇ ಅಧ್ಯಾಪಕರಿದ್ದಾರೆ. ನಮ್ಮ ರಾಜ್ಯದಲ್ಲಿ ಶೇ 70ರಷ್ಟು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 30ಕ್ಕಿಂತ ಕಡಿಮೆ ಮಕ್ಕಳಿದ್ದಾರೆ. ಇವುಗಳಲ್ಲಿ ಅನೇಕ ಶಾಲೆಗಳಲ್ಲಿ 5, 10, 15 ಹಾಗೂ 20ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇದ್ದಾರೆ.

ಇಂತಹ ಶಾಲೆಗಳಲ್ಲಿ ಒಬ್ಬರು ಅಥವಾ ಇಬ್ಬರು ಶಿಕ್ಷಕರು ಇದ್ದಾರೆ. ಇಂತಹ ಸಂದರ್ಭದಲ್ಲಿ ಎಲ್ಲಾ ತರಗತಿಗಳ ಬೆರಳೆಣಿಕೆಯಷ್ಟು ಮಕ್ಕಳಿಗೆ ಎಲ್ಲಾ ವಿಷಯಗಳಿಗೂ ಅವರೇ ಪಾಠ ಬೋಧನೆ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ, ಮಕ್ಕಳಿಗೆ ಆಟವಾಡಲು ಜೊತೆಗಾರರೇ ದೊರೆಯುವುದಿಲ್ಲ. ಗುಂಪು ಆಟ, ಗುಂಪು ಚಟುವಟಿಕೆಗಳಿಗೆ ಅವಕಾಶವಿಲ್ಲದೇ ವಿದ್ಯಾರ್ಥಿಗಳ ಸಾಮಾಜಿಕ ಬೆಳವಣಿಗೆಗೆ ಅಡ್ಡಿ ಉಂಟಾಗುತ್ತದೆ. ಕಡಿಮೆ ಸಂಖ್ಯೆಯ ಮಕ್ಕಳಿಗೆ ಬೋಧಿಸಲು ಶಿಕ್ಷಕರಿಗೂ ಉತ್ಸಾಹ ಬರುವುದಿಲ್ಲ. ಕಡಿಮೆ ಸಂಖ್ಯೆಯ ಮಕ್ಕಳಿರುವ ಶಾಲೆಗಳಲ್ಲಿ ಉತ್ತಮವಾದ ಗ್ರಂಥಾಲಯ, ಪ್ರಯೋಗಾಲಯಗಳಂತಹ ಮೂಲಸೌಕರ್ಯಗಳನ್ನು ಸರ್ಕಾರ ಸೃಷ್ಟಿ ಮಾಡಲು ಕಷ್ಟವಾಗುತ್ತದೆ. ಸಂಪನ್ಮೂಲಗಳು ಹಂಚಿ ಹೋಗುವ ಕಾರಣ ಎಲ್ಲರಿಗೂ ಎದ್ದು ಕಾಣುವಂತಹ ಸೌಲಭ್ಯಗಳನ್ನು ನೀಡಲು ಕಷ್ಟವಾಗುತ್ತದೆ.

ಕಲೆ, ನೃತ್ಯ, ನಾಟಕ, ಕ್ರೀಡೆಗಳಂತಹ ವಿಶೇಷ ವಿಷಯಗಳಿಗೆ ತಜ್ಞ ಶಿಕ್ಷಕರನ್ನು ಒದಗಿಸುವುದೂ ಕಷ್ಟ. ಜೊತೆಗೆ ಹೆಚ್ಚಿನ ಗ್ರಾಮಗಳಲ್ಲಿ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳೇ ಇರುವುದಿಲ್ಲ. ಕೆಲವು ಗ್ರಾಮಗಳಲ್ಲಿ ಕಡಿಮೆ ಸಂಖ್ಯೆಯ ಮಕ್ಕಳಿದ್ದು, ಆ ಮಕ್ಕಳನ್ನು ಖಾಸಗಿ ಶಾಲೆಗೆ ದಾಖಲಿಸುತ್ತಾರೆ.



ಇದಕ್ಕೆ ಪರಿಹಾರವಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020ರಲ್ಲಿ ಶಾಲಾ ಸಂಕೀರ್ಣ ವ್ಯವಸ್ಥೆಯನ್ನು ಪ್ರತಿ-ಪಾದಿಸಲಾಗಿದೆ. ಈ ಅಂಶವು ಕೊಠಾರಿ ಆಯೋಗದ (1964- 66) ವರದಿಯಲ್ಲಿದ್ದರೂ ಅನುಷ್ಠಾನವಾಗಿಲ್ಲ. ಕ್ಲಸ್ಟರ್ ವ್ಯಾಪ್ತಿಯಲ್ಲಿ ಉತ್ತಮ ಸೌಲಭ್ಯಗಳನ್ನು ಹೊಂದಿರುವ ಒಂದು ದೊಡ್ಡ ಸರ್ಕಾರಿ ಪ್ರೌಢಶಾಲೆಯನ್ನು ‘ಶಾಲಾ ಸಂಕೀರ್ಣ’ ಎಂದು ಗುರುತಿಸಿ, ಆ ಶಾಲೆಗೆ ಉತ್ತಮ ಸೌಕರ್ಯಗಳನ್ನು ಒದಗಿಸಿ ಅದನ್ನು ಸಬಲೀಕರಿಸುವುದು. ಎಲ್ಲಿ ಸಾಧ್ಯವಿದೆಯೋ ಅಂತಹ ಕಡೆ, ಬೆರಳೆಣಿಕೆಯಷ್ಟು ಮಕ್ಕಳಿರುವ ಶಾಲೆಗಳನ್ನು ಹತ್ತಿರದ ‘ಶಾಲಾ ಸಂಕೀರ್ಣ’ಕ್ಕೆ ಸಂಯೋಜನೆ ಮಾಡುವುದು. ಶಾಲಾ ಸಂಕೀರ್ಣಕ್ಕೆ ಉತ್ತಮ ಗ್ರಂಥಾಲಯ, ಪ್ರಯೋಗಾಲಯ ಒದಗಿಸಿ, ಸಮಾಲೋಚಕರು, ತಜ್ಞ ಶಿಕ್ಷಕರನ್ನು ನೇಮಿಸಿಕೊಂಡು, ಸಂಕೀರ್ಣ ವ್ಯಾಪ್ತಿಯ ಶಾಲೆಗಳು ಈ ಸೌಲಭ್ಯಗಳನ್ನು ಬಳಸಿಕೊಳ್ಳುವ ವ್ಯವಸ್ಥೆ ಮಾಡುವ ಪ್ರಸ್ತಾಪ ಹೊಸ ಶಿಕ್ಷಣ ನೀತಿಯಲ್ಲಿದೆ.

ನಮ್ಮ ರಾಜ್ಯದಲ್ಲಿ ಈಗಾಗಲೇ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆದಿದ್ದು, ಇದೇ ಮಾದರಿಯ ಶಾಲೆಗಳನ್ನು ಕ್ಲಸ್ಟರ್‌ಗೆ ಒಂದರಂತೆ ತೆರೆದಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ಅನುಕೂಲವಾಗಲಿದೆ. ಸ್ವಯಂಸೇವಾ ಸಂಸ್ಥೆಗಳು ಸಹ ಭವಿಷ್ಯದ ದೃಷ್ಟಿಯಿಂದ ತಮ್ಮ ನೆರವನ್ನು ದೊಡ್ಡ ಶಾಲೆಗೆ ನೀಡುವುದರಿಂದ ಸಂಪನ್ಮೂಲಗಳು ಕ್ರೋಡೀಕರಣಗೊಂಡು ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ.

ವಾಚಕರ ವಾಣಿ

ವಿದ್ಯಾರ್ಥಿವೇತನ: ಅರ್ಜಿ ಸಲ್ಲಿಕೆಯೇ ಸಮಸ್ಯೆ

ಶಾಲಾ ಕಾಲೇಜುಗಳ ಹಲವು ವಿದ್ಯಾರ್ಥಿವೇತನದ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಕರೆಯಲಾಗಿದೆ. ಆದರೆ ಪ್ರತಿಯೊಂದು ವಿದ್ಯಾರ್ಥಿವೇತನದ ಅರ್ಜಿ ಒಂದೊಂದು ವೆಬ್‌ಸೈಟ್‌ನಲ್ಲಿ ಇದ್ದು, ವಿದ್ಯಾರ್ಥಿಯು ಮಾಹಿತಿ ಭರ್ತಿ ಮಾಡುವಾಗ ಬಹಳಷ್ಟು ಮಾಹಿತಿಯನ್ನು ತುಂಬುವುದು ಕಠಿಣವೆನಿಸುತ್ತಿದೆ.

ಎಸ್‌ಎಸ್‌ಪಿ ವಿದ್ಯಾರ್ಥಿವೇತನದ ಅರ್ಜಿ ಭರ್ತಿ ಮಾಡಲಂತೂ ಸೈಬರ್ ಕೇಂದ್ರದವರೂ ಹಿಂದೇಟು ಹಾಕುತ್ತಿದ್ದಾರೆ. ಕೆಲವರು ಅರ್ಜಿ ಹಾಕಲು ಹೆಚ್ಚಿಗೆ ಹಣ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲದೆ ಸರ್ವರ್ ಸಮಸ್ಯೆ ಕಾಡುತ್ತಿದೆ. ಹೀಗಾಗಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಜಿ ಹಾಕುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಆದಕಾರಣ ಸಂಬಂಧಪಟ್ಟ ಅಧಿಕಾರಿಗಳು ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸರಳಗೊಳಿಸಬೇಕು ಮತ್ತು ಸರ್ವರ್ ಸಮಸ್ಯೆಯನ್ನು ಸರಿಪಡಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.

ಪ್ರದೀಪ ಬಿಸಲನಾಯಿಕ, ಚಿಕ್ಕೋಡಿ

ಮತ್ತೆ ಹುಟ್ಟಿ ಬರುವೆಯಾ?

ಪ್ರಿಯ ಅಮೃತವರ್ಷಿಣಿ, ಪ್ರತೀ ಬೆಳಿಗ್ಗೆ ಇಂಪಾದ ಸಂಗೀತವನ್ನು ಸಿತಾರ್‌ನಲ್ಲಿ ಕೇಳಿಸುತ್ತಿದ್ದೆಯಲ್ಲ, ಎಲ್ಲಿ ಹೋದೆ? 20 ವರ್ಷಗಳ ಹಿಂದೆ ಎಫ್‌ಎಂ ಟ್ರಾನ್ಸ್‌ಮಿಟರ್ ಅನ್ನು ಪರೀಕ್ಷೆ ಮಾಡುತ್ತಿದ್ದಾಗ ಬೆಳಗ್ಗಿನಿಂದ ರಾತ್ರಿಯವರೆಗೂ ಸಂಗೀತ ಬರುತ್ತಿತ್ತು. ಕುತೂಹಲದಿಂದ ಆಕಾಶವಾಣಿಯವರನ್ನು ಕೇಳಿದ್ದೆ. ಹೊಸ ಚಾನೆಲ್ ಬರಲಿದೆ ಎಂದಿದ್ದರು. ನೀನು ಬಂದೆ. ಬಹಳ ಸಂತೋಷವಾಯಿತು. ಕಳೆದ ಒಂದು ವರ್ಷದಿಂದ ನಿನ್ನ ಧ್ವನಿ ಕ್ಷೀಣವಾಗುತ್ತಿತ್ತು. ಕೋವಿಡ್ ಪ್ರಭಾವ, ಇನ್ನೇನು ಸರಿಹೋಗಬಹುದು ಎಂದುಕೊಂಡಿದ್ದೆ. ಆದರೆ ಇನ್ನೂ ಹದಿವಯಸ್ಸನ್ನೂ ಪೂರೈಸದೆ ಮಾಯವಾಗಿಬಿಟ್ಟೆಯಲ್ಲಾ. ಅಂತಕನ ದೂತರಿಗೆ ಕಿಂಚಿತ್ತೂ ದಯವಿಲ್ಲ.

ಭಗವದ್ಗೀತೆಯ ಮತ್ತು ದಾಸವರೇಣ್ಯರ ಕನ್ನಡದ ಕೆಲವು ಹೊಸ ಪ್ರಯೋಗಗಳನ್ನು, ಸ್ಥಳೀಯ ಪ್ರತಿಭೆ-ಗಳನ್ನು, ಹಳೆಯ ಮಧುರ ನೆನಪುಗಳನ್ನು, ಸಂಗೀತ ಪಾಠಗಳನ್ನು ಕೇಳಿಸುತ್ತಿದ್ದೆಯಲ್ಲ. ಈಗೆಲ್ಲಿ ಕೇಳೋಣ? ಮತ್ತೆ ಹುಟ್ಟಿ ಬರುವೆಯಾ?

ಬಿ.ಎಸ್.ಶೈಲಜಾ, ಬೆಂಗಳೂರು

ವಾಲ್ಮೀಕಿ: ಹೆಸರು ಕುರಿತಂತೆ ಒಂದು ಊಹೆ

ವಾಲ್ಮೀಕಿ ಪೂರ್ವಾಶ್ರಮಕ್ಕೆ ಸಂಬಂಧಿಸಿದಂತೆ ಅರುಣ್ ಜೋಳದಕೂಡ್ಲಿಗಿ ಅವರು ಬರೆದಿದ್ದಾರೆ (ಸಂಗತ, ಅ. 18). ರಾಮಾಯಣದ ಕವಿಯ ವಿಚಾರ ಬಂದಾಗಲೆಲ್ಲ ಒಂದು ಸಂಗತಿಯ ಪ್ರಸ್ತಾಪ ಬಂದೇ ಬರುತ್ತದೆ. ಅದೆಂದರೆ ದರೋಡೆಕೋರನಾಗಿದ್ದವನು ವರ್ಷಗಟ್ಟಲೆ ಸುದೀರ್ಘ ತಪಸ್ಸನ್ನು ಆಚರಿಸಿ ಕೂತಲ್ಲಿಯೇ ತನ್ನ ದೇಹದ ಸುತ್ತ ಬೆಳೆದಿದ್ದ ಹುತ್ತವನ್ನು ಒಡೆದು ಹೊರಬಂದನಾದ ಕಾರಣ ವಾಲ್ಮೀಕಿ ಎಂದು ಹೆಸರಾದ ಎಂಬುದು. ಅವನು ದರೋಡೆಕೋರನಾಗಿದ್ದನೋ ಇಲ್ಲವೋ ಅದು ಬೇರೆ ವಿಷಯ. ಸಂಸ್ಕೃತದಲ್ಲಿ ವಲ್ಮೀಕ ಎಂದರೆ ಹುತ್ತ ಎಂಬ ಅರ್ಥವಿರುವುದು ಪ್ರಸಿದ್ಧವಾದ್ದು. ಆದರೆ ಜೀವಂತ ವ್ಯಕ್ತಿಯ ಮೈಮೇಲೆ ಹಾಗೆ ಹುತ್ತ ಬೆಳೆಯಲಾರದು. ‘ವಾಲ್ಮೀಕಿ’ ಎಂದು ಹೆಸರು ಬರಲು ಬೇರೇನೋ ಕಾರಣವಿರಬಹುದು. ‘ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು ಪುರುಷೋತ್ತಮನ ಆ ಅಂಥ ರೂಪುರೇಖೆ’ ಎಂಬ ಕವಿ ಅಡಿಗರ ಕವನದ ಸಾಲು ಒಂದು ಅದ್ಭುತವಾದ ರೂಪಕವಾಗಿ, ಕವಿಯ ಮನಸ್ಸು ಹುತ್ತ ಗಟ್ಟಿದಾಗಲೇ ಒಂದು ಮಹಾ ಕಾವ್ಯ ಸೃಷ್ಟಿಯಾಗಲು ಸಾಧ್ಯ ಎಂಬುದರ ಸೂಚಕವಾಗಿ ಇದ್ದರೂ ಅದು ವಸ್ತುಸಂಗತಿಯ ಅಭಿವ್ಯಕ್ತಿ ಅಲ್ಲ.

ಇನ್ನೊಂದು ದಿಕ್ಕಿನಿಂದ ನೋಡಿದಾಗ, ವೇದವ್ಯಾಸರಿಗೆ ‘ಕೃಷ್ಣದ್ವೈಪಾಯನ’ ಎಂಬ ಹೆಸರುಂಟಷ್ಟೆ. ವಾಸ್ತವವಾದ ಮೂಲ ಹೆಸರು ಕೃಷ್ಣ. ಇನ್ನೊಬ್ಬ ಖ್ಯಾತ ದ್ವಾರಕೆಯ ಕೃಷ್ಣನಿದ್ದ. ವಸುದೇವನ ಮಗನಾದ್ದರಿಂದ ಅವನಿಗೆ ವಾಸುದೇವ ಕೃಷ್ಣನೆಂಬ ಹೆಸರುಂಟು. ಅವನಿಂದ ಇವರು ಬೇರೆ ಎಂದು ಹೇಳಲು ದ್ವೀಪ ಪ್ರದೇಶದಿಂದ ಬಂದವನು ಎಂಬ ಅರ್ಥದ ‘ದ್ವೈಪಾಯನ ಕೃಷ್ಣ’ ಅಥವಾ ‘ಕೃಷ್ಣ ದ್ವೈಪಾಯನ’ ರೂಢಿಗೆ ಬಂದಿತು. ಮೂಲದಲ್ಲಿ ಒಂದೇ ಆಗಿದ್ದ ವೇದವನ್ನು ನಾಲ್ಕು ವೇದಗಳಾಗಿ ವಿಂಗಡಿಸಿದವನು ಎಂಬ ಅರ್ಥದಲ್ಲಿ ವೇದವ್ಯಾಸ ಎಂಬ ಹೆಸರು ರೂಢಿಗೆ ಬಂದದ್ದು ಆನಂತರದಲ್ಲಿ. ಹಾಗೆಯೇ ವಲ್ಮೀಕಗಳು ವಿಪುಲವಾಗಿ ಇರುವ ಪ್ರದೇಶದಿಂದ ಬಂದವನೆಂಬ ಕಾರಣಕ್ಕಾಗಿ ರಾಮಾಯಣದ ಕವಿಗೆ ‘ವಾಲ್ಮೀಕಿ’ ಎಂದೇಕೆ ಬಂದಿರಬಾರದು? ಇದು ಒಂದು ಸಂಭಾವ್ಯ ಊಹೆ. ವಿದ್ವಾಂಸರು ಈ ದಿಕ್ಕಿನಲ್ಲಿ ಆಲೋಚಿಸಬಹುದೇನೋ.

ಡಾ. ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

ಜಿಎಚ್‌ಐ ಸರಿಯಿಲ್ಲ; ಆದರೆ ಸಮೀಕ್ಷೆ ವರದಿ!

ಭಾರತ ಸರ್ಕಾರವು ಜಾಗತಿಕ ಹಸಿವು ಸೂಚ್ಯಂಕದ (ಜಿಎಚ್‌ಐ) ವಿಧಾನವನ್ನು ಅಧಿಕೃತವಾಗಿ ಪ್ರಶ್ನೆ ಮಾಡಿ, ಸೂಚ್ಯಂಕದಲ್ಲಿ ಭಾರತದ ಸ್ಥಾನವು 2021ರಲ್ಲಿ ಕುಸಿದಿದೆ ಎಂಬುದಕ್ಕೆ ತನ್ನ ಭಿನ್ನಾಭಿಪ್ರಾಯವನ್ನು ಪ್ರಕಟಿಸಿದೆ (ಪ್ರ.ವಾ., ಅ. 16). ಸರ್ಕಾರದ ಈ ನಿಲುವನ್ನು ತಾತ್ಪೂರ್ತಿಕವಾಗಿ ಒಪ್ಪಿಕೊಂಡರೂ ಉಳಿಯುವ ಪ್ರಶ್ನೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 (ಎನ್‌ಎಫ್‌ಎಚ್‌ಎಸ್ 5) ವರದಿಯಲ್ಲಿನ ಫಲಿತಗಳನ್ನು ತಿರಸ್ಕರಿಸಲಾಗುತ್ತದೆಯೇ? ಇಲ್ಲಿದೆ ನಿಜವಾದ ಸಮಸ್ಯೆ.

ದೇಶದ ಸರಿಸುಮಾರು ಎಲ್ಲ ರಾಜ್ಯಗಳಲ್ಲಿಯೂ 6– 59 ವರ್ಷ ವಯೋಮಾನದವರಲ್ಲಿ ಮತ್ತು 15-49 ವರ್ಷ ವಯೋಮಾನದ ಮಹಿಳೆಯರಲ್ಲಿ ಅನೀಮಿಯಾ (ರಕ್ತಹೀನತೆ) 2015- 16ರಿಂದ 2019- 20ರಲ್ಲಿ ಏರಿಕೆಯಾಗಿ-ರುವುದನ್ನು ಎನ್‌ಎಫ್‌ಎಚ್‌ಎಸ್ ತನ್ನ 5ನೆಯ ಸುತ್ತಿನ ಸಮೀಕ್ಷೆಯಲ್ಲಿ ದಾಖಲಿಸಿದೆ. ಉದಾಹರಣೆಗೆ, ಕರ್ನಾಟಕದಲ್ಲಿ ಒಟ್ಟು ಮಕ್ಕಳಲ್ಲಿ ಮತ್ತು ಒಟ್ಟು ಮಹಿಳೆಯರಲ್ಲಿನ ಅನೀಮಿಯಾ ಪ್ರಮಾಣ 2015- 16ರಲ್ಲಿ ಕ್ರಮವಾಗಿ ಶೇ 60.9 ಮತ್ತು ಶೇ 45.3ರಷ್ಟಿದ್ದುದು 2019- 20ರಲ್ಲಿ ಕ್ರಮವಾಗಿ ಶೇ 65.5 ಮತ್ತು ಶೇ 49.4ಕ್ಕೇರಿದೆ. ಗುಜರಾತಿನಲ್ಲಿ ಇದು ಕ್ರಮವಾಗಿ ಶೇ 62 ಮತ್ತು ಶೇ 56.5ರಿಂದ ಶೇ 79.7 ಮತ್ತು ಶೇ 69ಕ್ಕೇರಿದೆ. ಇದು ಆತಂಕಕಾರಿ ಸ್ಥಿತಿಯಾಗಿದೆ. ಅಪೌಷ್ಟಿಕತೆಯನ್ನು ಯುನಿಸೆಫ್ ‘ಮರೆಮಾಚಿದ ಹಸಿವು’ ಎಂದು ನಿರ್ವಚಿಸಿದೆ. ಭಾರತ ಸರ್ಕಾರ ತನ್ನದೇ ಸಚಿವಾಲಯದ ನೇತೃತ್ವದಲ್ಲಿ ನಡೆದ ಸಮೀಕ್ಷೆಯಲ್ಲಿ ದಾಖಲಾಗಿರುವ ಏರಿಕೆಯಾಗುತ್ತಿರುವ ಮರೆಮಾಚಿದ ಹಸಿವಿನ ಸಮಸ್ಯೆಯನ್ನು ತಿರಸ್ಕರಿಸುತ್ತದೆಯೇ?

ಡಾ. ಟಿ.ಆರ್.ಚಂದ್ರಶೇಖರ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕುಂಟುತ್ತಿದೆ ಭಾರತ್‌ನೆಟ್

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ 2014ರಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಹಿಂದಿನ ಸರ್ಕಾರದ ಹಲವು ಯೋಜನೆಗಳ ಹೆಸರನ್ನು ಬದಲಿಸಿತ್ತು. 2011ರಲ್ಲಿ ಯುಪಿಎ-2 ಸರ್ಕಾರವು 'ರಾಷ್ಟ್ರೀಯ ಆಪ್ಟಿಕಲ್ ಫೈಬರ್ ಜಾಲ' ಯೋಜನೆಯನ್ನು ಆರಂಭಿಸಿತ್ತು. 2014ರ ಅಕ್ಟೋಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಯೋಜನೆಗೆ, 'ಭಾರತ್‌ನೆಟ್' ಎಂದು ಮರುನಾಮಕರಣ ಮಾಡಿದರು. 2020ರ ಅಂತ್ಯದ ವೇಳೆಗೆ ದೇಶದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆಪ್ಟಿಕಲ್ ಫೈಬರ್ ಮೂಲಕ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸುವುದು ಯೋಜನೆಯ ಗುರಿಯಾಗಿತ್ತು. ಯೋಜನೆ ಆರಂಭವಾಗಿ 10 ವರ್ಷ ಕಳೆದರೂ, ಮರುನಾಮಕರಣ ಮಾಡಿ ಏಳು ವರ್ಷ ಕಳೆದರೂ ಯೋಜನೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ. ಸರ್ಕಾರ ಪದೇ ಪದೇ ಯೋಜನೆಯ ಅವಧಿಯನ್ನು ವಿಸ್ತರಿಸುತ್ತಲೇ ಇದೆ


ಸಾರ್ವಜನಿಕ ವೈ-ಫೈ, ಬಹುತೇಕರಿಗೆ ಇನ್ನೂ ಕನಸು

ಈ ಯೋಜನೆ ಅಡಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಾರ್ವಜನಿಕರಿಗೆ ವೈ-ಫೈ ಸಂಪರ್ಕ ನೀಡುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ. ಆದರೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ವೈ-ಫೈ ಸಂಪರ್ಕ ನೀಡಲು ಸರ್ಕಾರ ಇನ್ನೂ ಅನುಮತಿ ನೀಡಿಲ್ಲ. ಕಾರ್ಯಕ್ರಮದ ಪ್ರಗತಿಯೂ ಕುಂಠಿತವಾಗಿಯೇ ಇದೆ



ಒಎಫ್‌ಸಿ ಅಳವಡಿಕೆ

ಭಾರತ್‌ನೆಟ್ ಯೋಜನೆಯನ್ನು ಪೂರ್ಣಗೊಳಿಸಲು ದೇಶದಲ್ಲಿ ಒಟ್ಟು 6.5 ಲಕ್ಷ ಕಿ.ಮೀ.ನಷ್ಟು ಉದ್ದದ ಒಎಫ್‌ಸಿ ಅಳವಡಿಸಬೇಕಿದೆ. ಆದರೆ, ಯೋಜನೆಯ ಬೇರೆಲ್ಲಾ ಕಾಮಗಾರಿಗಳ ಪ್ರಗತಿ ಕುಂಠಿತವಾಗಿದ್ದರೂ ಒಎಫ್‌ಸಿ ಅಳವಡಿಕೆ ಉತ್ತಮವಾಗಿದೆ. ಶೇಕಡ 78ರಷ್ಟು ಕಾಮಗಾರಿ ಪೂರ್ಣಗೊಂಡಿದೆ.



ಪ್ರಜಾವಾಣಿ ಗ್ರಾಫಿಕ್ಸ್
ಆಧಾರ: ಬಿಬಿಎನ್‌ಎಲ್

10 ವರ್ಷದಲ್ಲಿ 7 ಬಾರಿ ಗಡುವು ಮುಂದೂಡಿಕೆ

2013
2011ರಲ್ಲಿ ಯೋಜನೆ ಆರಂಭವಾದಾಗ, ಮುಂದಿನ 2 ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು

2015
2013ರಲ್ಲಿ ಯೋಜನೆ ಪೂರ್ಣಗೊಳ್ಳದ ಕಾರಣ, ಗಡುವನ್ನು ಮತ್ತೆ 24 ತಿಂಗಳು ವಿಸ್ತರಿಸಲಾಯಿತು

2017
ಕೇಂದ್ರದಲ್ಲಿ ಅಧಿಕಾರ ಬದಲಾವಣೆಯೊಂದಿಗೆ ಯೋಜನೆಗೆ ಭಾರತ್‌ನೆಟ್ ಎಂಬ ಹೆಸರೂ ಬಂದಿತು. 2018ರೊಳಗೆ 2.5 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಇಂಟರ್‌ನೆಟ್ ಒದಗಿಸುವುದಾಗಿ ಹೊಸ ಸರ್ಕಾರ ಹೇಳಿತು

2018
ಮತ್ತೆ 12 ತಿಂಗಳ ಕಾಲ ಯೋಜನೆಯ ಗಡುವನ್ನು ವಿಸ್ತರಿಸಲಾಯಿತು

2019
ಮತ್ತೊ ಒಂದು ವರ್ಷ ಮುಂದೂಡಿಕೆ ಮಾಡಲಾಯಿತು. ಮಾರ್ಚ್ 2020ಕ್ಕೆ ಹೊಸ ಗಡುವು ನೀಡಲಾಯಿತು

2020
ಮಾರ್ಚ್‌ಗೆ ಮುಗಿಯುವ ಬದಲು ಮತ್ತೆ 17 ತಿಂಗಳು ವಿಸ್ತರಣೆ ನೀಡಲಾಯಿತು. ಆದರೆ ಕೋವಿಡ್ ಲಾಕ್‌ಡೌನ್ ಕಾರಣದಿಂದ ಅದು ಮತ್ತೆ ಮುಂದೆ ಹೋಗಿದೆ

2021
ದೇಶದ 6 ಲಕ್ಷ ಗ್ರಾಮಗಳಿಗೆ ಮುಂದಿನ 1,000 ದಿನಗಳಲ್ಲಿ ಇಂಟರ್‌ನೆಟ್ ಸಂಪರ್ಕ ಕಲ್ಪಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು 2021ರ ಆಗಸ್ಟ್ 15ರ ತಮ್ಮ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ತಿಳಿಸಿದ್ದರು

ಯೋಜನೆಯ ಹಂತ ಹಾಗೂ ಗುರಿಗಳು

- **2017;**ಮೊದಲ ಹಂತದಲ್ಲಿ 1 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಭೂಗತ ಆಪ್ಟಿಕ್ ಫೈಬರ್ ಕೇಬಲ್ (ಒಎಫ್‌ಸಿ) ಹಾಕುವ ಮೂಲಕ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಒದಗಿಸುವುದು
- **2019;**ಎರಡನೇ ಹಂತದಲ್ಲಿ ದೇಶದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಭೂಗತ ಫೈಬರ್, ಫೈಬರ್ ಓವರ್ ಪವರ್ ಲೈನ್ಸ್, ರೇಡಿಯೊ ಮತ್ತು ಉಪಗ್ರಹ ಮಾಧ್ಯಮದ ಅತ್ಯುತ್ತಮ ಸಂಪರ್ಕ ಒದಗಿಸುವುದು
- **2019-2023;**ಮೂರನೇ ಹಂತದಲ್ಲಿ ಅತ್ಯಾಧುನಿಕ, ಫ್ಯೂಚರ್ ಪ್ರೂಫ್ ನೆಟ್‌ವರ್ಕ್, ಜಿಲ್ಲೆಗಳು ಮತ್ತು ಬ್ಲಾಕ್‌ಗಳ ನಡುವೆ ಫೈಬರ್ ಸೇರಿದಂತೆ ರಿಂಗ್ ಟೋಪೋಲಜಿ ಒದಗಿಸುವುದು

ಅಂಕಿ-ಅಂಶಗಳು

2011 ಯುಪಿಎ ಸರ್ಕಾರದ ಅವಧಿಯಲ್ಲಿ ಯೋಜನೆ ಆರಂಭ

2021 ಆರಂಭವಾಗಿ 10 ವರ್ಷ ಕಳೆದರೂ ಪೂರ್ಣಗೊಳ್ಳದ ಯೋಜನೆ

ಯೋಜನೆಯ ಮೊತ್ತ (₹ ಕೋಟಿಗಳಲ್ಲಿ)

42,068	2017ರವರೆಗೆ ನೀಡಲಾದ ಅನುದಾನ
19,041	2021 ಜೂನ್‌ನಲ್ಲಿ ನೀಡಿದ ಹೆಚ್ಚುವರಿ ಅನುದಾನ
61,109	ಈವರೆಗಿನ ಒಟ್ಟು ಅನುದಾನ

- **2.5 ಲಕ್ಷ** ಭಾರತ್‌ನೆಟ್ ಯೋಜನೆ ಅಡಿ ಒಎಫ್‌ಸಿ ಬ್ರಾಡ್‌ಬ್ಯಾಂಡ್ ಅಳವಡಿಕೆಗೆ ಆಯ್ಕೆಯಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ
- **1.78 ಲಕ್ಷ** ಒಎಫ್‌ಸಿ ಅಳವಡಿಕೆ ಪೂರ್ಣಗೊಂಡಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ
- **72,000** ಒಎಫ್‌ಸಿ ಅಳವಡಿಕೆ ಬಾಕಿಯಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ
- **1.69 ಲಕ್ಷ** ಒಎಫ್‌ಸಿ ಸಂಪರ್ಕ ನೀಡಲಾಗಿರುವ ಮತ್ತು ಸಂಬಂಧಿತ ಉಪಕರಣಗಳ ಅಳವಡಿಕೆ ಪೂರ್ಣಗೊಂಡಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ
- **9,000** ಒಎಫ್‌ಸಿ ಸಂಪರ್ಕ ಇನ್ನಷ್ಟೇ ಪಡೆಯಬೇಕಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ
- **1.46 ಲಕ್ಷ** ಭಾರತ್‌ನೆಟ್ ಬ್ರಾಡ್‌ಬ್ಯಾಂಡ್ ಸಂಪರ್ಕ ಪಡೆದಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ
- **1.04 ಲಕ್ಷ** ಬ್ರಾಡ್‌ಬ್ಯಾಂಡ್ ಸಂಪರ್ಕ ಪಡೆಯದೇ ಇರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ

ಹಿಂದಿ ಬರದೇ ಇದ್ದುದ್ದಕ್ಕೆ ತಮಿಳಿಗನಿಗೆ ರಿಫಂಡ್ ನಿರಾಕರಣೆ

ಝೊಮಾಟೊ ತಿರಸ್ಕಾರಕ್ಕೆ ದಕ್ಷಿಣದಲ್ಲಿ ಅಭಿಯಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಝೊಮಾಟೊ ಹಿಂದಿ ಹೇರಿಕೆ ವಿರುದ್ಧ ದಕ್ಷಿಣದ ರಾಜ್ಯಗಳಲ್ಲಿ ಅಭಿಯಾನ
- ಸಹಿಷ್ಣುತೆ ಬೇಕು ಎಂದು ಝೊಮಾಟೊ ಸಂಸ್ಥಾಪಕ ಹೇಳಿದ್ದಕ್ಕೆ ಆಕ್ರೋಶ
- ತಮಿಳುನಾಡು, ಕರ್ನಾಟಕ, ಕೇರಳದಲ್ಲಿ ಝೊಮಾಟೊ ವಿರುದ್ಧ ಅಭಿಯಾನ

ಚೆನ್ನೈ: ದಕ್ಷಿಣ ಭಾರತದಲ್ಲಿ ಫುಡ್ ಡೆಲಿವರಿ ಅಪ್ಲಿಕೇಷನ್ ಝೊಮಾಟೊ ವಿರುದ್ಧ ಅಭಿಯಾನ ಆರಂಭವಾಗಿದೆ. ಹಿಂದಿ ರಾಷ್ಟ್ರಭಾಷೆ ಮತ್ತು ದೇಶದ ಎಲ್ಲರೂ ಅದನ್ನು ಕಲಿಯಬೇಕು ಎಂದು ಝೊಮಾಟೊ ಏಜೆಂಟ್ ಹೇಳಿದ್ದು ಮತ್ತು ಅದನ್ನು ಝೊಮಾಟೊ ಸಂಸ್ಥಾಪಕ ದೀಪಿಂದರ್ ಗೋಯಲ್ ಅವರು ಸಮರ್ಥಿಸಿಕೊಂಡಿದ್ದು, ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಭಾರಿ ಆಕ್ರೋಶಕ್ಕೆ ಕಾರಣವಾಗಿದೆ. ಆಕ್ರೋಶದ ಪರಿಣಾಮ ಝೊಮಾಟೊ ಷೇರುಮೌಲ್ಯ ಕುಸಿತವಾಗಿದೆ.


ತಮಿಳುನಾಡಿನ ವಿಕಾಸ್ ಎಂಬ ಯುವಕ ಸೋಮವಾರ ಝೊಮಾಟೊದಲ್ಲಿ ಊಟವನ್ನು ಬುಕ್ ಮಾಡಿದ್ದರು. ಊಟ ಬರದೇ ಇದ್ದ ಕಾರಣ, ಪಾವತಿ ಮಾಡಿರುವ ಹಣವನ್ನು ವಾಪಸ್ ಮಾಡಲು ಮನವಿ ಮಾಡಿದ್ದರು. ಆದರೆ ಝೊಮಾಟೊ ಗ್ರಾಹಕ ಸೇವೆಗಳ ಏಜೆಂಟ್ ಹಿಂದಿ ಬರದೇ ಇರುವ ಕಾರಣಕ್ಕೆ, ವಿಕಾಸ್ ಅವರ ಮನವಿಯನ್ನು ತಿರಸ್ಕರಿಸಿದ್ದರು. ಜತೆಗೆ ಆ ಏಜೆಂಟ್, 'ಹಿಂದಿ ರಾಷ್ಟ್ರಭಾಷೆ ಎಂಬ ಮಾಹಿತಿ ನಿಮಗೆ ಗೊತ್ತಿರಲಿ. ದೇಶದ ಎಲ್ಲರೂ ಹಿಂದಿಯನ್ನು ಅಲ್ಪಸ್ವಲ್ಪವಾದರೂ ಕಲಿತಿರಬೇಕು' ಎಂದು ವಿಕಾಸ್ ಅವರಿಗೆ ಸಂದೇಶ ಕಳುಹಿಸಿದ್ದರು.

ಇದನ್ನು ವಿರೋಧಿಸಿದ್ದ ವಿಕಾಸ್ ಅವರು, 'ಹಿಂದಿ ನಮ್ಮ ರಾಷ್ಟ್ರಭಾಷೆಯಲ್ಲ. ಅದನ್ನು ಎಲ್ಲರೂ ಕಲಿಯಬೇಕಿಲ್ಲ. ನೀವು ತಮಿಳುನಾಡಿನಲ್ಲಿ ವ್ಯವಹಾರ ಮಾಡುತ್ತಿದ್ದೀರಿ, ನೀವು ತಮಿಳು ಕಲಿಯಿರಿ' ಎಂದು ಟ್ವೀಟ್ ಮಾಡಿದ್ದರು. ಜತೆಗೆ ಝೊಮಾಟೊ ಏಜೆಂಟ್ ಕಳುಹಿಸಿದ್ದ ಸಂದೇಶದ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಂಡಿದ್ದರು. ವಿಕಾಸ್ ಅವರ ಬೆಂಬಲಕ್ಕೆ ತಮಿಳರು, ಕನ್ನಡಿಗರು ಮತ್ತು ಮಲಯಾಳಿಗಳು ಧಾವಿಸಿದರು. ಟ್ವಿಟರ್‌ನಲ್ಲಿ ಈ ವಿಚಾರ ಟ್ರೆಂಡ್ ಆಯಿತು.

ಇದರ ಬೆನ್ನಲ್ಲೇ, ವಿಕಾಸ್ ಅವರ ಕ್ಷಮೆ ಯಾಚಿಸಿ ಝೊಮಾಟೊ ತಮಿಳು ಭಾಷೆಯಲ್ಲಿ ಟ್ವೀಟ್ ಮಾಡಿತು. 'ವಿಕಾಸ್ ಅವರ ಕ್ಷಮೆ ಯಾಚಿಸುತ್ತೇವೆ ಮತ್ತು ಅವರೊಂದಿಗೆ ವ್ಯವಹರಿಸಿದ ಏಜೆಂಟ್ ಅನ್ನು ತೆಗೆದುಹಾಕಿದ್ದೇವೆ' ಎಂದು ಟ್ವೀಟ್ ಮಾಡಿತು. ಆಗ ವಿವಾದ ತಣ್ಣಗಾಯಿತು.

ಆದರೆ ಮಂಗಳವಾರ ಮಧ್ಯಾಹ್ನದ ವೇಳೆಗೆ ಝೊಮಾಟೊ ಸಂಸ್ಥಾಪಕ ದೀಪಿಂದರ್ ಗೋಯಲ್ ಅವರು ಟ್ವೀಟ್ ಮಾಡಿದರು. ಅವರ ಟ್ವೀಟ್‌ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

'ಗ್ರಾಹಕ ಸೇವೆಗಳ ಸೇವೆಯಲ್ಲಿರುವ ನಮ್ಮ ಕಂಪನಿಯ ಕೆಲವು ಸಿಬ್ಬಂದಿಯ ನಿರ್ಲಕ್ಷ್ಯದಿಂದ ಹೀಗೆ ಆಗಿದೆ. ಆದರೆ ಇದು ರಾಷ್ಟ್ರಮಟ್ಟದ ವಿವಾದವಾದದ್ದು ವಿಷಾದಕರ. ನಮ್ಮ ದೇಶದಲ್ಲಿ ಸಹಿಷ್ಣುತೆ ಇನ್ನೂ ಹೆಚ್ಚಿನ ಮಟ್ಟದಲ್ಲಿರಬೇಕಿತ್ತು. ಯಾರನ್ನು ದೂರುವುದು?' ಎಂದು ಒಂದು ಟ್ವೀಟ್ ಮಾಡಿದ್ದರು.



ಝೊಮಾಟೊ ಏಜೆಂಟ್ ಮಾಡಿರುವ ಸಂದೇಶದ ಸ್ಕ್ರೀನ್‌ಶಾಟ್

'ಒಂದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ, ನಮ್ಮ ಕಾಲ್‌ಸೆಂಟರ್‌ಗಳಲ್ಲಿ ಕೆಲಸ ಮಾಡುವವರು ಇನ್ನೂ ಯುವಕರು. ಅವರು ತಮ್ಮ ಉದ್ಯೋಗದ ಆರಂಭದ ದಿನಗಳಲ್ಲಿ ಇದ್ದಾರೆ. ಅವರಿನ್ನೂ ಕಲಿಯಬೇಕು. ಅವರು ಭಾಷೆ ಮತ್ತು ಪ್ರಾದೇಶಿಕ ಭಾವನೆಗಳ ವಿಚಾರದಲ್ಲಿ ಪರಿಣತರಲ್ಲ, ನನಗೂ ಅವೆಲ್ಲಾ ಗೊತ್ತಿಲ್ಲ. ಬೇರೆಯವರ ಅಸಾಮರ್ಥ್ಯವನ್ನು ನಾವು ಸಹಿಸಿಕೊಳ್ಳಬೇಕು ಮತ್ತು ಪರಸ್ಪರ ಭಾಷೆ, ಭಾವನೆಗಳನ್ನು ಗೌರವಿಸಬೇಕು. ಆ ಏಜೆಂಟ್ ಅನ್ನು ಮರಳಿ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ' ಎಂದು ಟ್ವೀಟ್ ಮಾಡಿದ್ದರು.

ದೇಶದಲ್ಲಿ ಇನ್ನಷ್ಟು ಸಹಿಷ್ಣುತೆ ಇರಬೇಕಿತ್ತು ಎಂದು ದೀಪಿಂದರ್ ಗೋಯಲ್ ಟ್ವೀಟ್ ಮಾಡಿದ್ದಕ್ಕೆ ತಮಿಳರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಮಿಳರು #Hindi_Theriyathu_Poda, ತಮಿಳರು, ಕನ್ನಡಿಗರು ಮತ್ತು ಮಲಯಾಳಿಗಳು #RejectZomato, ಮತ್ತು #HindiIsNotNationalLanguage ಹ್ಯಾಷ್‌ಟ್ಯಾಗ್‌ಗಳಲ್ಲಿ ಟ್ವೀಟ್ ಮಾಡಿದ್ದಾರೆ. ಝೊಮಾಟೊವನ್ನು ತಿರಸ್ಕರಿಸುವಂತೆ ಕರೆ ನೀಡಿದ್ದಾರೆ.

'ಕರ್ನಾಟಕದಿಂದ ಗೋವಾಗೆ ಪ್ರತಿದಿನ 2 ಟನ್ ದನದ ಮಾಂಸ'

ಪ್ರಜಾವಾಣಿ ವಾರ್ತೆ

ಪಣಜಿ: ಕರ್ನಾಟಕದಿಂದ ಪ್ರತಿದಿನ 2,000 ಕೆಜಿಗೂ ಹೆಚ್ಚು ದನ ಮತ್ತು ಎಮ್ಮೆಯ ಮಾಂಸ ಗೋವಾಗೆ ಬರುತ್ತದೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಹೇಳಿದ್ದಾರೆ.

ಗೋವಾ ವಿಧಾನಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ. 'ಕಳೆದ ಆರು ತಿಂಗಳಲ್ಲಿ ಕರ್ನಾಟಕದಿಂದ ಗೋವಾಗೆ 388 ಟನ್‌ಗಳಷ್ಟು ದನ ಮತ್ತು ಎಮ್ಮೆಯ ಮಾಂಸವನ್ನು ತರಿಸಿಕೊಳ್ಳಲಾಗಿದೆ. ಕರ್ನಾಟಕದಲ್ಲಿನ ವ್ಯಾಪಾರಿಗಳು ಪ್ರತಿದಿನ ಗೋವಾಗೆ ದನದ ಮಾಂಸ ಕಳುಹಿಸುತ್ತಾರೆ' ಎಂದು ಅವರು ವಿಧಾನಸಭೆಗೆ ಮಾಹಿತಿ ನೀಡಿದ್ದಾರೆ.

'ಗೋವಾ- ಕರ್ನಾಟಕ ಗಡಿಯಲ್ಲಿ ಸಂಬಂಧಿತ ಅಧಿಕಾರಿಗಳು ಕರ್ನಾಟಕದ ದನದ ಮಾಂಸ ವ್ಯಾಪಾರಿಗಳಿಂದ ಸಂಗ್ರಹಿಸುವ ತೆರಿಗೆಯ ಮೊತ್ತದಿಂದ ಈ ಪ್ರಮಾಣವನ್ನು ಲೆಕ್ಕಹಾಕಲಾಗಿದೆ. ಪ್ರತಿದಿನ ಕರ್ನಾಟಕದಿಂದ ಸರಾಸರಿ 2,120 ಕೆ.ಜಿಯಷ್ಟು ದನ ಮತ್ತು ಎಮ್ಮೆಯ ಮಾಂಸ ಗೋವಾಗೆ ಬರುತ್ತದೆ ಎಂದು ತೆರಿಗೆ ದಾಖಲೆಗಳು ಹೇಳುತ್ತವೆ' ಎಂದು ಅವರು ಲಿಖಿತ ಉತ್ತರದಲ್ಲಿ ವಿವರಿಸಿದ್ದಾರೆ.

'ಕರ್ನಾಟಕ ವಿಧಾನಸಭೆಯ ಗೋಹತ್ಯೆ ತಡೆ ಕಾಯ್ದೆಯನ್ನು ಜಾರಿಗೆ ತಂದ ನಂತರ ಗೋವಾಗೆ ಪೂರೈಕೆಯಾಗುವ ದನದ ಮಾಂಸದಲ್ಲಿ ಭಾರಿ ವ್ಯತ್ಯಯವಾಗಿದೆ' ಎಂದು ಅವರು ಹೇಳಿದ್ದಾರೆ. ಗೋವಾದ ಒಟ್ಟು ಜನಸಂಖ್ಯೆಯಲ್ಲಿ ಶೇ 30ರಷ್ಟು ಜನರು ದನ ಮತ್ತು ಎಮ್ಮೆಯ ಮಾಂಸವನ್ನು ತಿನ್ನುತ್ತಾರೆ. ಈ ಮಾಂಸಕ್ಕಾಗಿ ಗೋವಾ ರಾಜ್ಯವು ಮಹಾರಾಷ್ಟ್ರ ಮತ್ತು ಕರ್ನಾಟಕವನ್ನು ಅವಲಂಬಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪೊಲೀಸರು ಜನರ ಮೇಲೆ ಲಾಠಿ ಪ್ರಹಾರ ನಡೆಸುತ್ತಿರುವ, ಜನರು ದಿಕ್ಕೆಟ್ಟು ಓಡುತ್ತಿರುವ ದೃಶ್ಯವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಇದು ಕಾಶ್ಮೀರದ ದೃಶ್ಯವಾಗಿದ್ದು, ಸೇನಾಪಡೆ ಸಿಬ್ಬಂದಿ ಮುಸ್ಲಿಮರನ್ನು ಗುರಿಯಾಗಿಸಿ ಕ್ರಮ ಜರುಗಿಸಿದ್ದಾರೆ' ಎಂಬುದಾಗಿ ಕೆಲವು ಸಾಮಾಜಿಕ ಜಾಲತಾಣ ಬಳಕೆದಾರರು ಉಲ್ಲೇಖಿಸಿದ್ದಾರೆ. 'ವಿಡಿಯೊದಲ್ಲಿರುವ ಉರ್ದು ಬರಹಗಳಲ್ಲಿ, 'ಕಾಶ್ಮೀರದಲ್ಲಿ ಬೃಹತ್ ಸೇನಾ ಕವಾಯತು ನಡೆಸಲು ಸೇನೆ ಉದ್ದೇಶಿಸಿದೆ. ಇದು ಭಯೋತ್ಪಾದನೆ ವಿರುದ್ಧವಾದರೂ, ಇಸ್ಲಾಂ ಅನ್ನು ಗುರಿಯಾಗಿಸಲಾಗಿದೆ' ಎಂದು ಉಲ್ಲೇಖಿಸಲಾಗಿದೆ.



ಇದು ಕಾಶ್ಮೀರಕ್ಕೆ ಸಂಬಂಧಿಸಿದ ವಿಡಿಯೊ ಅಲ್ಲ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. 2019ರಲ್ಲಿ ಉತ್ತರ ಪ್ರದೇಶದ ಗೋರಖ-ಪುರದಲ್ಲಿ ಸಿಎಎ, ಎನ್‌ಆರ್‌ಸಿ ವಿರೋಧಿ ಪ್ರತಿಭಟನಕಾರರ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರದ ದೃಶ್ಯ ಇದು ಎಂದು ತಿಳಿಸಿದೆ. ಯೂಟ್ಯೂಬ್‌ನಲ್ಲಿ ಅಪ್ಲೋಡ್ ಆಗಿರುವ ಈ ವಿಡಿಯೊದಲ್ಲಿ ಪೊಲೀಸರು ಇರುವುದನ್ನು ಕಾಣಬಹುದು.

ಬೆರಗಿನ ಬೆಳಕು

ಗುರುರಾಜ ಕರಜಗಿ



ಶಸ್ತ್ರದಿಂದ ಸಾರ್ಥಕತೆ

ಸತ್ಯವೆಂಬುದದೇನು ಸೈನಿಕನ ಜೀವನದಿ?|
ಕತ್ತಿಯವನಿಗೆ ಸತ್ಯವದರಿಂದೆ ಧರ್ಮ ||
ಭುಕ್ತಿಸುಪ್ತಿಗಳ ವಿಭವಂಗಳವನಿಗೆ ಮಿಥ್ಯ |
ಸಾರ್ಥಕತೆಯಿಂದ ಸತ್ಯ - ಮಂಕುತಿಮ್ಮ || 479 ||

ಪದ-ಅರ್ಥ: ಸತ್ಯವೆಂಬುದದೇನು = ಸತ್ಯವೆಂಬುದು+ ಅದು + ಏನು, ಕತ್ತಿಯವನಿಗೆ = ಕತ್ತಿಯು + ಅವನಿಗೆ, ಭುಕ್ತಿ = ಊಟ, ಸುಪ್ತಿ = ನಿದ್ರೆ, ವಿಭವಂಗಳವನಿಗೆ = ವಿಭವಂಗಳು(ಸಿರಿ, ಸಂಪತ್ತುಗಳು) + ಅವನಿಗೆ, ಮಿಥ್ಯ = ಸುಳ್ಳು.

ವಾಚ್ಯಾರ್ಥ: ಸೈನಿಕನ ಜೀವನದಲ್ಲಿ ಸತ್ಯ ಎಂಬುದು ಯಾವುದು? ಅವನ ಆಯುಧವಾದ ಕತ್ತಿಯೇ ಅವನಿಗೆ ಸತ್ಯ, ಅದರಿಂದಲೇ ಧರ್ಮ. ಊಟ, ನಿದ್ರೆ, ಹಣ, ಕೀರ್ತಿಗಳು ಅವನ ಪಾಲಿಗೆ ಮಿಥ್ಯೆ. ಹೋರಾಟದಿಂದ ಸಾರ್ಥಕತೆ ಪಡೆಯುವುದು ಮಾತ್ರ ಸತ್ಯ.

ವಿವರಣೆ: ಕೆಲವರ್ಷಗಳ ಹಿಂದೆ ಸ್ನೇಹಿತರೊಂದಿಗೆ ಶ್ರೀನಗರಕ್ಕೆ ಹೋದಾಗ ಮುಂದೆ 'ಉರಿ' ಪ್ರದೇಶಕ್ಕೆ ಹೋದೆವು. ಅದು ಭಾರತ-ಪಾಕಿಸ್ತಾನದ ಗಡಿ. ಅಲ್ಲಿ ಭಾರತದ ಸೈನ್ಯದ ಒಂದು ದೊಡ್ಡ ತುಕಡಿ ಇದೆ. ಈ ಕ್ಷೇತ್ರ ಸಾಕಷ್ಟು ಯುದ್ಧಗಳನ್ನು ಕಂಡದ್ದು. ಸತತವಾದ ಎಚ್ಚರಿಕೆ ತುಂಬ ಮುಖ್ಯ. ನಾವು ಅಲ್ಲಿಯ ಸೈನ್ಯದ ಕಚೇರಿಗೆ ಹೋಗಿ ಅಲ್ಲಿ ಮುಖ್ಯಸ್ಥರಾಗಿದ್ದ ಕಮಾಂಡೆಂಟ್ ಬ್ರಿಗೇಡಿಯರ್‌ನನ್ನು ಭೆಟ್ಟಿ ಮಾಡಿದೆವು. ಅವರು ಅತ್ಯಂತ ವಿಶ್ವಾಸದಿಂದ ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಆಗ ನಮ್ಮೊಂದಿಗಿದ್ದ ಒಬ್ಬರು ಮೂರ್ಖ ಪ್ರಶ್ನೆ ಮಾಡಿದರು. 'ಇಲ್ಲಿಯ ಭಾರತೀಯ ಸೇನೆಯಲ್ಲಿ ಮುಸಲ್ಮಾನರು ಇದ್ದಾರೆಯೇ?' ಬ್ರಿಗೇಡಿಯರ್ ಅವರನ್ನು ಒಂದು ತೀಕ್ಷ್ಣನೋಟದಿಂದ ನೋಡಿ, 'ಇಲ್ಲಿ ಯಾವ ಮುಸಲ್ಮಾನರೂ ಇಲ್ಲ' ಎಂದರು. ಒಂದು ಕ್ಷಣ ತಡೆದು, 'ನಮ್ಮ ಸೇನೆಯಲ್ಲಿ ಯಾವ ಹಿಂದೂಗಳೂ ಇಲ್ಲ, ಯಾವ ಕ್ರಿಶ್ಚಿಯನ್‌ರೂ ಇಲ್ಲ, ಮತ್ತಾವ ಧರ್ಮದವರೂ ಇಲ್ಲ. ಇಲ್ಲಿರುವವರೆಲ್ಲ ಕೇವಲ ಸೈನಿಕರು. ಅವರ ಧರ್ಮವೆಂದರೆ ಅವರ ಸಮವಸ್ತ್ರ, ಅವರ ಆಯುಧಗಳು ಮತ್ತು ದೇಶಪ್ರೇಮ'. ಎಂತಹ ಅದ್ಭುತ ಉತ್ತರ! ಸೈನಿಕನ ಧರ್ಮ ಅವನು ಹುಟ್ಟಿದ ಜಾತಿಯಿಂದ ಬಂದದ್ದಲ್ಲ.

ಈ ಮಾತನ್ನು ಕಗ್ಗ ಹೇಳುತ್ತದೆ. ಸೈನಿಕನ ಬದುಕಿನಲ್ಲಿ ಸತ್ಯವೆಂದರೆ ಯಾವುದು? ಕತ್ತಿಯೇ ಅವನಿಗೆ ಧರ್ಮ. ಕತ್ತಿಯೆಂದರೆ ಅವನ ಆಯುಧ. ಅದು ಅವನ ರಕ್ಷಣೆಗೂ ಮತ್ತು ಆಕ್ರಮಣ ಮಾಡುವುದಕ್ಕೂ ಅತ್ಯಂತ ಅವಶ್ಯವಾದದ್ದು. ಯುದ್ಧದ ಉತ್ಕಟ ಕ್ಷಣಗಳಲ್ಲಿ ಅವನಿಗೆ ಊಟ, ನಿದ್ರೆ ಯಾವುದರ ಚಿಂತೆಯೂ ಇಲ್ಲ. ಅವನಿಗೆ ಹಣ ಮಾಡುವ, ಹೆಸರು ಮಾಡುವ ಯಾವ ಹವ್ಯಾಸವೂ ಇಲ್ಲ. ಅವನ ಕಾರ್ಯದಿಂದ, ಶೌರ್ಯದಿಂದ ಸಾರ್ಥಕತೆ ಪಡೆಯುವುದೊಂದೇ ಸತ್ಯ.

ಈ ಶೌರ್ಯದಲ್ಲಿ ಕ್ರೌರ್ಯವಿಲ್ಲವೆ? ಕ್ರೌರ್ಯವೂ ಧರ್ಮವಾದೀತೆ? ದಯೆಯಿಲ್ಲದ ಧರ್ಮ ಇದೆಯೆ? ಎಂಬ ಪ್ರಶ್ನೆಗಳು ಕಾಡುತ್ತವೆ. ಹಾಗಾದರೆ ಧರ್ಮವಿಲ್ಲದ ದಯೆ ಬೇಕೇ? ಧರ್ಮಸಾಧನೆಯಲ್ಲಿ ದಯೆಗೊಂದು ಸ್ಥಾನವಿದ್ದಂತೆ ದಂಡಕ್ಕೂ ಒಂದು ಸ್ಥಾನವಿದೆ. ಧರ್ಮ ಒಂದೊಂದು ಬಾರಿ, ಅಧರ್ಮದ ನಿಗ್ರಹದಲ್ಲಿ, ಉಗ್ರರೂಪವನ್ನು ತಾಳಬೇಕಾಗುತ್ತದೆ. ಅದು ಸಿಂಹದ ಗರ್ಜನೆ. ದೇಶದ ರಕ್ಷಣೆಯಲ್ಲಿ ನಡೆಯುವ ಹಿಂಸೆ, ಪ್ರಾಣಹಾನಿ ಕೂಡ ಸೈನಿಕನ ಧರ್ಮದ ಪರಿಧಿಯಲ್ಲೇ ಬರುತ್ತದೆ. ಅಲ್ಲಿ ಕರುಣೆಗೆ ಸ್ಥಾನವಿಲ್ಲ. ಕರುಣೆ ಸ್ವಭಾವದ್ದು, ಧರ್ಮ ವಿವೇಕದ್ದು. ದೇಶರಕ್ಷಣೆಯೇ ಧರ್ಮವಾದ್ದರಿಂದ ಅಲ್ಲಿ ಶಸ್ತ್ರದ ಬಳಕೆ ಸಾರ್ಥಕತೆಯ ಮಾರ್ಗವಾಗುತ್ತದೆ.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಅಕ್ಟೋಬರ್ 20, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ಪೂರ್ಣಿಮಾ ಗಂ. 31-54 (ರಾ. 7-12) ಬುಧವಾರ ನಿತ್ಯ ನಕ್ಷತ್ರ ರೇವತಿ ಗಂ. 19-6 (ಹ. 1-55) ಹರ್ಷ ನಾಮ ಯೋಗ ಗಂ. 37-56 ಭದ್ರೆ ಕರಣ ಗಂ. 0-54 ವಿಷಾಭಾವಃ ಅಮೃತ ಗಂ. 13-42 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-14 ಸೂರ್ಯಾಸ್ತ: 5-54 ಅದೃಷ್ಟ ಸಂಖ್ಯೆ 3

ಮೇಷ: ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಆಸಕ್ತಿ ತೋರಲಿದ್ದೀರಿ. ಮನೆಯಲ್ಲಿ ಸಂಭ್ರಮದ ವಾತಾವರಣ. ಹಣಕಾಸಿನ ಬಗ್ಗೆ ಚಿಂತಿಸುವುದು ಬೇಡ. ಸ್ತ್ರೀಯರಿಗೆ ಮನಸ್ಸಿನ ಮೇಲೆ ನಿಯಂತ್ರಣವಿರಲಿ. ಗೊಂದಲಮಯ ಬದುಕಿನಿಂದ ಮುಕ್ತಿ.

ವೃಷಭ: ಅಧಿಕಾರಿಗಳ ಸಹಕಾರದಿಂದ ಕಾರ್ಯದಲ್ಲಿ ಪ್ರಗತಿ. ಬಂಧು ಬಾಂಧವರ ಆಗಮನ ಸಾಧ್ಯತೆ. ಮನಸ್ಸಿಗೆ ಸಂಬಂಧಪಟ್ಟ ವ್ಯವಹಾರ ನಡೆಸುವುದು ಉಚಿತವಲ್ಲ. ಹಿರಿಯರ ಆಶೀರ್ವಾದ ದೊರೆಯಲಿದೆ.

ಮಿಥುನ: ಮಾನಸಿಕ ಸ್ಥೈರ್ಯ ಸದೃಢವಾಗಿ ನೆಮ್ಮದಿಯ ಜೀವನ. ಒಟ್ಟು ಕುಟುಂಬದ ಬಿಕ್ಕಟ್ಟಿನ ಕುರಿತು ಚರ್ಚೆ, ಸಂಗಾತಿಯಿಂದ ಸಮಾಧಾನದ ಜೊತೆಗೆ ನೆರವು ದೊರೆಯಲಿದೆ. ಮಕ್ಕಳಿಂದಾಗಿ ಮನೆಯಲ್ಲಿ ಸಂತಸದ ಕ್ಷಣಗಳು.

ಕರ್ಕಾಟಕ: ಮನಸ್ಸಿಗೆ ಸಂಬಂಧಪಟ್ಟರೂ ದೇಹಾರೋಗ್ಯದ ಬಗ್ಗೆ ಆಲಸ್ಯ ಬೇಡ. ವಾಹನ ವ್ಯಾಪಾರದಲ್ಲಿ ಪ್ರಗತಿ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನಿರೀಕ್ಷಿತ ಲಾಭ. ವನ್ಯ ಸಂಪತ್ತಿಗೆ ಅಧಿಕವಾದ ಪರಿಶ್ರಮ ಅಗತ್ಯ.

ಸಿಂಹ: ಅನುಕೂಲವಾದ ಅನೇಕ ವಿಷಯಗಳಲ್ಲಿ ಸಾಫಲ್ಯತೆ ಪಡೆಯಲಿದ್ದೀರಿ. ಮನಸ್ಸಿಗೆ ಒಪ್ಪದ ವ್ಯವಹಾರದಲ್ಲಿ ತೊಡಗುವುದು ಬೇಡ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ. ಸಹೋದರರಿಂದ ಕಾರ್ಯಕ್ಕೆ ಅನುವು.

ಕನ್ಯಾ: ಅದೃಷ್ಟದ ದಿನಕ್ಕಾಗಿ ಕಾಯುತ್ತಿರುವ ನಿಮಗೆ ಭಗವಂತನ ದಯೆ ಇದೆ. ನಿರೀಕ್ಷಿತ ಮಟ್ಟಕ್ಕೆ ನಿಮಗೆ ಗೆಲುವು ಕಟ್ಟಿಟ್ಟ ಬುತ್ತಿ. ಹಣಕಾಸಿನ ವ್ಯವಹಾರದಲ್ಲಿ ತೃಪ್ತಿದಾಯಕ ಬದುಕು. ಬಂಗಾರ ಖರೀದಿ ಮಾಡಲಿದ್ದೀರಿ.

ತುಲಾ: ದೂರದ ಬಂಧುಗಳ ಆಗಮನದಿಂದ ತೀರ್ಥಯಾತ್ರೆ ಬಗ್ಗೆ ನಿಷ್ಕರ್ಷೆ, ರತ್ನ ವ್ಯಾಪಾರಿಗಳಿಗೆ ಅನುಕೂಲ. ಗುಡಿಕೈಗಾರಿಕೆ ನಡೆಸುವವರಿಗೆ ಪ್ರಗತಿ. ಹೊಸ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಿದ್ದೀರಿ.

ವೃಶ್ಚಿಕ: ಮನೆಯಲ್ಲಿನ ರಂಪಾಟಗಳು ಜಾಸ್ತಿಯಾಗುವ ಸಾಧ್ಯತೆ. ತಾಳ್ಮೆಯಿಂದಾಗಿ ಅನಿರೀಕ್ಷಿತ ಬೆಳವಣಿಗೆಯಿಂದ ಮಾನಸಿಕ ನೆಮ್ಮದಿ. ಸರ್ಕಾರೀ ನೌಕರರಿಗೆ ಪ್ರಶಂಸೆಯ ದಿನ. ಚಿಲ್ಲರೆ ವ್ಯಾಪಾರಿಗಳಿಗೆ ಲಾಭದ ದಿನ

ಧನು: ಮಕ್ಕಳಿಂದ ಅನುಕೂಲಕರ ಸಹಾ ದೊರಕಲಿದೆ. ಅಪರೂಪದ ಅತಿಥಿಗಳು ಆಗಮಿಸುವ ಸಾಧ್ಯತೆ. ಔಷಧ ಸೇವನೆಯಲ್ಲಿ ಮುಂಜಾಗೃತೆ ಅಗತ್ಯ. ಮನಸ್ಸಿಗೆ ಸಂಬಂಧಿಸಿದ ವಿಷಯವನ್ನು ಬೇರೆಯವರಲ್ಲಿ ನಿವೇದಿಸಿಕೊಳ್ಳಿ.

ಮಕರ: ಹಿರಿಯ ಅಧಿಕಾರಿಗಳ ಭೇಟಿಯಿಂದ ಮುಂದೂಡಲ್ಪಡುತ್ತಿರುವ ಕಾರ್ಯಗಳು ಶೀಘ್ರದಲ್ಲಿ ನೆರವೇರಲಿವೆ. ಕುಶಲಕರ್ಮಿಗಳಿಗೆ ಅನುಕೂಲ. ಬಂಧುಗಳಿಂದ ಆರ್ಥಿಕ ಸಹಾಯದಿಂದ ದೃಢತೆ.

ಕುಂಭ: ಸತ್ಕಾರ್ಯದಲ್ಲಿ ಪಾಲ್ಗೊಳ್ಳುವಿಕೆ. ಹಳೆಯ ವೈಷಮ್ಯ ಗರಿಗೆದರುವ ಸಾಧ್ಯತೆ. ವಿದ್ಯಾರ್ಥಿಗಳು ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಉತ್ತಮ. ವಿಪರೀತವಾದ ಖರ್ಚು ರಕ್ಷಣಾಧಿಕಾರಿಗಳಿಗೆ ಎಚ್ಚರಿಕೆಯ ಕಾಲ

ಮೀನ: ಕಾರ್ಯಕ್ಷೇತ್ರದಲ್ಲಿ ಅಗ್ನಿಯಿಂದ ಎಚ್ಚರ ಅಗತ್ಯ. ಅನಿರೀಕ್ಷಿತವಾದ ಅಡೆತಡೆಗಳಿಗಾಗಿ ದೃತಿಗೆಡಬೇಕಾಗಿಲ್ಲ. ಮಹಿಳೆಯರಿಗೆ ಕಾಲುನೋವಿನ ಸಾಧ್ಯತೆ. ಮಹಿಳಾ ಉದ್ಯಮಿಗಳಿಗೆ ಸಂತೃಪ್ತಿ.


ನಿಮ್ಮ ಜನ್ಮದಿನ 20-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮ್ಮ ಮಹತ್ತರ ಕಾರ್ಯಯೋಜನೆಗಳು ನಿರಾಯಾಸವಾಗಿ ಸಾಗಿ ನೆಮ್ಮದಿಯತ್ತ ನಿಮ್ಮ ಪಯಣ. ದೂರ ಪ್ರಯಾಣ ಸಾರ್ಥಯತೆ. ಅನಿರೀಕ್ಷಿತವಾಗಿ ತಲೆದೋರಬಹುದಾದ ಸಮಸ್ಯೆಗಳಿಗೆ ಜಾಗರೂಕರಾಗಿ ವ್ಯವಹರಿಸುವುದರಿಂದ ಪರಿಹಾರ ಕಾಣಲಿದ್ದೀರಿ.

ಪದಬಂಧ 4753

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೋಲಿಕೆಗೆ ಮೀರಿದುದು (4)
3.ಮಿತಿ ಮೀರಿದ ಕೋಪವಿದು (3)
4.ಮರವನ್ನು ಕೊಯ್ಯುವ ಸಾಧನ (4)
6.ಪರಂಪರೆಯಲ್ಲಿ ಆಗಿರುವ ಗಲಾಟೆ (2)
7.ನಾಮ ಹಚ್ಚಿಕೊಂಡವನ ಹೆಸರು (4)
8.ಕರಿಯ ಹತ್ತಿರವಿರುವ ಕಿರುಗತ್ತಿ (3)
9.ಮರುನುಡಿ ಅಥವಾ ಜವಾಬು (4)
12.ವರಮಾನ ಕೇಳುತ್ತಿರುವುದು ಅತ್ತೆಯ ಗಂಡ! (2)
13.ಮಲಗುವ ಮನೆಯಿದು (4)
15.ಒಳ್ಳೆಯ ಗುಣಗಳಿಂದ ಕೂಡಿದ ಮನುಷ್ಯ (3)
16.ಎಳೆತನದಿಂದಲೂ ಬೆಳೆಸಿಕೊಂಡು ಬಂದಿರುವ ಸ್ನೇಹ (4)

ಮೇಲಿಂದ ಕೆಳಕ್ಕೆ
1.ಅಪರಿಚಿತನ ಬಳಿಯಲ್ಲಿರುವುದು ಚೊಕ್ಕ ಚಿನ್ನ! (4)
2.ಮಗಳ ಹತ್ತಿರವಿರುವ ಪುತ್ರ (2)
3.ಚಿತ್ರವಿದ್ದುದಕ್ಕೇ ಇಷ್ಟೊಂದು ಬೆರಗು! (3)
5.ಮಯನ ಬಳಿ ಕಳೆದ ಕಾಲ (3)
7.ನಾಗರಿಕತೆ ಕಲಿತ ಸ್ತ್ರಿ (2)
8.ಕಠೋರವಾಗಿರುವ ಕೈ! (2)
9.ವೇಷ ಧರಿಸಿಕೊಂಡು ಒಳಹೋಗುವಿಕೆ (3)
10.ಅವನ ಸಾವು ಹೀಗೆ ಬಂದಿದೆ! (4)
11.ಪಾಕದಲ್ಲಿರುವ ದೋಷ (3)
14.ಹಲಗೆಗಾಗಿ ಈ ವೈರವೇ? (2)



4752ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗೊರವಂಕ 3.ಬಾಲರವಿ 5.ವಿಫಲ 6.ಕೆಸರು 8.ಗೈರತ್ತು 9.ಅರ್ಚಕ 10.ರಿವಾಜು 12.ಕಲಹ 14.ಕಡಿವಾಣ 15.ಸೆರೆಮನೆ

ಮೇಲಿಂದ ಕೆಳಕ್ಕೆ: 1.ಗೊರಕೆ 2.ಕವಿ 3.ಬಾಲ 4.ವಿಪತ್ತು 7.ರುದ್ರನಾಟಕ 8.ಗೈರುಹಾಜರಿ 9.ಅಷ್ಟಕ 11.ಜುಲ್ಮಾನೆ 12.ಕಣ 13.ಹಸೆ

ಸುಡೊಕು 5139

8				1				
		9		5		7		3
	1	5			3		2	
	4					8		
3			8		1			2
1	9			2				7
	8						7	
2		4	9		7	1		6
	5			3				9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5138 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಬುಧವಾರ • ಅಕ್ಟೋಬರ್ 20, 2021 ಪ್ರಜಾವಾಣಿ

ರಾಮಾಯಣದ ಅವತಾರ

• ಮಂಜುನಾಥ ಕೊಳ್ಳೇಗಾಲ



ಮನುಕುಲದ ಭಾಗ್ಯವೆನಿಸುವ ರಾಮಾಯಣವನ್ನು ಜಗತ್ತಿಗೆ ನೀಡಿದ ವಾಲ್ಮೀಕಿಮುನಿಗಳ ಜನ್ಮದಿನ ಇಂದು. ರಾಮಾಯಣ ನಮ್ಮೆಲ್ಲರ ಹೃದಯವನ್ನು ಮೆದುಗೊಳಿಸಲಿ...

ರಾಮಾಯಣವು ಆರಂಭವಾಗುವುದೇ ಒಬ್ಬ ಆದರ್ಶಪುರುಷನನ್ನು ದೃಷ್ಟಿಯಲ್ಲಿಟ್ಟುಕೊಂಡು:
ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚವೀರ್ಯವಾನ್ |
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ||

ಈ ಲೋಕದಲ್ಲಿ ಯಾವ ಪುರುಷನು ಗುಣವಂತನೂ ವೀರ್ಯವಂತನೂ ಧರ್ಮಜ್ಞನೂ ಕೃತಜ್ಞನೂ ಸತ್ಯವಾಕ್ಯನೂ ದೃಢವ್ರತನೂ ಆಗಿದ್ದಾನೆ? ಆದರ್ಶಗುಣಗಳ ಪಟ್ಟಿ ಇಲ್ಲಿಗೇ ಮುಗಿಯುವುದಲ್ಲ - ಚರಿತ್ರವಂತನೂ ಸತ್ಯವಾದಿಯೂ ದೃಢಸಂಕಲ್ಪನೂ ಸದಾಚಾರನಿಷ್ಠನೂ ಸರ್ವಭೂತಹಿತನೂ ವಿದ್ವಾಂಸನೂ ಸಮರ್ಥನೂ ಪ್ರಿಯದರ್ಶನನೂ ಆತ್ಮವಂತನೂ ಕೋಪವನ್ನು ಗೆದ್ದವನೂ ದ್ಯುತಿಮಂತನೂ ಅಸೂಯೆಪಡದವನೂ - ಇಂಥವನು ಈ ಲೋಕದಲ್ಲಿ ಯಾರಿದ್ದಾನೆ ಎಂಬ ಜಿಜ್ಞಾಸೆ, 'ತಪಸ್ಸ್ವಾಧ್ಯಾಯನಿರತ' ವಾಲ್ಮೀಕಿಮುನಿಗೆ ಮೂಡಿತಂತೆ.

ತಪೋನಿರತರಿಗಷ್ಟೇ ಮೂಡುವ ಪ್ರಶ್ನೆಗಳಿವು. ನಮಗೆ ಅನುಮಾನವೇ ಇರಲಾರದು - ಇಂಥವನೊಬ್ಬ ಮನುಷ್ಯ ಇರುವ ಸಾಧ್ಯತೆಯೇ ಇಲ್ಲವೆನ್ನುವ ಬಗ್ಗೆ. ಈ ಪ್ರಶ್ನೆಯನ್ನು ವಾಲ್ಮೀಕಿ ನಾರದರ ಮುಂದಿಟ್ಟಾಗ ನಾರದರ ಉತ್ತರವೂ ಹೀಗೇ ಮೊದಲುಗೊಳ್ಳುತ್ತದೆ - 'ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ'. ಹೀಗೆ ಹೇಳುವ ನಾರದರು 'ಆದರೂ ಅಂಥವನೊಬ್ಬನಿದ್ದಾನೆ, ಅವನ ವಿಷಯವನ್ನು ಹೇಳುತ್ತೇನೆ ಕೇಳು' ಎಂದು ಇಕ್ಷ್ವಾಕುವಂಶಪ್ರಭುವಾದ ರಾಮನ ಕತೆಯನ್ನಾರಂಭಿಸುತ್ತಾನೆ - ಇದು ರಾಮಾಯಣದ ಭೂಮಿಕೆ.

ನಾರದನು ಕೊಡುವ ರಾಮಾದರ್ಶಗಳ ಪಟ್ಟಿಯೇನು ಕಡಿಮೆಯದಲ್ಲ. ವಾಲ್ಮೀಕಿಯ ಆದರ್ಶಪುರುಷನ ಗುಣಗಳು ಮೂರು ಶ್ಲೋಕದಲ್ಲಿ ಮುಗಿದರೆ, ರಾಮನ ಆದರ್ಶಗುಣಗಳು ಹದಿಮೂರು ಶ್ಲೋಕಗಳಲ್ಲಿ ಹರಿಯುತ್ತವೆ - ಈ ಇಕ್ಷ್ವಾಕುವಂಶಪ್ರಭು ನಿಯತಾತ್ಮ, ಮಹಾವೀರ್ಯ, ವಶೀ, ವಾಗ್ಮಿ, ಆಜಾನುಬಾಹು, ಸಮುದ್ರದಂತೆ ಗಂಭೀರ, ಹಿಮವಂತನಂತೆ ಧೈರ್ಯವಂತ, ವಿಷ್ಣುವಿನಷ್ಟು ವೀರ್ಯವಂತ, ಚಂದ್ರನಷ್ಟು ಪ್ರಿಯದರ್ಶನ, ಕಾಲಾಗ್ನಿಯಷ್ಟು ಕೋಪಶಾಲಿ, ಧರಿತ್ರಿಯಷ್ಟು ಕ್ಷಮಾಶೀಲ. ದೊರೆಯಾಗುವುದಕ್ಕೆ ಇದಕ್ಕಿಂತ ಉತ್ತಮ ಗುಣಗಳು ಬೇಕೇ? ಇಂಥಾ ರಾಮನನ್ನು ಕಂಡರೆ ದಶರಥನಿಗೆ ಎಲ್ಲಿಲ್ಲದ ಪ್ರೀತಿ. ವಯಸ್ಸಿಗೆ ಬಂದ ಮಗನಿಗೆ ಯೌವರಾಜ್ಯಾಭಿಷೇಕ ಮಾಡಲು ಅಪೇಕ್ಷಿಸಿದನು. ಮುಂದಿನ ಕತೆ ನಮಗೆಲ್ಲ ಗೊತ್ತೇ ಇದೆ.

ನಾರದನಿಂದ ಈ ಕತೆಯನ್ನು ಕೇಳಿದ ವಾಲ್ಮೀಕಿ ಸ್ನಾನಾಹ್ನಿಕಗಳನ್ನು ತೀರಿಸಲೆಂದು ಶಿಷ್ಯರೊಂದಿಗೆ ತಮಸಾನದಿಯ ತೀರಕ್ಕೆ ಬರುತ್ತಾರೆ. ಆ ತಿಳಿನೀರ ಹೊಳೆಯನ್ನು ಕಂಡು ಕವಿ ಹೇಳುವ ಮಾತುಗಳನ್ನು ಕೇಳಿ:

'ಅಕರ್ದಮಮಿದಂ ತೀರ್ಥಂ ಭಾರದ್ವಾಜ ನಿಶಾಮಯ
ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋ ಯಥಾ'

ಸಜ್ಜನರ ಮನಸ್ಸಿನಂತೆ ಪ್ರಸನ್ನರಮಣೀಯವಾಗಿರುವ ಈ ತಿಳಿನೀರನ್ನು ನೋಡು ಎಂದು ಶಿಷ್ಯನಾದ ಭಾರದ್ವಾಜನಿಗೆ ಹೇಳುತ್ತಾರೆ ವಾಲ್ಮೀಕಿ. ಸಜ್ಜನರ ಮನಸ್ಸನ್ನು ತಿಳಿನೀರಿಗೆ ಹೋಲಿಸುವುದು ವಾಡಿಕೆ - ಏಕೆಂದರೆ ತಿಳಿನೀರು ನಮಗೆ ಹೆಚ್ಚು ಪರಿಚಿತ; ಸಜ್ಜನರ ಮನಸ್ಸು ಈ ಹೋಲಿಕೆಯಿಂದ ತಿಳಿಯಬೇಕಾದ್ದು. ಆದರೆ ಕವಿಯ ದೃಷ್ಟಿಯಲ್ಲಿ ಸಜ್ಜನರ ಮನಸ್ಸು ತಿಳಿನೀರಿಗೇ ಉಪಮೇಯವಾದುದು. ಹೀಗೆ ಹೇಳಿ ಆ ತೀರ್ಥದಲ್ಲಿ ಮೀಯಬೇಕೆಂದು ಶಿಷ್ಯನಿಂದ ವಲ್ಕಲವನ್ನು ಪಡೆದ ಮುನಿ, ಪ್ರಸನ್ನವಾದ ಪ್ರಕೃತಿಸೌಂದರ್ಯವನ್ನು ಸವಿಯುತ್ತಾ ಅಲ್ಲೇ ಅಡ್ಡಾಡುತ್ತಿರಲಾಗಿ, ಅಲ್ಲೇ ಇಂಪಾಗಿ ಕೂಗುತ್ತಾ ಒಂದನ್ನೊಂದು ಬಿಡದೇ ಹಾರಾಡುತ್ತಿದ್ದ ಕ್ರೌಂಚಪಕ್ಷಿಗಳ ಜೋಡಿಯನ್ನು ನೋಡುತ್ತಾರೆ. ಎಲ್ಲವೂ ಇಷ್ಟು ಸುಂದರವಾಗಿ, ಪ್ರಸನ್ನವಾಗಿ ಇದ್ದುಬಿಟ್ಟಿದ್ದರೆ ರಾಮಾಯಣವೇ ಇರುತ್ತಿರಲಿಲ್ಲವೇನೋ. ವಾಲ್ಮೀಕಿಯ ಕಣ್ಣು ಆ ಪಕ್ಷಿಗಳ ಮೇಲೆ ಬೀಳುವುದಕ್ಕೂ ಅಲ್ಲೇ ಇನ್ನೊಂದು ಕಡೆಯಿಂದ, ದ್ವೇಷಬುದ್ಧಿಯ ಬೇಡನೊಬ್ಬನಿಂದ ಚಿಮ್ಮಿದ ಬಾಣ ಆ ಪಕ್ಷಿಮಿಥುನದಲ್ಲಿ ಗಂಡು ಹಕ್ಕಿಗೆ ನಾಟ, ಅದು ಚೀರುತ್ತಾ ಕೆಳಗುರುಳುವುದಕ್ಕೂ ಒಂದೇ ಆಗುತ್ತದೆ. ಅದು ಕೆಳಗೆ ಬಿದ್ದು ವಿಲಗುಟ್ಟುತ್ತಿರಲು, ತನ್ನ ಸಂಗಾತಿಯನ್ನು ಕಳೆದುಕೊಂಡ ಹೆಣ್ಣುಹಕ್ಕಿಯ ಆಕ್ರಂದನ, ಹೆಂಗರುಳಿನ ವಾಲ್ಮೀಕಿಯನ್ನು ಕರಗಿಸಿಬಿಡುತ್ತದೆ. ಅರಿವಿಲ್ಲದೇ ಆತನ ಬಾಯಿಂದ ಶಾಪವಾಕ್ಯವೊಂದು ಹೊಮ್ಮುತ್ತದೆ:

'ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ
ಯತ್ಕ್ರೌಂಚಮಿಥುನಾದೇಕಂ ಅವಧೀಃ ಕಾಮಮೋಹಿತಮ್'

'ಎಲೋ ಬೇಡನೇ, ಕಾಮಮೋಹಿತವಾದ ಈ ಜೋಡಿಯಲ್ಲೊಂದನ್ನು ಕೊಂದುಹಾಕಿದ ನೀನು ಬಹುಕಾಲ ಬದುಕಿರಬಾರದು...'

ಕೋಪದಿಂದ ಇಷ್ಟು ಒದರಿದ ಮೇಲೆ ಮಹರ್ಷಿಗೆ ಇದ್ದಕ್ಕಿದ್ದಂತೆ ಹೊಳೆಯುತ್ತದೆ - ಇದೇನು? ಕೋಪದಿಂದ ಹೊರಟ ಉದ್ಗಾರವೂ ಹೀಗೆ ಪಾದಬದ್ಧವಾಗಿ ಸಮಾಕ್ಷರಗಳಿಂದ ಕೂಡಿ, ವೀಣೆಯೊಡನೆ ಹಾಡಲು ಯೋಗ್ಯವಾದ ಶ್ಲೋಕವಾಯಿತಲ್ಲ. ಹೀಗೆ ಸೋಜಿಗಪಟ್ಟುಕೊಂಡೇ ಆಶ್ರಮಕ್ಕೆ ಹಿಂದಿರುಗಿದ ವಾಲ್ಮೀಕಿಗೆ ಬ್ರಹ್ಮದೇವನ ದರ್ಶನವಾಗುತ್ತದೆ. ಇನ್ನೂ ಆ ಪಕ್ಷಿವಿಯೋಗದ ಗುಂಗಿನಲ್ಲಿ, ಆ ಶೋಕವು ಶ್ಲೋಕವಾದ ಬೆರಗಿನಲ್ಲೇ ಇದ್ದ ಮುನಿಗೆ ಬ್ರಹ್ಮನು ರಾಮಾಯಣದ ರಚನೆಗೆ ಇದು ನಿಮಿತ್ತವಾಯಿತೆಂದು ಹೇಳಿ, ರಾಮಾಯಣವನ್ನು ರಚಿಸುವಂತೆ ಹೇಳಿ ಅಂತರ್ಧಾನನಾಗುತ್ತಾನೆ. ಹೀಗೆ ಹುಟ್ಟಿದ್ದು, 'ಸೀತಾಯಾಶ್ಚರಿತಂ ಮಹತ್' ಕೂಡ ಆದ ರಾಮಾಯಣ.

ಮನುಕುಲದ ಭಾಗ್ಯವೆನಿಸುವ ರಾಮಾಯಣವನ್ನು ಜಗತ್ತಿಗೆ ನೀಡಿದ ವಾಲ್ಮೀಕಿಮುನಿಗಳ ಜನ್ಮದಿನವಂತೆ ಇಂದು. ರಾಮಾಯಣದ ನಮ್ಮೆಲ್ಲರ ಹೃದಯವನ್ನು ಮೆದುಗೊಳಿಸಲಿ, ಸಂಸ್ಕರಿಸಲಿ, ಶ್ರೀಮಂತಗೊಳಿಸಲಿ.


'ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ'

❖

ಪ್ರಜಾವಾಣಿ ದೀಪಾವಳಿ ಕಥೆ – ಕವನ ಸ್ಪರ್ಧೆ ಫಲಿತಾಂಶ ಪ್ರಕಟ

ಮುನವ್ವರ್‌ಗೆ ಕಥಾ, ಕಾವ್ಯಾಗೆ ಕವನ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಮುನವ್ವರ್ ಜೋಗಿಬೆಟ್ಟು



ಕಾವ್ಯಾ ಕಡಮೆ

ಬೆಂಗಳೂರು: 2021ನೇ ಸಾಲಿನ ಪ್ರತಿಷ್ಠಿತ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ' ಮತ್ತು 'ಪ್ರಜಾವಾಣಿ ದೀಪಾವಳಿ ಕವನ ಸ್ಪರ್ಧೆ'ಗಳ ಫಲಿತಾಂಶ ಪ್ರಕಟವಾಗಿದೆ. ಮುನವ್ವರ್ ಜೋಗಿಬೆಟ್ಟು ಅವರ 'ಜಿನ್ನ್' ಕಥಾಸ್ಪರ್ಧೆಯಲ್ಲಿ ಹಾಗೂ ಕಾವ್ಯಾ ಕಡಮೆ ಅವರ 'ಮುಕ್ತಿಯೆಂಬೋ ಬನದ ಧ್ಯಾನ' ಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಪಡೆದುಕೊಂಡಿವೆ.

ಕಥಾಸ್ಪರ್ಧೆಯಲ್ಲಿ ಸಂತೋಷ ಗುಡ್ಡಿಯಂಗಡಿ ಅವರ 'ಮದ್ದು' ಹಾಗೂ ದಯಾನಂದ ಅವರ 'ಬೈಬಲ್ ಬಂಪ್' ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನಕ್ಕೆ ಆಯ್ಕೆಯಾಗಿವೆ. ಅಮರೇಶ್ ಗಿಣಿವಾರ ಅವರ 'ಹಸಿಬೆ', ಆನಂದ ಗೋಪಾಲ ಅವರ 'ದೇವತೆಗಳೆ ಹರಸಿರಿ', ಮಂಜುನಾಥ ಹಿಲಿಯಾಣ ಅವರ 'ಜಲಬಾಂಬು..!' ಮತ್ತು ದೀಪಾ ಹಿರೇಗುತ್ತಿ ಅವರ 'ಅಶ್ವಮೇಧ' ಕಥೆಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಕವನ ಸ್ಪರ್ಧೆಯಲ್ಲಿ ಎಂ.ಎಸ್.ಸಿದ್ಧಾರ್ಥ ಅವರ 'ನಿಷಾದಿನಿ' ಮತ್ತು ಕಲ್ಮೇಶ ತೋಟದ ಅವರ 'ಕಾರಹುಣಿವಿ ಕರಿ' ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ. ಮೆಹಬೂಬ್ ಮುಲ್ತಾನಿ ಅವರ 'ಅಮರತ್ವದ ಶಾಲೆ', ಅಶ್ಫಾಕ್ ಪೀರ್ ಅವರ 'ಗಜಲ್' ಮತ್ತು ಅಂಜನಾ ಹೆಗಡೆ ಅವರ 'ಹಚ್ಚೆ ಹಾಕುವವನಿಗೆ...!' ಕವಿತೆಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ. ಸಾಹಿತಿ ಮೊಗಳ್ಳಿ ಗಣೇಶ್ ಹಾಗೂ ಕಥೆಗಾರ್ತಿ ಎಂ.ಎಸ್.ವೇದಾ ಅವರು ಕಥಾಸ್ಪರ್ಧೆಯ ತೀರ್ಪುಗಾರರಾಗಿದ್ದರು. ಸಾಹಿತಿ ಚಿಂತಾಮಣಿ ಕೊಡ್ಲೆಕೆರೆ ಹಾಗೂ ಕವಯತ್ರಿ ಎಚ್.ಎಸ್. ಮುಕ್ತಾಯಕ್ಕ ಅವರು ಕವನ ಸ್ಪರ್ಧೆಯ ತೀರ್ಪುಗಾರರಾಗಿದ್ದರು.



ಸಂತೋಷ ಗುಡ್ಡಿಯಂಗಡಿ



ಎಂ.ಎಸ್ ಸಿದ್ಧಾರ್ಥ



ದಯಾನಂದ



ಕಲ್ಮೇಶ ತೋಟದ

ಬಹುಮಾನದ ವಿವರ

ಕಥಾ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಪಡೆದ ಕಥೆಗಳಿಗೆ ಕ್ರಮವಾಗಿ ಪ್ರಥಮ ₹20 ಸಾವಿರ, ದ್ವಿತೀಯ ₹15 ಸಾವಿರ ಹಾಗೂ ತೃತೀಯ ₹10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಲಭಿಸಲಿದೆ. ಕವನ ಸ್ಪರ್ಧೆ ಮೊದಲ ಮೂರು ಸ್ಥಾನ ಪಡೆದ ಕವನಗಳಿಗೆ ಕ್ರಮವಾಗಿ ಪ್ರಥಮ ₹5,000, ದ್ವಿತೀಯ ₹3,000 ಹಾಗೂ ತೃತೀಯ ₹2,500 ನಗದು ಹಾಗೂ ಪ್ರಶಸ್ತಿ ಪತ್ರ ದೊರೆಯಲಿದೆ.

ತೀರ್ಪುಗಾರರ ಟಿಪ್ಪಣಿ



ಆಯ್ಕೆಗಳಲ್ಲಿ ವಿರೋಧಾಭಾಸಗಳಿರಲಿಲ್ಲ. ಆಯ್ದ ಕಥೆಗಳ ಸ್ಥಾನಮಾನದಲ್ಲಿ ಮಾತ್ರ ಕೊಂಚ ವ್ಯತ್ಯಾಸವಿತ್ತು. ಈಗ ಕಾಲ ಬಿಗಡಾಯಿಸಿದೆ. ಅತ್ಯುನ್ನತ ಕಥೆಗಾರರೇ ಬರೆದರೂ 'ಇದು ಯಾಕೊ ಸಾಲದು' ಎನಿಸುತ್ತಿದೆ. ಕಂಬನಿ, ವಿದಾಯ, ಸದಾಶಯದ ಕಥೆಗಳು ಎದುರಿಗಿದ್ದವು.
ಮೊಗಳ್ಳಿ ಗಣೇಶ್



ಈಗ ಎಲ್ಲೆಲ್ಲು ಬೆಲೆ ಹೆಚ್ಚಳದ ಕಾಲ. ದೇಶ ಸರ್ವೋದಯ ಸಾಮ್ರಾಜ್ಯೋದಯವಾಗುವತ್ತ ಸಾಗಿರುವ ಅತಿ ಸೂಕ್ಷ್ಮ ಕಾಲ. ಒಂದು ಕಥೆ ಕ್ರಾಂತಿ ಮಾಡುವುದೇ..? ಕಥೆ ಎಂದಾಗ ಅಲ್ಲೊಂದು ಮೌನ ಮೂಡಬೇಕು, ಕಸಿವಿಸಿಯಾಗಬೇಕು, ತಿರಸ್ಕಾರ, ಸಿಟ್ಟು ಉಂಟಾಗಬೇಕಲ್ಲವೇ? ಅಂತಹ ಸಂಗತಿಗಳು ಕೆಲವು ಕಥೆಗಳಲ್ಲಿ ತೆಳ್ಳನೆ ಬಂದುಹೋಗುತ್ತವೆ.
ಎಂ.ಎಸ್. ವೇದಾ



ಲೋಕವನ್ನು ಕಾಡುತ್ತಿರುವ ಅನೇಕ ಸಂಗತಿಗಳನ್ನು ಸ್ಪರ್ಧೆಗೆ ಬಂದಿದ್ದ ಕವಿತೆಗಳು ಸ್ಪರ್ಶಿಸಿದ್ದವು. ಅದು ಮೆಚ್ಚುಗೆಯ ಅಂಶ. ಈ ಕವಿಗಳು ಕಾವ್ಯಕ್ರಿಯೆಯನ್ನು ಗಂಭೀರವಾಗಿ ಸ್ವೀಕರಿಸಿರುವ ರೀತಿ ಅಭಿನಂದನೀಯ. ಕವಿಗಳು ಗಹನವಾದುದನ್ನು ಹೇಳಲು ಅಷ್ಟೇ ಸಂಕೀರ್ಣವಾದ ಕಾವ್ಯಶಿಲ್ಪವನ್ನು ಕಟ್ಟುವುದರ ಕುರಿತು ನಮಗೆ ಮೆಚ್ಚುಗೆ ಇದೆ.
ಚಿಂತಾಮಣಿ ಕೊಡ್ಲೆಕೆರೆ



ಕವಿತೆಗಳ ವಸ್ತುವೈವಿಧ್ಯ, ಹೊಸಭಾವ ಆಸಕ್ತಿ ಹುಟ್ಟಿಸುತ್ತದೆ, ಮೆಚ್ಚುಗೆಗೂ ಕಾರಣವಾಗುತ್ತದೆ. ಕಾವ್ಯವೆಂಬುದು ಒಂದು ಇನ್‌ಸ್ಟಂಟ್ ಕಾಫಿ ಅಲ್ಲ. ಕಾವ್ಯ ಕಟ್ಟುವ ಕಲೆ, ಬಳಸುವ ಭಾಷೆ, ಛಂದಸ್ಸು ಅತೃಪ್ತಿಗೂ ಕಾರಣವಾಗುತ್ತದೆ.
ಎಚ್.ಎಸ್. ಮುಕ್ತಾಯಕ್ಕ

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ: ಕಾಂಗ್ರೆಸ್‌ನ ಕಾರ್ಯತಂತ್ರ

ಶೇ 40 ಕ್ಷೇತ್ರ ಮಹಿಳೆಯರಿಗೆ ಮೀಸಲು

• ಸಂಜಯ್ ಪಾಂಡೆ

ಲಖನೌ: ಜಾತಿ ಸಮೀಕರಣವನ್ನು ತಮಗೆ ಅನುಕೂಲಕರವಾಗಿ ಪರಿವರ್ತಿಸುವುದಕ್ಕಾಗಿ ವಿವಿಧ ರಾಜಕೀಯ ಪಕ್ಷಗಳು ಜಾತಿ ಆಧಾರಿತ ಸಭೆಗಳನ್ನು ನಡೆಸುತ್ತಿರುವುದರ ನಡುವೆಯೇ ಕಾಂಗ್ರೆಸ್ ಪಕ್ಷವು ಬೇರೊಂದು ದಾಳ ಉರುಳಿಸಿದೆ. ಉತ್ತರ ಪ್ರದೇಶ ವಿಧಾನಸಭೆಗೆ ನಾಲ್ಕೈದು ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಶೇ 40ರಷ್ಟು ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವುದಾಗಿ ಘೋಷಿಸಿದೆ. ತಾನು ಮಹಿಳಾ ಪರ ಧ್ವನಿ ಎಂದು ಬಿಂಬಿಸಿಕೊಳ್ಳುವುದು ಇದರ ಗುರಿಯಾಗಿದೆ.

ಉತ್ತರ ಪ್ರದೇಶದ ರಾಜಕಾರಣದಲ್ಲಿ ಇತರ ಪಕ್ಷಗಳು ನಡೆಸುತ್ತಿರುವ 'ಜಾತಿ ಆಧಾರಿತ ರಾಜಕಾರಣ'ವನ್ನು ಸೋಲಿಸುವುದಕ್ಕಾಗಿ ಮಹಿಳಾ ಶಕ್ತಿಯನ್ನು ಬಳಸಿಕೊಳ್ಳುವ ಕಾರ್ಯತಂತ್ರದ ಬಗ್ಗೆ ಹಲವು ಸುಳಿವುಗಳನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಉತ್ತರ ಪ್ರದೇಶ ಉಸ್ತುವಾರಿ ಪ್ರಿಯಾಂಕಾ ಗಾಂಧಿ ವಾದ್ರಾ ನೀಡಿದ್ದಾರೆ. ಪುರಾತನ ಪಕ್ಷವಾಗಿದ್ದರೂ ಉತ್ತರ ಪ್ರದೇಶದ ರಾಜಕಾರಣದಲ್ಲಿ ಮೂಲೆಗುಂಪಾಗಿರುವ ಪಕ್ಷವನ್ನು ಪುನಶ್ಚೇತನಗೊಳಿಸುವ ಗುರಿಯೂ ಇದರ ಹಿಂದೆ ಇದೆ.

'ರಾಜ್ಯದ ಮಹಿಳೆಯರು ಒಗ್ಗಟ್ಟಾಗಿಲ್ಲ. ಹಾಗಾಗಿ, ಇಲ್ಲಿನ ರಾಜಕಾರಣದಲ್ಲಿ ಅವರು ದೊಡ್ಡ ಶಕ್ತಿಯಾಗಿ ಹೊರಹೊಮ್ಮುವುದು ಸಾಧ್ಯವಾಗಿಲ್ಲ. ಅವರು ಒಗ್ಗಟ್ಟಾಗುವ ಅಗತ್ಯ ಇದೆ. ಅಡುಗೆ ಅನಿಲ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವುದು, ಹಣಕಾಸಿನ ನೆರವು ನೀಡುವುದರಿಂದ ಮಹಿಳೆಯರ ಸ್ಥಿತಿ ಉತ್ತಮಗೊಳ್ಳುವುದು ಸಾಧ್ಯವಿಲ್ಲ' ಎಂದು ಪ್ರಿಯಾಂಕಾ ಅವರು ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳನ್ನು ಪ್ರಿಯಾಂಕಾ ಉಲ್ಲೇಖಿಸಿದರು. ಮಹಿಳೆಯರು ತಾರತಮ್ಯಕ್ಕೆ ಒಳಗಾಗಬಾರದು ಮತ್ತು ಅವರಿಗೆ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಅವಕಾಶ ದೊರಕಬೇಕು ಎಂಬುದು ಶೇ 40ರಷ್ಟು ಕ್ಷೇತ್ರಗಳ ಟಿಕೆಟ್ ಮಹಿಳೆಯರಿಗೆ ಮೀಸಲು ಇರಿಸಲು ಕಾರಣ ಎಂದು ಪ್ರಿಯಾಂಕಾ ಹೇಳಿದರು.



ಪ್ರಿಯಾಂಕಾ ಅವರಿಗೆ ಕಾಂಗ್ರೆಸ್ ಪಕ್ಷದ ಲಖನೌ ಕಚೇರಿಯಲ್ಲಿ ಕಾರ್ಯಕರ್ತರು ಸ್ವಾಗತ ಕೋರಿದರು ಪಿಟಿಐ ಚಿತ್ರ

ಹತ್ರಾಸ್ ಅತ್ಯಾಚಾರ ಮತ್ತು ಹತ್ಯೆ, ಉನ್ನಾವೊ ಸಾಮೂಹಿಕ ಅತ್ಯಾಚಾರ ಪ್ರಕರಣಗಳನ್ನು ಅವರು ಉಲ್ಲೇಖಿಸಿದರು. ರಾಜಕಾರಣದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆ ಇರುವುದೇ ದ್ವೇಷದ ವಾತಾವರಣ ಸೃಷ್ಟಿ ಆಗಲು ಕಾರಣ ಎಂದರು.

'ರಾಜ್ಯದಲ್ಲಿ ಪ್ರವಾಸ ಮಾಡಿ ಸಮಾಜದ ವಿವಿಧ ವರ್ಗಗಳ ಮಹಿಳೆಯರನ್ನು ಭೇಟಿ ಆಗಿದ್ದೇನೆ. ಈ ಎಲ್ಲರೂ ತಾರತಮ್ಯದ ಸಂತ್ರಸ್ತರೇ ಆಗಿದ್ದಾರೆ. ಇವರು ಸಮಾಜ ಮತ್ತು ದೇಶಕ್ಕಾಗಿ ಏನನ್ನಾದರೂ ಮಾಡಬೇಕು ಎಂಬ ಇಚ್ಛೆ ಉಳ್ಳವರು' ಎಂದು ಪ್ರಿಯಾಂಕಾ ಹೇಳಿದರು.

ಈಗಾಗಲೇ ರಾಜಕೀಯದಲ್ಲಿ ಇರುವ ವ್ಯಕ್ತಿಗಳ ಹೆಂಡತಿ–ಹೆಣ್ಣು ಮಕ್ಕಳನ್ನು ಕಣಕ್ಕೆ ಇಳಿಸುವುದರಲ್ಲಿ ಯಾವ ತಪ್ಪೂ ಇಲ್ಲ ಎಂದು ಪ್ರಿಯಾಂಕಾ ಅಭಿಪ್ರಾಯಪಟ್ಟರು.

ಉತ್ತರ ಪ್ರದೇಶದ ಜತೆಗೆ ಚುನಾವಣೆ ನಡೆಯಲಿರುವ ಪಂಜಾಬ್‌ಗೂ ಇದು ಅನ್ವಯವೇ ಎಂಬ ಪ್ರಶ್ನೆಗೆ, ತಾವು ಉತ್ತರ ಪ್ರದೇಶದ ಉಸ್ತುವಾರಿ ಮಾತ್ರ ಎಂದು ಅವರು ಉತ್ತರಿಸಿದರು. ಮಹಿಳೆಯರಿಗೆ ಶೇ 40ರಷ್ಟು ಸೀಟುಗಳನ್ನು ಮೀಸಲಿಡುವ ನಿಲುವನ್ನು ಅಲ್ಲಿಯೂ ಅಳವಡಿಸಿಕೊಂಡರೆ ಉತ್ತಮ ಎಂದರು.

ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಇನ್ನೂ ಯೋಚನೆ ಮಾಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಷ್ಟಕಾಲದಲ್ಲಿ ಮಹಿಳೆಯರ ನೆನಪು: ಮಾಯಾವತಿ ಟೀಕೆ

'ಅಧಿಕಾರದಲ್ಲಿದ್ದಾಗ, ಒಳ್ಳೆಯ ದಿನಗಳನ್ನು ಅನುಭವಿಸುತ್ತಿರುವಾಗ ಕಾಂಗ್ರೆಸ್ ಪಕ್ಷಕ್ಕೆ ದಲಿತರು, ಹಿಂದುಳಿದವರು, ಮಹಿಳೆಯರ ನೆನಪೇ ಇರುವುದಿಲ್ಲ. ಆದರೆ, ಕೆಟ್ಟ ದಿನಗಳು ದೂರ ಸರಿಯುವುದೇ ಇಲ್ಲ ಎಂದಾದಾಗ, ಆ ಪಕ್ಷಕ್ಕೆ ಉತ್ತರ ಪ್ರದೇಶದ ಮಹಿಳೆಯರು ನೆನಪಾಗುತ್ತದೆ. ಪಂಜಾಬ್‌ನಲ್ಲಿ ದಲಿತರ ನೆನಪಾದ ಹಾಗೆ' ಎಂದು ಮಾಯಾವತಿ ಹೇಳಿದ್ದಾರೆ. ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 40ರಷ್ಟು ಸೀಟು ಮೀಸಲು ನಿರ್ಧಾರಕ್ಕೆ ಅವರು ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ.

ಮಹಿಳೆಯರ ಅಭಿವೃದ್ಧಿಗೆ ಬದ್ಧತೆಯ ಪ್ರಯತ್ನ ಮಾಡಲು ಕಾಂಗ್ರೆಸ್‌ಗೆ ಇಚ್ಛಾಶಕ್ತಿಯ ಕೊರತೆ ಇದೆ. ಈಗಿನ ಘೋಷಣೆಯು ಚುನಾವಣಾ ತಂತ್ರ ಮಾತ್ರ ಎಂದು ಮಾಯಾವತಿ ಟೀಕಿಸಿದ್ದಾರೆ.

ಮಹಿಳೆಯರ ಬಗ್ಗೆ ಕಾಂಗ್ರೆಸ್‌ಗೆ ಅಷ್ಟೊಂದು ಕಾಳಜಿ ಇದ್ದಿದ್ದರೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮಸೂದೆ ಅಂಗೀಕಾರ ಆಗುವ ಹಾಗೆ ಅಧಿಕಾರದಲ್ಲಿ ಇದ್ದಾಗ ಏಕೆ ನೋಡಿಕೊಳ್ಳಲಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಏನನ್ನೋ ಹೇಳುವುದು ಮತ್ತೇನನ್ನೋ ಮಾಡುವುದು ಕಾಂಗ್ರೆಸ್‌ನ ಸ್ವಭಾವ ಎಂದೂ ಅವರು ಟೀಕಿಸಿದ್ದಾರೆ.

ಹೊಸ ತಂತ್ರವಲ್ಲ

ಉತ್ತರ ಪ್ರದೇಶದ ಮತದಾರರಲ್ಲಿ ಮಹಿಳೆಯರ ಪ್ರಮಾಣ ಶೇ 45.89ರಷ್ಟಿದೆ. ಮಹಿಳಾ ಮತದಾರರ ಸಂಖ್ಯೆ 6.70 ಕೋಟಿ. 2019ರ ಲೋಕಸಭಾ ಚುನಾವಣೆಯಲ್ಲಿ 3.99 ಕೋಟಿ ಮಹಿಳೆಯರು ಮತ ಚಲಾಯಿಸಿದ್ದರು.

ಮಹಿಳೆಯರನ್ನು ಕೇಂದ್ರ ಸ್ಥಾನಕ್ಕೆ ತರುವುದು ಹೊಸ ಕಾರ್ಯತಂತ್ರವೇನೂ ಅಲ್ಲ. ಚಂದ್ರಬಾಬು ನಾಯ್ಡು (ಟಿಡಿಪಿ), ನಿತೀಶ್ ಕುಮಾರ್ (ಜೆಡಿಯು), ನವೀನ್ ಪಟ್ನಾಯಕ್ (ಬಿಜೆಡಿ), ಮಮತಾ ಬ್ಯಾನರ್ಜಿ (ತೃಣಮೂಲ ಕಾಂಗ್ರೆಸ್) ಮತ್ತು ಅರವಿಂದ ಕೇಜ್ರಿವಾಲ್ (ಎಎಪಿ) ಮಹಿಳಾ ಕೇಂದ್ರಿತ ಯೋಜನೆಗಳನ್ನು ಜಾರಿಗೆ ತಂದು ಅಧಿಕಾರಕ್ಕೆ ಏರಿದ ನಿದರ್ಶನಗಳು ಇವೆ.

ಹೆಣ್ಣು ಮಕ್ಕಳಿಗೆ ಸೈಕಲ್ ನೀಡುವ ಯೋಜನೆಯನ್ನು ಆಂಧ್ರ ಪ್ರದೇಶದಲ್ಲಿ ನಾಯ್ಡು ಮತ್ತು ಬಿಹಾರದಲ್ಲಿ ನಿತೀಶ್ ಅವರು ಜಾರಿಗೆ ತಂದಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಶೇ 33ರಷ್ಟು ಸೀಟುಗಳನ್ನು ಪಟ್ನಾಯಕ್ ಅವರು ಮಹಿಳೆಯರಿಗೆ ನೀಡಿದ್ದರು. ತಮ್ಮ ಪಕ್ಷದಿಂದ ಗೆದ್ದ ಜನಪ್ರತಿನಿಧಿಗಳಲ್ಲಿ ಕನಿಷ್ಠ ಶೇ 30ರಷ್ಟು ಮಹಿಳೆಯರೇ ಇದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸದಾ ಹೇಳಿಕೊಳ್ಳುತ್ತದೆ.

ಕೇಂದ್ರ ನೌಕರರಿಗೆ ಬೋನಸ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನೌಕರರಿಗೆ 2020–21ನೇ ಸಾಲಿಗೆ ಉತ್ಪಾದನೆ ಆಧಾರಿತವಲ್ಲದ ಬೋನಸ್ ಅನ್ನು ಸರ್ಕಾರವು ಮಂಗಳವಾರ ಮಂಜೂರು ಮಾಡಿದೆ.

ಅರೆಸೇನಾ ಪಡೆ ಮತ್ತು ಸಶಸ್ತ್ರ ಪಡೆಯ ಸಿಬ್ಬಂದಿಯೂ ಬೋನಸ್‌ಗೆ ಅರ್ಹರು ಎಂದು ಕೇಂದ್ರ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆಯ ಹೇಳಿಕೆಯು ತಿಳಿಸಿದೆ.

2021ರ ಮಾರ್ಚ್ 31ರವರೆಗೆ ಕರ್ತವ್ಯದಲ್ಲಿದ್ದ ಮತ್ತು ಆ ವರೆಗೆ ಕನಿಷ್ಠ ಆರು ತಿಂಗಳು ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಯು ಬೋನಸ್‌ಗೆ ಅರ್ಹರಾಗುತ್ತಾರೆ.

ಕೇಂದ್ರ ಸರ್ಕಾರದ ಗ್ರೂಪ್ ಸಿ ಮತ್ತು ಗ್ರೂಪ್ ಬಿಯಲ್ಲಿರುವ ಗೆಜೆಟೆಡ್ ಅಲ್ಲದ ಸಿಬ್ಬಂದಿಗೆ ಈ ಬೋನಸ್ ನೀಡಲಾಗುತ್ತದೆ. ಆದರೆ, ಅವರು ಉತ್ಪಾದನೆ ಆಧಾರಿತ ಬೋನಸ್ ಯೋಜನೆಯ ವ್ಯಾಪ್ತಿಯಲ್ಲಿ ಇರಬಾರದು.

ತಿಂಗಳಿಗೆ ಲೆಕ್ಕ ಹಾಕಲಾಗುವ ಬೋನಸ್‌ನ ಗರಿಷ್ಠ ಮೊತ್ತವನ್ನು ₹7,000 ಎಂದು ನಿಗದಿ ಮಾಡಲಾಗಿದೆ.

2021ರ ಮಾರ್ಚ್ 31ರ ಒಳಗೆ ಕೆಲಸಕ್ಕೆ ರಾಜೀನಾಮೆ ಕೊಟ್ಟವರು, ನಿವೃತ್ತರಾದವರು ಅಥವಾ ಮೃತಪಟ್ಟವರ ಪೈಕಿ ರಾಜೀನಾಮೆ ಕೊಟ್ಟವರಿಗೆ ಬೋನಸ್‌ಗೆ ಅರ್ಹತೆ ಇಲ್ಲ. ನಿವೃತ್ತರಾದವರು, ವೈದ್ಯಕೀಯ ಕಾರಣದಿಂದ ನಿವೃತ್ತಿ ತೆಗೆದುಕೊಂಡವರಿಗೆ ಮಾತ್ರ ಬೋನಸ್ ದೊರೆಯುತ್ತದೆ. ಆದರೆ, ಅವರು ಆ ಆರ್ಥಿಕ ವರ್ಷದಲ್ಲಿ ಕನಿಷ್ಠ ಆರು ತಿಂಗಳು ಕರ್ತವ್ಯ ನಿರ್ವಹಿಸಿರಬೇಕು.

ಲಖಿಂಪುರ ಖೇರಿ ಪ್ರಕರಣ: ಇಂದು ವಿಚಾರಣೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಅಕ್ಟೋಬರ್ 3ರಂದು ನಡೆದಿದ್ದ ಹಿಂಸಾಚಾರ ಘಟನೆಗೆ ಸಂಬಂಧಿಸಿದ ಪ್ರಕರಣವನ್ನು ಸುಪ್ರೀಂಕೋರ್ಟ್ ಬುಧವಾರ ವಿಚಾರಣೆಗೆ ಎತ್ತಿಕೊಳ್ಳಲಿದೆ. ಈ ಘಟನೆಯಲ್ಲಿ ನಾಲ್ವರು ಕೃಷಿಕರು ಸೇರಿದಂತೆ ಎಂಟು ಮಂದಿ ಮೃತಪಟ್ಟಿದ್ದರು.



ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಹಿಮಾ ಕೊಹ್ಲಿ ಅವರಿದ್ದ ಪೀಠವು, ಎಂಟು ಜನರ 'ಕ್ರೂರ' ಕೊಲೆ ಕೃತ್ಯದ ಕುರಿತಂತೆ ಉತ್ತರಪ್ರದೇಶ ಸರ್ಕಾರ ಯಾವುದೇ ಕ್ರಮಜರುಗಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿತ್ತು. ಇದರ ವಿಚಾರಣೆ ನಡೆಸುವುದಾಗಿ ಅ.8ರಂದು ಹೇಳಿತ್ತು. ಹಿಂಸಾಚಾರ ಘಟನೆಗೆ ಸಂಬಂಧಿಸಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಸೇರಿದಂತೆ ಇದುವರೆಗೂ ಎಂಟು ಜನರನ್ನು ಬಂಧಿಸಲಾಗಿದೆ. ಘಟನೆ ಕುರಿತು ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಇಬ್ಬರು ವಕೀಲರು ಪತ್ರ ಬರೆದಿದ್ದರು.

ಗಡಿಯಲ್ಲಿ ಸುರಕ್ಷತೆ ಮತ್ತು ಕಾರ್ಯಾಚರಣೆ ಪರಿಸ್ಥಿತಿ ಅವಲೋಕನ

ಎಲ್‌ಒಸಿಗೆ ಸೇನಾ ಮುಖ್ಯಸ್ಥ ನರವಣೆ ಭೇಟಿ

ಜಮ್ಮು (ಪಿಟಿಐ): ಸೇನಾ ಮುಖ್ಯಸ್ಥ ಜನರಲ್ ಎಂ. ಎಂ. ನರವಣೆ ಅವರು ಜಮ್ಮುವಿನ ಎಲ್‌ಒಸಿಯ ಮುಂಚೂಣಿ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿದರು. ಈ ಪ್ರದೇಶದ ವಾಸ್ತವ ಸ್ಥಿತಿ ಮತ್ತು ಒಳನುಸುಳುವಿಕೆ ತಡೆ ಕಾರ್ಯಾಚರಣೆಗಳ ಬಗ್ಗೆ ಮಾಹಿತಿ ಪಡೆದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಣಿವೆಯಲ್ಲಿ ಭಯೋತ್ಪಾದಕರು ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದ್ದಾರೆ. ಅವಳಿ ಗಡಿ ಜಿಲ್ಲೆಗಳಾದ ಪೂಂಛ್ ಮತ್ತು ರಜೌರಿಯ ಅರಣ್ಯ ವಲಯದಲ್ಲಿ ಎನ್‌ಕೌಂಟರ್ ನಡೆಯುತ್ತಿದೆ. ಈ ಸಮಯದಲ್ಲಿ ನರವಣೆ ಅವರು ಎರಡು ದಿನಗಳ ಭೇಟಿಗಾಗಿ ಸೋಮವಾರ ಜಮ್ಮುವಿಗೆ ಬಂದಿದ್ದಾರೆ.

'ಜನರಲ್ ನರವಣೆ ಅವರು ವೈಟ್ ನೈಟ್ ಕೋರ್‌ನ ಮುಂಚೂಣಿ ಪ್ರದೇಶಗಳಿಗೆ ಭೇಟಿ ನೀಡಿ, ಗಡಿ ನಿಯಂತ್ರಣ ರೇಖೆಯಲ್ಲಿನ ಪರಿಸ್ಥಿತಿಯ ಪ್ರತ್ಯಕ್ಷ ಮೌಲ್ಯಮಾಪನ ಮಾಡಿದರು' ಎಂದು ಭಾರತೀಯ ಸೇನೆಯ ಹೆಚ್ಚುವರಿ ಸಾರ್ವಜನಿಕ ನಿರ್ದೇಶನಾಲಯ (ಎಡಿಜಿಪಿಐ) ಟ್ವೀಟ್ ಮಾಡಿದೆ.

ಈ ತಿಂಗಳು ಕಾಶ್ಮೀರ ಕಣಿವೆಯ ವಿವಿಧ ಭಾಗಗಳಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 11 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಮೃತರಲ್ಲಿ ಕಾಶ್ಮೀರದ ಹೊರಗಿನ ಐವರು ಕಾರ್ಮಿಕರು, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಇಬ್ಬರು ಶಿಕ್ಷಕರು ಮತ್ತು ಒಬ್ಬ ಪ್ರಸಿದ್ಧ ಫಾರ್ಮಾಸಿಸ್ಟ್ ಸೇರಿದ್ದಾರೆ. ಕಣಿವೆಯ ಪ್ರತಿ ಹನಿ ರಕ್ತಕ್ಕೂ ಸೇಡು ತೀರಿಸಿಕೊಳ್ಳುವುದಾಗಿ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಭಾನುವಾರ ಪ್ರತಿಜ್ಞೆ ಮಾಡಿದ್ದಾರೆ.



ಸೇನಾ ಮುಖ್ಯಸ್ಥ ಎಂ.ಎಂ. ನರವಣೆ ಅವರು ಜಮ್ಮುವಿನ ಮುಂಚೂಣಿ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ನರವಣೆ ಅವರು ಗಡಿ ಜಿಲ್ಲೆಗಳಾದ ರಜೌರಿ ಮತ್ತು ಪೂಂಛ್‌ಗೆ ಭೇಟಿ ನೀಡಿದರು. ಮೆಂಧರ್, ಸುರಂಕೋಟೆ ಮತ್ತು ಥಾನಮಂಡಿ ಅರಣ್ಯ ಪ್ರದೇಶದಲ್ಲಿ ಅಡಗಿರುವ ಭಯೋತ್ಪಾದಕರನ್ನು ಪತ್ತೆ ಮಾಡುವ ಬೃಹತ್ ಕಾರ್ಯಾಚರಣೆ ಅಕ್ಟೋಬರ್ 11ರಿಂದ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ 11ರಂದು ಸುರಂಕೋಟೆ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಐವರು ಸೇನಾ ಸಿಬ್ಬಂದಿ ಸಾವನ್ನಪ್ಪಿದ್ದರೆ, ಗುರುವಾರ ಮೆಂಧರ್‌ನಲ್ಲಿ ನಡೆದ ಗುಂಡಿನ ಕಾಳಗದಲ್ಲಿ ಮತ್ತಿಬ್ಬರು ಸೈನಿಕರು ಪ್ರಾಣ ಕಳೆದುಕೊಂಡಿದ್ದರು.

ಭಯೋತ್ಪಾದಕರನ್ನು ಹತ್ತಿಕ್ಕುವ ಕಾರ್ಯಾಚರಣೆ ಮಂಗಳವಾರ 9ನೇ ದಿನಕ್ಕೆ ಕಾಲಿಟ್ಟಿದೆ. ಭಯೋತ್ಪಾದಕರಿಗೆ ನೆರವು ನೀಡಿದ್ದಕ್ಕೆ ಸಂಬಂಧಿಸಿದಂತೆ ಇದುವರೆಗೆ ತಾಯಿ-ಮಗ ಸೇರಿದಂತೆ ಎಂಟು ಜನರನ್ನು ವಿಚಾರಣೆಗಾಗಿ ಬಂಧಿಸಲಾಗಿದೆ.

ನಿಲ್ಲದ ಕಾರ್ಮಿಕರ ವಲಸೆ

ಕಾಶ್ಮೀರದಿಂದ ವಾಪಸಾಗುವ ಉದ್ದೇಶದಿಂದ ಅನ್ಯ ರಾಜ್ಯಗಳಿಗೆ ಸೇರಿದ ಸಾವಿರಾರು ಕಾರ್ಮಿಕರು ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣಗಳ ಟಿಕೆಟ್ ಕೌಂಟರ್‌ಗಳ ಹೊರಗೆ ಮಂಗಳವಾರ ಸರತಿ ಸಾಲಿನಲ್ಲಿ ನಿಂತಿದ್ದರು. ಅಲ್ಪಸಂಖ್ಯಾತರು ಮತ್ತು ಸ್ಥಳೀಯರಲ್ಲದವರನ್ನು ಭಯೋತ್ಪಾದಕರು ಗುರಿಯಾಗಿಸಿ ಕೊಲ್ಲುತ್ತಿರುವ ಬೆಳವಣಿಗೆ ಅವರಲ್ಲಿ ಆತಂಕ ಮೂಡಿಸಿದೆ.

ಜಮ್ಮು ಮತ್ತು ಉಧಂಪುರ ರೈಲು ನಿಲ್ದಾಣಗಳು ಮತ್ತು ಬಸ್ ನಿಲ್ದಾಣಗಳಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಭದ್ರತೆ ಹೆಚ್ಚಿಸಲಾಗಿದೆ. ನಿಲ್ದಾಣಕ್ಕೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ. ಕೆಲವು ಪ್ರಯಾಣಿಕರು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಹೋಗಲು ಹವಣಿಸುತ್ತಿದ್ದಾರೆ. ಇನ್ನೂ ಸಾಕಷ್ಟು ಸಂಖ್ಯೆಯ ಜನರು ಇದೇ ಹಾದಿಯಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು ರೈಲು ನಿಲ್ದಾಣದ ಹೊರಗೆ, ಪುರುಷರು, ಮಹಿಳೆಯರು ಮತ್ತು ಮಕ್ಕಳು ನೀರು ಮೊದಲಾದ ಮೂಲ ಸೌಕರ್ಯಗಳಿಲ್ಲದೆ ಉದ್ದದ ಸರತಿ ಸಾಲಿನಲ್ಲಿ ರಸ್ತೆಬದಿಯಲ್ಲಿ ಕಾಯುತ್ತಿರುವುದು ಕಂಡುಬಂದಿತು.

ಅಂದಾಜಿನ ಪ್ರಕಾರ, ಪ್ರತಿ ವರ್ಷ ಮಾರ್ಚ್ ಆರಂಭದಲ್ಲಿ ಉತ್ತರಪ್ರದೇಶ, ಬಿಹಾರ, ಛತ್ತೀಸಗಡ, ಜಾರ್ಖಂಡ್ ಮತ್ತು ಉತ್ತರಾಖಂಡದಿಂದ 3ರಿಂದ 4 ಲಕ್ಷ ವಲಸೆ ಕಾರ್ಮಿಕರು ಕಣಿವೆಗೆ ಬರುತ್ತಾರೆ. ನವೆಂಬರ್‌ನಲ್ಲಿ ಚಳಿಗಾಲ ಆರಂಭವಾಗುವ ಮೊದಲು ವಾಪಸಾಗುತ್ತಾರೆ. ಆದರೆ ಗುರಿಯಾಗಿಸಿ ನಡೆಯುತ್ತಿರುವ ದಾಳಿಗಳು, ಅವಧಿಗೆ ಮುನ್ನವೇ ಅವರು ಕಣಿವೆ ತೊರೆಯುವಂತೆ ಮಾಡಿವೆ.

ಮರಳಿ ಬಾರೆವು: ಕಣಿವೆ ತೊರೆಯುತ್ತಿರುವ ಬಹುತೇಕ ಕಾರ್ಮಿಕರು ತಾವು ವಾಪಸ್ ಬರುವುದಿಲ್ಲ ಎಂದು ಹೇಳಿದ್ದಾರೆ. 'ದುಡಿಮೆಗಾಗಿ ನಾನು ಮತ್ತೆ ಕಣಿವೆಗೆ ಬರುವುದಿಲ್ಲ' ಎಂದು ಛತ್ತೀಸಗಡದ ಕಾರ್ಮಿಕ ಮಿಂಟು ಸಿಂಗ್ ಹೇಳಿದರು.

ದಕ್ಷಿಣ ಕಾಶ್ಮೀರದ ಪುಲ್ವಾಮಾದಲ್ಲಿ ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುತ್ತಿದ್ದ ಬಿಹಾರದ ಅಜಯ್ ಕುಮಾರ್, ತನ್ನ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಜಮ್ಮು ರೈಲು ನಿಲ್ದಾಣಕ್ಕೆ ಬಂದಿದ್ದರು. ತನಗೆ ಕೆಲಸ ನೀಡಿದ ವ್ಯಕ್ತಿ ಬಾಕಿ ವೇತನ ₹ 27,000 ಕೊಡಲು ನಿರಾಕರಿಸಿದ ಎಂದು ಅವರು ಕಣ್ಣೀರಾದರು. ಬಾಕಿ ವೇತನ ನೀಡಿಲ್ಲ ಎಂಬುದು ಸಾಕಷ್ಟು ಕಾರ್ಮಿಕರ ಅಳಲಾಗಿದೆ. 'ಇಲ್ಲಿಂದ ಹೋಗುವುದು ಅನಿವಾರ್ಯವಾಗಿದೆ. ಇದು ನರಕವಾಗಿದೆ. ಕುಟುಂಬ ನಿರ್ವಹಣೆಗೆ ಇಲ್ಲಿಗೆ ಬಂದಿದ್ದೇವೆಯೇ ವಿನಾ ನಮ್ಮ ಮಕ್ಕಳು ಬೀದಿ ಹೆಣವಾಗುವುದನ್ನು ನೋಡಲಿಕ್ಕಲ್ಲ' ಎಂದು ಚಿಂಟು ಸಿಂಗ್ ಎಂಬುವರು ಹೇಳಿದ್ದಾರೆ.


ಸಂಸದ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಬಾಬುಲ್ ಸುಪ್ರಿಯೊ



ಬಾಬುಲ್ ಸುಪ್ರಿಯೊ

ನವದೆಹಲಿ (ಪಿಟಿಐ): ತಿಂಗಳ ಹಿಂದೆಯಷ್ಟೇ ಬಿಜೆಪಿ ತೊರೆದು ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷ ಸೇರಿದ್ದ ಕೇಂದ್ರದ ಮಾಜಿ ಸಚಿವ ಬಾಬುಲ್ ಸುಪ್ರಿಯೊ ಮಂಗಳವಾರ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ ರಾಜೀನಾಮೆ ಪತ್ರ ಸಲ್ಲಿಸಿದರು.

ಶೆರ್ಲಿನ್ ಚೋಪ್ರಾ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ ಶಿಲ್ಪಾ ಶೆಟ್ಟಿ ದಂಪತಿ



ಶಿಲ್ಪಾ ಶೆಟ್ಟಿ



ರಾಜ್ ಕುಂದ್ರಾ

ಮುಂಬೈ (ಪಿಟಿಐ): ನಟಿ ಶಿಲ್ಪಾ ಶೆಟ್ಟಿ ಮತ್ತು ಅವರ ಪತಿ ರಾಜ್ ಕುಂದ್ರಾ ಅವರು ನಟಿ ಶೆರ್ಲಿನ್ ಚೋಪ್ರಾ ಅವರಿಗೆ ₹ 50 ಕೋಟಿ ಮಾನನಷ್ಟ ಮೊಕದ್ದಮೆ ನೋಟಿಸ್ ಕಳುಹಿಸಿದ್ದಾರೆ.

ಸುಳ್ಳು ಮತ್ತು ಆಧಾರ ರಹಿತ ಆರೋಪ ಮಾಡುವ ಮೂಲಕ ತಮ್ಮ ಪ್ರತಿಷ್ಠೆಗೆ ಚ್ಯುತಿ ಉಂಟು ಮಾಡಿರುವ ಶೆರ್ಲಿನ್ ಅವರು ಕ್ಷಮೆ ಕೇಳಬೇಕು ಎಂದು ಶಿಲ್ಪಾ ಶೆಟ್ಟಿ ದಂಪತಿ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

ಏಳು ದಿನಗಳೊಳಗೆ ಪ್ರಮುಖ ಪತ್ರಿಕೆ ಮತ್ತು ಡಿಜಿಟಲ್ ಮಾಧ್ಯಮಗಳ ಮೂಲಕ ಶೆರ್ಲಿನ್ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು. ಶೆರ್ಲಿನ್ ಹಣ ವಸೂಲಿ ಮಾಡುವ ಉದ್ದೇಶದಿಂದ ಆರೋಪ ಮಾಡಿದ್ದು, ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಕ್ಷಮೆ ಕೇಳದಿದ್ದರೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣ ಎದುರಿಸಬೇಕಾಗುತ್ತದೆ ಎಂದು ಶಿಲ್ಪಾ ಶೆಟ್ಟಿ ದಂಪತಿ ಎಚ್ಚರಿಕೆ ನೀಡಿದ್ದಾರೆ.

ಅರುಣಾಚಲ: ಗಡಿಯಲ್ಲಿ ಗಡಿಬಿಡಿ

ಒಂದನೇ ಪುಟದಿಂದ

1,300 ಕಿ.ಮೀ. ಎಲ್‌ಎಸಿಯಲ್ಲಿ ಭಾರತದ ಸೇನೆಯ ಕಾರ್ಯಾಚರಣೆ ಸನ್ನದ್ಧತೆಯ ಮೇಲುಸ್ತುವಾರಿಯು ಪಾಂಡೆ ಅವರದ್ದಾಗಿದೆ. ಸೇನೆಯ ಪೂರ್ವ ವಿಭಾಗದ ಭಾಗವಾಗಿರುವ ಮೌಂಟನ್ ಸ್ಟ್ರೈಕ್ ಕೋರ್ ಪೂರ್ಣವಾಗಿ ಕಾರ್ಯಾಚರಣೆಗೆ ಸಜ್ಜಾಗಿದೆ. ಅದರ ಸನ್ನದ್ಧತೆಯನ್ನು ದೃಢಪಡಿಸಿಕೊಳ್ಳಲಾಗಿದೆ. ಇತರ ವಿಭಾಗಗಳ ಜತೆಗೆ ಅದರ ಸಮನ್ವಯವನ್ನೂ ಪರಿಶೀಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಮಗ್ರ ಸಮರ ಗುಂಪು: ಸಮಗ್ರ ಸಮರ ಗುಂಪು (ಐಬಿಜಿ) ಎಂಬ ಹೊಸ ಯುದ್ಧ ಸನ್ನದ್ಧ ತಂಡ ರಚನೆಗೆ ತಾತ್ವಿಕ ಒಪ್ಪಿಗೆ ಸಿಕ್ಕಿದೆ. ಅತ್ಯಂತ ತ್ವರಿತವಾಗಿ, ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ಸಜ್ಜಾಗುವ ರೀತಿಯಲ್ಲಿ ಈ ಗುಂಪನ್ನು ಯೋಜಿಸಲಾಗಿದೆ ಎಂದು ಪಾಂಡೆ ತಿಳಿಸಿದರು.

ಐಬಿಜಿಯಲ್ಲಿ ಭೂಸೇನೆ, ಫಿರಂಗಿ ದಳ, ವಾಯುಪಡೆ, ಟ್ಯಾಂಕುಗಳೆಲ್ಲವೂ ಸೇರಿರುತ್ತವೆ. ಇದು ಚೀನಾ ಮತ್ತು ಪಾಕಿಸ್ತಾನ ಗಡಿಯಲ್ಲಿ ಭಾರತದ ಸೇನೆಯ ಯುದ್ಧ ಸನ್ನದ್ಧತೆಗೆ ವೇಗ ತುಂಬಲಿದೆ ಎಂದು ಅವರು ಹೇಳಿದ್ದಾರೆ.

ಜಾಗೃತ ಚೀನಾ: ಚೀನಾದ ರಕ್ಷಣಾ ಪಡೆಯ ಎಲ್ಲ ವಿಭಾಗಗಳೂ ಜಂಟಿ ಕಾರ್ಯಾಚರಣೆ ನಡೆಸುತ್ತಿವೆ. ಚೀನಾ ಸೇನೆಯು ಸಮಗ್ರವಾದ ಧೋರಣೆಯನ್ನು ಅನುಸರಿಸುತ್ತಿದೆ. ಸಮರಾಭ್ಯಾಸದ ತೀವ್ರತೆ ಮತ್ತು ಅವಧಿಯಲ್ಲಿಯೂ ಹೆಚ್ಚಳವಾಗಿದೆ ಎಂದು ಪಾಂಡೆ ತಿಳಿಸಿದ್ದಾರೆ.

ಎಲ್‌ಎಸಿಯ ಚೀನಾ ಭಾಗದ ನಿರ್ದಿಷ್ಟ ಪ್ರದೇಶಗಳಲ್ಲಿ ಹೊಸ ಗ್ರಾಮಗಳು ತಲೆ ಎತ್ತಿವೆ. ಇದು ಕೂಡ ಸೇನಾ ಕಾರ್ಯತಂತ್ರವೇ ಆಗಿದೆ ಎಂಬುದನ್ನು ಭಾರತ ಗಮನಿಸಿದೆ. ಸೇನಾ ಕಾರ್ಯಾಚರಣೆಯ ಸಂದರ್ಭದಲ್ಲಿ ಸೈನಿಕರು ಈ ಜನವಸತಿ ಪ್ರದೇಶಗಳನ್ನು ಬಳಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.



ಐಪ್ಯಾಡ್ 9

ಸುಲಲಿತ ಬ್ರೌಸಿಂಗ್ ಟ್ರೂಟೋನ್ ವೈಶಿಷ್ಟ್ಯ



ಆ್ಯಪಲ್ ಐಪ್ಯಾಡ್ 9 (ಸ್ಮಾರ್ಟ್ ಕೀಬೋರ್ಡ್ ಮತ್ತು ಪೆನ್ಸಿಲ್ ಜೊತೆಗೆ)

ಕೇವಲ 7.5 ಮಿಮೀ ದಪ್ಪ ಇರುವ ಐಪ್ಯಾಡ್ 9, ಸುಮಾರು ಅರ್ಧ ಕೆಜಿ ತೂಕ ಹೊಂದಿದೆ. ಆದರೆ, ಅದರಲ್ಲಿ ಆ್ಯಪಲ್ ಎ13 ಬಯೋನಿಕ್ ಚಿಪ್‌ಸೆಟ್ ಜೊತೆಗೆ 3ಜಿಬಿಯಷ್ಟು **RAM** ಇರುವುದರಿಂದ, ಒಳಗಿನಿಂದಲೂ ಶಕ್ತಿಶಾಲಿಯಾಗಿದೆ. ಮಲ್ಟಿ ಟಾಸ್ಕಿಂಗ್, ಮಕ್ಕಳಿಗೆ ಆನ್‌ಲೈನ್ ತರಗತಿ, ದೊಡ್ಡವರಿಗೆ ಆನ್‌ಲೈನ್ ಮೀಟಿಂಗ್‌ಗೆ ಮತ್ತು ದೊಡ್ಡ ಪರದೆಯಲ್ಲಿ ವಿಡಿಯೊ ವೀಕ್ಷಿಸಲು, ಗೇಮ್ ಆಡುವುದಕ್ಕೆ ಈ ಐಪ್ಯಾಡ್ ಅನುಕೂಲಕರ. ಒಯ್ಯುವುದು ಸುಲಭ.

ಅವಿನಾಶ್ ಬಿ.

ಆಂಡ್ರಾಯ್ಡ್ ಟ್ಯಾಬ್ಲೆಟ್‌ನಂತೆಯೇ ಆ್ಯಪಲ್‌ನ ಐಪ್ಯಾಡ್‌ಗಳು ಸ್ಮಾರ್ಟ್‌ಫೋನ್‌ಗಿಂತ ದೊಡ್ಡದಾದ, ಆದರೆ ಲ್ಯಾಪ್‌ಟಾಪ್‌ಗಿಂತ ಚಿಕ್ಕದಾದ, ಬೇಕಾದಲ್ಲಿಗೆ ಒಯ್ಯಲು ಸುಲಭವಾಗುವ ಗ್ಯಾಜೆಟ್‌ಗಳು. ಕೋವಿಡ್-19 ಕಾರಣದಿಂದಾಗಿ ಮನೆಯಿಂದಲೇ ಕೆಲಸ ಅಥವಾ ತರಗತಿ ವ್ಯವಸ್ಥೆಯು ಜಾರಿಗೆ ಬಂದ ಬಳಿಕ, ಚಿಕ್ಕ ಸ್ಕ್ರೀನ್‌ನಲ್ಲಿ ಕಣ್ಣುಗಳಿಗೆ ತ್ರಾಸ ಜಾಸ್ತಿ ಎಂಬ ಕಾರಣಕ್ಕೆ, ದೊಡ್ಡ ಸ್ಕ್ರೀನ್ ಇರುವ ಟ್ಯಾಬ್ಲೆಟ್ ಅಥವಾ ಐಪ್ಯಾಡ್ ಬಳಸುವುದು ಜಾಸ್ತಿಯಾಗಿದೆ. ಆ್ಯಪಲ್ ಕಂಪನಿಯು ಇತ್ತೀಚೆಗೆ ಬಿಡುಗಡೆ ಮಾಡಿರುವ ಐಪ್ಯಾಡ್-9 ಅನ್ನು ಒಂದು ವಾರ ಬಳಸಿ ನೋಡಿದಾಗ ಗಮನಿಸಿದ ಪ್ರಮುಖ ಅಂಶಗಳೆಂದರೆ ಅದರ ಕಾರ್ಯಾಚರಣೆಯ ವೇಗ ಮತ್ತು ನಯವಾದ ಬ್ರೌಸಿಂಗ್.

ತೆಳ್ಳಗಿರುವ ಈ ಐಪ್ಯಾಡ್‌ನ ಐಪಿಎಸ್ ರೆಟಿನಾ ಸ್ಕ್ರೀನ್ 10.2 ಇಂಚು ಇದ್ದು, ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಬೆಝೆಲ್ (ಸ್ಕ್ರೀನ್‌ನಲ್ಲಿ ಏನೂ ಗೋಚರಿಸದ ಖಾಲಿ ಭಾಗ) ಇದೆ. 7.5 ಮಿಮೀ ದಪ್ಪ, ಸುಮಾರು ಅರ್ಧ ಕಿಲೋಗ್ರಾಂ ತೂಕವಿದೆ. ಆ್ಯಪಲ್ ಎ13 ಬಯೋನಿಕ್ ಚಿಪ್‌ಸೆಟ್ ಜೊತೆಗೆ 3ಜಿಬಿ RAM ಇರುವುದರಿಂದ, ಒಳಗಿನಿಂದಲೂ ಶಕ್ತಿಶಾಲಿಯಾಗಿದೆ. ಹಿಂದಿನ ಐಪ್ಯಾಡ್‌ಗಳಿಗಿಂತ ಹೆಚ್ಚು ವೇಗವಾಗಿ ಬ್ರೌಸಿಂಗ್ ಅನುಭವಕ್ಕೆ ಬಂದಿದೆ. ಸ್ಕ್ರೀನ್ ಅನ್‌ಲಾಕ್ ಮಾಡುವುದಕ್ಕೆ ಹೋಂ ಬಟನ್‌ನಲ್ಲೇ ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಅಡಕವಾಗಿದೆ.

ಫೇಸ್‌ಟೈಮ್ ಅಥವಾ ಯಾವುದೇ ವಿಡಿಯೊ ಕರೆ ಅಥವಾ ಸಮೂಹ ವಿಡಿಯೊ ಕರೆಗಳ ಸಂದರ್ಭದಲ್ಲಿ, ಮಾತನಾಡುವವರು ಮಧ್ಯಭಾಗದಲ್ಲಿ ಎದ್ದುಕಾಣಿಸುವಂತೆ ತೋರಿಸುವ 'ಸೆಂಟರ್ ಸ್ಟೇಜ್' ವ್ಯವಸ್ಥೆ ಹೊಸದಾಗಿ ಪರಿಚಯಿಸಲಾಗಿದೆ. 122 ಡಿಗ್ರಿ ವ್ಯಾಪ್ತಿಯಲ್ಲಿ ಅದು ಹೆಚ್‌ಡಿ ಗುಣಮಟ್ಟದ ವಿಡಿಯೊ ಸೆರೆಹಿಡಿಯುತ್ತದೆ. ರೆಟಿನಾ ಡಿಸ್‌ಪ್ಲೇ ಮತ್ತು ಮೊದಲ ಬಾರಿಗೆ ಟ್ರೂಟೋನ್ ವ್ಯವಸ್ಥೆ ಪರಿಚಯಿಸಿರುವುದರಿಂದ ಚಲನಚಿತ್ರಗಳು, ವಿಡಿಯೊ ವೀಕ್ಷಣೆಯು ಅತ್ಯಂತ ಆನಂದದಾಯಕವಾಗುತ್ತದೆ. ಹಿಂಭಾಗದಲ್ಲಿ 8 ಮೆಗಾಪಿಕ್ಸೆಲ್ ಸೆನ್ಸರ್‌ನ ಕ್ಯಾಮೆರಾ ಇದೆ. ಇದು ವಿಡಿಯೊ ಕರೆಗಳಿಗಾಗಿಯೇ ಇರುವುದರಿಂದ, ಅತ್ಯುತ್ತಮ ಗುಣಮಟ್ಟದ ಚಿತ್ರಗಳನ್ನು ನಿರೀಕ್ಷಿಸಲಾಗದು. 'ಲೈವ್ ಟೆಕ್ಸ್ಟ್' ಬೆಂಬಲವಿದ್ದು, ಚಿತ್ರದಲ್ಲಿರುವ ಅಕ್ಷರಗಳನ್ನು ನಕಲಿಸಿ, ಅಂತರಜಾಲದಲ್ಲಿ ಅಲ್ಲಿಂದಲೇ ಹುಡುಕಬಹುದಾಗಿದೆ.

ಐಪ್ಯಾಡ್‌ನಲ್ಲಿ ಇದೇ ಮೊದಲ ಬಾರಿಗೆ ಅಳವಡಿಸಿರುವ ಈ ಟ್ರೂಟೋನ್ ವೈಶಿಷ್ಟ್ಯದ ಅನುಸಾರ, ಸ್ಕ್ರೀನ್‌ನ ಚಿತ್ರಗಳು ಸುತ್ತಮುತ್ತಲಿನ ಬೆಳಕಿಗೆ ಅನುಗುಣವಾಗಿ ತಾನಾಗಿ ನೈಜಬಣ್ಣ ಹಾಗೂ ಬೆಳಕಿನ ಪ್ರಖರತೆಯನ್ನು ಹೊಂದಿಸಿಕೊಳ್ಳುತ್ತದೆ. ಹಿಂದಿನ ಆವೃತ್ತಿಗೆ ಹೋಲಿಸಿದರೆ, ಮೂಲಭೂತ (ಬೇಸಿಕ್) ಐಪ್ಯಾಡ್‌ನ ಸ್ಟೋರೇಜ್ ಕೂಡ 32ರಿಂದ 64 ಜಿಬಿಗೆ ಏರಿಸಲಾಗಿದೆ. 256 ಜಿಬಿ ಮಾದರಿಯೂ ಲಭ್ಯ. ವೈಫೈಯಲ್ಲಿ ಮಾತ್ರವೇ ಕೆಲಸ ಮಾಡಬಲ್ಲ ಮತ್ತು 4ಜಿ (ಎಲ್‌ಟಿಇ) ನ್ಯಾನೋ ಸಿಮ್ ಕಾರ್ಡ್ ಅಳವಡಿಸಬಹುದಾದ ಮಾದರಿಗಳೂ ಇವೆ.

ಪೆನ್ಸಿಲ್ ಮತ್ತು ಸ್ಮಾರ್ಟ್ ಕೀಬೋರ್ಡ್ ಬೆಂಬಲ ಆ್ಯಪಲ್ ಪೆನ್ಸಿಲ್ ಹಾಗೂ ಸ್ಮಾರ್ಟ್ ಕೀಬೋರ್ಡ್ ಅನ್ನು ಐಪ್ಯಾಡ್ 9 ಸರಣಿ ಬೆಂಬಲಿಸುವುದರಿಂದ ಚಿತ್ರ ರಚಿಸುವುದು, ಟಿಪ್ಪಣಿ ಮಾಡಿಕೊಳ್ಳುವುದು ಸುಲಭವಾಗಿದೆ. ವಿನ್ಯಾಸಕಾರರಿಗೆ, ಕಲಾವಿದರಿಗೆ ಇದೊಂದು ಅತ್ಯುಪಯುಕ್ತ ಪರಿಕರ. ಸ್ಮಾರ್ಟ್ ಕೀಬೋರ್ಡ್ ಬೆಂಬಲವಿದೆಯಾದರೂ, ಅದರ ಕೀಲಿಗಳು ಹೆಚ್ಚು ಟೈಪ್ ಮಾಡುವವರಿಗೆ ಸ್ವಲ್ಪ ಗಟ್ಟಿ ಎನಿಸಬಹುದು. ಸ್ಮಾರ್ಟ್ ಕೀಬೋರ್ಡ್ (ಪ್ರತ್ಯೇಕವಾಗಿ ಖರೀದಿಸಬೇಕು) ಅನ್ನು ಆಯಸ್ಕಾಂತೀಯವಾಗಿ ಐಪ್ಯಾಡ್‌ಗೆ ಜೋಡಿಸಲು ವ್ಯವಸ್ಥೆಯಿದೆ. ಅದು ಸ್ಕ್ರೀನ್ ರಕ್ಷಕವಾಗಿಯೂ, ಐಪ್ಯಾಡ್ ಸ್ಟ್ಯಾಂಡ್ ಆಗಿಯೂ ಕೆಲಸ ಮಾಡುತ್ತದೆ.

ಏಕಕಾಲಕ್ಕೆ ಹಲವು ಆ್ಯಪ್‌ಗಳನ್ನು ತೆರೆದಿಟ್ಟು ಕೆಲಸ ಮಾಡುವಾಗ, ತೂಕದ ಗೇಮ್ ಆಡುವಾಗ ಯಾವುದೇ ರೀತಿಯಲ್ಲೂ ಸ್ಥಾಗಿತ್ಯದ ಅಥವಾ ಹ್ಯಾಂಗಿಂಗ್ ಅನುಭವವಾಗಿಲ್ಲ.

ಒಟ್ಟಾರೆಯಾಗಿ, ಮಲ್ಟಿ ಟಾಸ್ಕಿಂಗ್, ಮಕ್ಕಳಿಗೆ ಆನ್‌ಲೈನ್ ತರಗತಿ, ದೊಡ್ಡವರಿಗೆ ಆನ್‌ಲೈನ್ ಮೀಟಿಂಗ್‌ಗೆ ಮತ್ತು ದೊಡ್ಡ ಪರದೆಯಲ್ಲಿ ವಿಡಿಯೊ ವೀಕ್ಷಿಸಲು, ಗೇಮ್ ಆಡುವುದಕ್ಕೆ ಈ ಐಪ್ಯಾಡ್ ಅನುಕೂಲಕರ. ಒಯ್ಯುವುದು ಸುಲಭ. 10.2 ಇಂಚಿನ ಐಪ್ಯಾಡ್ 9ನೇ ಸರಣಿಯ ಬೆಲೆ 64 ಜಿಬಿ ಮಾಡೆಲ್‌ಗೆ ₹30,900 (ಸಿಮ್ ಕಾರ್ಡ್ ಅಳವಡಿಸಬಹುದಾದ ಮಾಡೆಲ್‌ಗೆ ₹42,900) ಹಾಗೂ 256 ಜಿಬಿ ಮಾಡೆಲ್‌ಗೆ ₹44,900 (ಸಿಮ್ ಕಾರ್ಡ್ ಹಾಕಬಹುದಾದ ಮಾಡೆಲ್‌ಗೆ ₹56,900). ❖

ಕಲಿಕೆಗೊಂದಿಷ್ಟು ಆ್ಯಪ್‌ಗಳು



ಬಾಲಕೃಷ್ಣ ಅಡಿಗ

ಕಲಿಕೆಗೆ ನೆರವಾಗುವ ಕೆಲವೊಂದು ಆ್ಯಪ್‌ಗಳ ವಿವರಗಳು ಹೀಗಿವೆ:

ಸ್ವಯಮ್ (Swayam - Study Webs for Active learning for Young Aspiring Minds): ಇದು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಸ್ವಕಲಿಕೆ ಮಾಡಲಿಚ್ಛಿಸುವ ವಿದ್ಯಾರ್ಥಿಗಳಿಗಾಗಿಯೇ ರೂಪಿಸಿರುವ ಉಚಿತ ಆ್ಯಪ್. ದೇಶದ 135ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ 1300ಕ್ಕೂ ಹೆಚ್ಚು ಅಧ್ಯಾಪಕರು ಸಿದ್ಧಪಡಿಸಿರುವ 2150ಕ್ಕೂ ಹೆಚ್ಚು ಕೋರ್ಸ್‌ಗಳನ್ನು ಇದು ಒಳಗೊಂಡಿದೆ. ಯಾವುದೇ ಹಂತದಲ್ಲಿ ಕಲಿಕೆ ಮುಂದುವರೆಸುವ ಇಚ್ಛೆ ಹೊಂದಿರುವ ಯಾವುದೇ ವ್ಯಕ್ತಿ ಈ ಆ್ಯಪ್‌ನ ಮೂಲಕ ಆನ್‌ಲೈನ್‌ನಲ್ಲಿ ತನಗೆ ಇಷ್ಟವಾದ ಕೋರ್ಸ್ ತೆಗೆದುಕೊಂಡು, ಉಚಿತವಾಗಿ ಕಲಿಕಾ ಸಾಮಗ್ರಿಗಳನ್ನು ಪಡೆದು, ಅಧ್ಯಯನ ಮಾಡಬಹುದು. ಆನ್‌ಲೈನ್ ಮೂಲಕ ಕಲಿತು ಕ್ರೆಡಿಟ್‌ಗಳನ್ನು ಪಡೆಯುವ ಸೌಲಭ್ಯವನ್ನು ಇದು ಒದಗಿಸುತ್ತದೆ. ಒಂದು ವೇಳೆ ವಿದ್ಯಾರ್ಥಿ ತಾನು ಅಧ್ಯಯನ ಮಾಡಿದ ಕೋರ್ಸ್‌ಗೆ ಸರ್ಟಿಫಿಕೇಟ್ ಪಡೆಯಬಯಸಿದಲ್ಲಿ ಮಾತ್ರ ನಿರ್ದಿಷ್ಟ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಪರೀಕ್ಷೆಗೆ ಮುನ್ನ ಸಮೀಪದ ಕಲಿಕಾ ಕೇಂದ್ರಗಳಲ್ಲಿ ನಡೆಸಲಾಗುವ ಪ್ರತ್ಯಕ್ಷ ತರಗತಿಗಳಿಗೆ ಹಾಜರಾಗಬಹುದು. ಸ್ವಯಮ್‌ನ ಜಾಲತಾಣಕ್ಕೆ (sswayam.gov.in)) ಭೇಟಿ ನೀಡಿ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಬಹುದು.

ಫೆಟ್ (PhET): ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಕಾರ್ಲ್ ವೀಮನ್(Carl Weiman) 2002ರಲ್ಲಿ ಖ್ಯಾತ ಕೊಲೆರಾಡೋ ವಿಶ್ವವಿದ್ಯಾಲಯಕ್ಕಾಗಿ ರೂಪಿಸಿಕೊಟ್ಟ ಆ್ಯಪ್ ಇದು. ಪ್ರಾರಂಭದಲ್ಲಿ ಕೇವಲ ಭೌತವಿಜ್ಞಾನದ ಕಲಿಕೆಗೆ ಮೀಸಲಾಗಿದ್ದ ಈ ಆ್ಯಪ್ ಕ್ರಮೇಣ ರಸಾಯನವಿಜ್ಞಾನ, ಜೀವವಿಜ್ಞಾನ ಮತ್ತು ಗಣಿತಗಳ ಜೊತೆಗೆ, ಭೂವಿಜ್ಞಾನದ ಕಲಿಕೆಯನ್ನೂ ತನ್ನ ವ್ಯಾಪ್ತಿಗೆ ಸೇರಿಸಿಕೊಂಡು ಒಂದು ಜನಪ್ರಿಯ ಆ್ಯಪ್ ಆಗಿ ಬೆಳೆದಿದೆ. ಹೆಸರಾಂತ ಪ್ರಾಧ್ಯಾಪಕರು ರಚಿಸಿಕೊಟ್ಟ ಸುಮಾರು 3000ಕ್ಕೂ ಹೆಚ್ಚು ಪಠ್ಯಗಳನ್ನು ಇದು ಹೊಂದಿದೆ. ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಹೆಚ್ಚಿಸಿ, ಪ್ರಶ್ನಿಸುವ ಮನೋಭಾವವನ್ನು ಉತ್ತೇಜಿಸುವ ರೀತಿಯಲ್ಲಿ ಪಠ್ಯಗಳನ್ನು ರೂಪಿಸಲಾಗಿದೆ. ಕಾಣದ್ದನ್ನು ನೋಡುವಂತೆ ಮಾಡುವ ದೃಶ್ಯ ಹಾಗೂ ಮಾನಸಿಕ ಮಾದರಿಗಳನ್ನು ಇದು ಒದಗಿಸುತ್ತದೆ. ವಸ್ತುವಿನ ಚಲನೆ, ಗ್ರಾಫ್ ಮತ್ತು ಅಂಕಿ-ಅಂಶಗಳ ಮೂಲಕ ವಿದ್ಯಾರ್ಥಿಗೆ ನೈಜ ಪ್ರಪಂಚದ ಚಿತ್ರಣ ಒದಗುವಂತೆ ಆ್ಯಪ್ ಅನ್ನು ರೂಪಿಸಲಾಗಿದೆ. ವಿದ್ಯಾರ್ಥಿಗಳ ಗಮನವನ್ನು ಸೆರೆ ಹಿಡಿದಿಡುವಲ್ಲಿ ಯಶಸ್ವಿಯಾಗಿರುವ ಈ ಆ್ಯಪ್, ಪಠ್ಯದಲ್ಲಿ ಬರುವ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಕಾರಣ(cause) ಮತ್ತು ಪರಿಣಾಮ(effect)ಗಳ ಸ್ಪಷ್ಟ ಅರಿವನ್ನು ವಿದ್ಯಾರ್ಥಿಗಳಿಗೆ ಮೂಡಿಸುತ್ತದೆ. ಪಠ್ಯಕ್ಕೆ ಪೂರಕವಾದ ಪ್ರಶ್ನೆಗಳಿಗೆ ಹಾಗೂ ಸಂಬಂಧಿಸಿದ ಸಂದೇಹಗಳಿಗೆ ಸೂಕ್ತ ವಿವರಣೆಯನ್ನೂ ನೀಡುತ್ತದೆ. ವಿಡಿಯೊಗಳು, ಛದ್ಮನ (simulation) ಮಾದರಿಗಳು ಹಾಗೂ ಬದಲಾಯಿಸಬಹುದಾದ ನಿಯತಾಂಕಗಳು ಈ ಆ್ಯಪ್‌ನ ವೈಶಿಷ್ಟ್ಯ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಈ ಆ್ಯಪ್ ಅತ್ಯುಪಯುಕ್ತ. ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿರುವುದು ಇದರ ಇನ್ನೊಂದು ಹೆಗ್ಗಳಿಕೆ.

ಟೀಚ್‌ಮಿಂಟ್(teachmint): ಬೆಂಗಳೂರಿನ ನಾಲ್ಕು ಉತ್ಸಾಹಿ ಯುವಕರು ಸೇರಿ ಕೇವಲ 21 ದಿನಗಳಲ್ಲಿ ರೂಪಿಸಿದ ಒಂದು ಉಪಯುಕ್ತ ಶೈಕ್ಷಣಿಕ ಆ್ಯಪ್ ಇದು. ಪ್ರಸ್ತುತ, ದೇಶದ ಅತಿ ದೊಡ್ಡ ಆನ್‌ಲೈನ್ ಶಿಕ್ಷಣ ಕೇಂದ್ರ ಎಂಬ ಹೆಗ್ಗಳಿಕೆ ಈ ಉಚಿತ ಆ್ಯಪ್‌ಗೆ ಇದೆ. ಈಗ 5000ಕ್ಕೂ ಹೆಚ್ಚು ನಗರಗಳಲ್ಲಿ, 20ಲಕ್ಷಕ್ಕೂ ಹೆಚ್ಚು ತರಗತಿ ಕೋಣೆಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಶಿಕ್ಷಕರಿಂದ ಈ ಆ್ಯಪ್ ಬಳಕೆಯಾಗುತ್ತಿದೆ. ಶಿಕ್ಷಕರೇ ತಮ್ಮ ಅನುಕೂಲಕ್ಕೆ ತಕ್ಕಂತೆ ಆನ್‌ಲೈನ್ ತರಗತಿ ಕೋಣೆಗಳನ್ನು ಸೃಷ್ಟಿಸಿಕೊಂಡು, ತರಗತಿಗಳನ್ನು ನಡೆಸಬಹುದು. ತಮ್ಮ ಉಪನ್ಯಾಸವನ್ನು ರೆಕಾರ್ಡ್ ಮಾಡಿಟ್ಟುಕೊಂಡು ಸಕಾರಣದಿಂದ ಗೈರುಹಾಜರಾದ ವಿದ್ಯಾರ್ಥಿಗಳಿಗೆ ಒದಗಿಸಬಹುದು. ವಿದ್ಯಾರ್ಥಿಗಳೊಂದಿಗೆ ನೇರವಾಗಿ ಸಂಭಾಷಣೆ ನಡೆಸಬಹುದು. ಚರ್ಚೆಯಲ್ಲಿ ಅವರನ್ನೂ ಒಳಗೊಳ್ಳಬಹುದು. ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಸಲಹೆಗಳನ್ನು ನೀಡಬಹುದು. ವಿದ್ಯಾರ್ಥಿಗಳ ಹಾಜರಾತಿ, ಶುಲ್ಕ ವಸೂಲಿ ಮುಂತಾದ ದಾಖಲೆಗಳನ್ನೂ ವ್ಯವಸ್ಥಿತಗೊಳಿಸಬಹುದು. ವಿದ್ಯಾರ್ಥಿ ಶಿಕ್ಷಕರಷ್ಟೇ ಅಲ್ಲ, ಶಾಲೆಗಳೂ ಈ ಆ್ಯಪ್ ಬಳಸಬಹುದು.

ಫೋಟೊಮ್ಯಾಥ್(Photomath): ಗಣಿತ 'ಕಬ್ಬಿಣದ ಕಡಲೆ' ಎಂಬ ಅಭಿಪ್ರಾಯ ಹೊಂದಿರುವ ವಿದ್ಯಾರ್ಥಿಗಳಿಗೆ ಈ ಆ್ಯಪ್ ಒಂದು ವರದಾನ. ಲಂಡನ್‌ನ ಮೈಕ್ರೋಬ್ಲಿಂಕ್(Microblink) ಎಂಬ ಸಂಸ್ಥೆ ರೂಪಿಸಿದ ಆ್ಯಪ್ ಇದು. ನಿಮ್ಮ ಸ್ಮಾರ್ಟ್ ಫೋನ್ ಅಥವಾ ಐ ಪ್ಯಾಡ್‌ನ ಕ್ಯಾಮೆರಾವನ್ನು ಬಳಸಿಕೊಂಡು ಗಣಿತದ ಕ್ಲಿಷ್ಟಕರ ಸಮಸ್ಯೆಗಳನ್ನು ಈ ಆ್ಯಪ್ ಮೂಲಕ ಬಗೆಹರಿಸಿಕೊಳ್ಳಬಹುದು. ಯಾವುದೇ ಗಣಿತದ ಸಮಸ್ಯೆಯನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದು ಆ್ಯಪ್‌ಗೆ ಕಳಿಸಿದಲ್ಲಿ, ಕೆಲವೇ ಕ್ಷಣಗಳಲ್ಲಿ ಆ ಸಮಸ್ಯೆಯನ್ನು ಹಂತ, ಹಂತವಾಗಿ ಬಿಡಿಸಿ, ಉತ್ತರವನ್ನು ಸೂಚಿಸುತ್ತದೆ. ಉತ್ತರ ಪಡೆಯುವ ಪರ್ಯಾಯ ಮಾರ್ಗಗಳನ್ನೂ ಸೂಚಿಸುತ್ತದೆ. ಗಣಿತಜ್ಞರು ಪರಿಶೀಲಿಸಿ ಸಿದ್ಧಪಡಿಸಿದ ಉತ್ತರಗಳು ಇದರಲ್ಲಿ ದೊರಕುತ್ತವೆ. ಪ್ರಾರಂಭದ ಹಂತದಲ್ಲಿ ಮುದ್ರಿತವಾದ ಸಮಸ್ಯೆಗಳನ್ನು ಮಾತ್ರ ಗುರುತಿಸುವ ಸಾಮರ್ಥ್ಯ ಇದ್ದ ಈ ಆ್ಯಪ್ ಈಗ ಇನ್ನಷ್ಟು ಸುಧಾರಣೆಗಳಿಗೆ ಒಳಪಟ್ಟು, ಕೈಬರಹದಲ್ಲಿರುವ ಗಣಿತದ ಸಮಸ್ಯೆಗಳನ್ನೂ ಗುರುತಿಸುವ ಸಾಮರ್ಥ್ಯವನ್ನು ಹೊಂದಿದೆ. ವಿದ್ಯಾರ್ಥಿಗಳನ್ನು ಸೋಮಾರಿಯಾಗಿಸುತ್ತದೆ ಎಂಬ ಅಪಾದನೆ ಇದೆಯಾದರೂ, ವಿದ್ಯಾರ್ಥಿ ಸಮೂಹದಲ್ಲಿ ಇದು ಅತ್ಯಂತ ಜನಪ್ರಿಯವಾಗಿರುವ ಆ್ಯಪ್‌ಗಳಲ್ಲಿ ಒಂದು. ❖



ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 79

1081. ಮಾನವ ಶರೀರದಲ್ಲಿ ಅತಿ ದೊಡ್ಡ ಮೂಳೆ ಯಾವುದು?
ಎ) ತೊಡೆ ಎಲುಬು ಬಿ) ದವಡೆ ಮೂಳೆ
ಸಿ) ಹೆಗಲ ಮೂಳೆ ಡಿ) ಕಾಲರ್ ಮೂಳೆ

1082. ನಮ್ಮ ಗ್ಯಾಲಕ್ಸಿ ಹೆಸರೇನು?
ಎ) ಮಿಲ್ಕಿ ವರ್ಲ್ಡ್ ಬಿ) ಮಿಲ್ಕಿ ಗ್ಯಾಲಕ್ಸಿ
ಸಿ) ಮಿಲ್ಕಿವೇ ಡಿ) ಇವುಗಳಲ್ಲಿ ಯಾವುದೂ ಅಲ್ಲ

1083. ಕಂಪ್ಯೂಟರ್ ಲ್ಯಾನ್ (ಲೋಕಲ್ ಏರಿಯಾ ನೆಟ್‌ವರ್ಕ್) ಸಂಪರ್ಕಗೊಳಿಸಿದರೆ?
ಎ) ವೇಗವಾಗಿ ಚಲಿಸುತ್ತದೆ
ಬಿ) ಅಂತರ್ಜಾಲ ಸಂಪರ್ಕಕ್ಕೆ ಹೋಗುವುದು
ಸಿ) ಮಾಹಿತಿ ಮತ್ತು ಉಪಕರಣಗಳನ್ನು ಹಂಚಿಕೊಳ್ಳುವುದು
ಡಿ) ಇವುಗಳಲ್ಲಿ ಯಾವುದೂ ಅಲ್ಲ

1084. ಯಾವುದರ ಕೊರತೆಯಿಂದಾಗಿ ಗಂಟಲುವಾಳ ಉಂಟಾಗುತ್ತದೆ?
ಎ) ಅಯೋಡಿನ್ ಬಿ) ಬೇಟಾಡಿನ್
ಸಿ) ಕ್ಯಾಲ್ಸಿಯಂ ಡಿ) ಪೊಟ್ಯಾಸಿಯಂ

1085. ದೂರವಾಣಿಯನ್ನು ಕಂಡುಹಿಡಿದವರು ಯಾರು?
ಎ) ಥಾಮಸ್ ಆಲ್ವಾ ಎಡಿಸನ್
ಬಿ) ಅಲೆಕ್ಸಾಂಡರ್ ವಿಲಿಯಂ
ಸಿ) ಅಕೆರ್‌ಮನ್ ಡಿ) ಗ್ರಾಹಂಬೆಲ್

1086. ಹಗುರವಾದ ಅನಿಲ ಯಾವುದು?
ಎ) ಆಮ್ಲಜನಕ ಬಿ) ಇಂಗಾಲ
ಸಿ) ಹೈಡ್ರೋಜನ್ ಡಿ) ಸಾರಜನಕ

1087. ಕೌಟಿಲ್ಯನ 'ಅರ್ಥಶಾಸ್ತ್ರ' ಯಾವುದನ್ನು ವಿವರಿಸುತ್ತದೆ?
ಎ) ಜ್ಯೋತಿಷ್ಯ ಬಿ) ಆಯುರ್ವೇದ
ಸಿ) ಖಗೋಳ ವಿಜ್ಞಾನ ಡಿ) ಸಾರ್ವಜನಿಕ ಆಡಳಿತ

1088. ಎವರೆಸ್ಟ್ ಶಿಖರವನ್ನು ಏರಿದ ಮೊದಲ ಭಾರತೀಯ ಮಹಿಳೆ ಯಾರು?
ಎ) ಸುನೀತಾ ವಿಲಿಯಮ್ಸ್ ಬಿ) ಬಚೇಂದ್ರಿಪಾಲ್
ಸಿ) ರಾಣಿಕುಮಾರಿ ಡಿ) ಪಿ.ಟಿ.ಉಷಾ

1089. 1024 ಕಿಲೋ ಬೈಟ್‌ಗಳು ಇದಕ್ಕೆ ಸಮಾನವಾಗಿರುತ್ತವೆ?
ಎ)1 ಮೆಗಾಬೈಟ್ (ಎಂಬಿ)
ಬಿ)1 ಕಿಲೋಬೈಟ್ (ಕೆಬಿ) ಸಿ)1 ಟೆರಾಬೈಟ್ (ಟಿಬಿ)
ಡಿ) 1 ಗೀಗಾಬೈಟ್ (ಜಿಬಿ)

1090. ಯಾವ ಸಸ್ಯಗಳು ಮರುಭೂಮಿಯಲ್ಲಿ ಬೆಳೆಯುತ್ತವೆ?
ಎ) ಆಲ್ಪೈನ್ ಬಿ) ಕಳ್ಳಿ ಸಿ) ಸಿಲ್ವರ್‌ವುಡ್ ಡಿ) ತೇಗ

1091. ಐತಿಹಾಸಿಕ ಸ್ಮಾರಕ ಗೋಲ್‌ಗುಂಬಜ್ ಯಾವ ಸ್ಥಳದಲ್ಲಿದೆ?
ಎ) ವಿಜಯನಗರ ಬಿ) ಹೈದರಾಬಾದ್
ಸಿ) ವೆಲ್ಲೋರ್ ಡಿ) ವಿಜಯಪುರ

1092. ಕರ್ನಾಟಕದ ರಾಮನಗರ ಜಿಲ್ಲೆಯಲ್ಲಿರುವ ಚನ್ನಪಟ್ಟಣವು ಯಾವುದಕ್ಕೆ ಪ್ರಸಿದ್ಧವಾಗಿದೆ?
ಎ) ರೇಷ್ಮೆ ಬಿ) ಶ್ರೀಗಂಧ
ಸಿ) ಆಟಿಕೆಗಳು ಡಿ) ಅಗರಬತ್ತಿ

1093. ಅಧಿಕ ವರ್ಷದಲ್ಲಿ ಎಷ್ಟು ದಿನಗಳಿರುತ್ತವೆ?
ಎ) 364 ಬಿ) 365
ಸಿ) 366 ಡಿ) 367

1094. ಜೇನುನೊಣಗಳನ್ನು ಇರುವ ಸ್ಥಳವನ್ನು ಏನೆಂದು ಕರೆಯಲಾಗುತ್ತದೆ?
ಎ) ಮೋರಿ ಬಿ) ಪಂಜರ
ಸಿ) ಜೇನುಗೂಡು ಡಿ) ಬಿಲ

1095. ವಿಂಡೋಸ್ 95, ವಿಂಡೋಸ್ 98 ಮತ್ತು ವಿಂಡೋಸ್ ಎನ್.ಟಿ.ಯನ್ನು ಕರೆಯುವರು?
ಎ) ಪ್ರೊಸೆಸರ್ ಬಿ) ಆಪರೇಟರ್ಸ್
ಸಿ) ಡೊಮೈನ್ ಹೆಸರು
ಡಿ) ಆಪರೇಟಿಂಗ್ ಸಿಸ್ಟಮ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ – 78ರ ಉತ್ತರ: 1066. ಎ, 1067. ಸಿ, 1068. ಎ, 1069. ಎ, 1070. ಎ, 1071. ಬಿ, 1072. ಸಿ, 1073. ಸಿ, 1074. ಎ, 1075. ಎ, 1076. ಎ, 1077. ಬಿ, 1078. ಎ, 1079. ಎ, 1080. ಬಿ

ಅಡುಗೆಮನೆ ಆಗುತ್ತಿದೆ ಸ್ಮಾರ್ಟ್



ಉದಯ ಶಂಕರ ಪುರಾಣಿಕ

ಟಿವಿಯಲ್ಲಿ ಪ್ರಸಾರವಾದ ಅಡುಗೆ ಕಾರ್ಯಕ್ರಮ, ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಹೊಸರುಚಿ, ಪ್ರವಾಸದಲ್ಲಿದ್ದಾಗ ಅಥವಾ ಮದುವೆ ಮೊದಲಾದ ಸಮಾರಂಭಗಳಲ್ಲಿ ಇಷ್ಟಪಟ್ಟು ಸವಿದ ತಿಂಡಿ-ತಿನಿಸು, ಹೀಗೆ ಎಷ್ಟೊಂದು ನೆನಪುಗಳು. ಆದರೆ ಈ ತಿಂಡಿ-ತಿನಿಸುಗಳನ್ನು ಮಾಡುವ ವಿಧಾನ ತಕ್ಷಣಕ್ಕೆ ನೆನಪಾಗುತ್ತಿಲ್ಲ.

ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿರುವ ಒಂದು ಆ್ಯಪ್ ಮೂಲಕ ನಿಮಗೆ ಇಷ್ಟವಾದ ತಿಂಡಿ-ತಿನಿಸುಗಳನ್ನು ಮಾಡುವ ವಿಧಾನದ ಕುರಿತು ಸಂಪೂರ್ಣ ಮಾಹಿತಿ ಪಡೆಯಬಹುದು. ತಿಂಡಿ ಇಷ್ಟವಾಗಿತ್ತು ಆದರೆ ಅದನ್ನು ಮಾಡುವುದು ಹೇಗೆ ಎಂದು ಗೊತ್ತಿಲ್ಲವೆಂದರೂ ಸಮಸ್ಯೆಯಿಲ್ಲ, ತಿಂಡಿ ತಿನಿಸಿನ ಉತ್ತಮ ಗುಣಮಟ್ಟದ ಫೋಟೊ ಅಥವಾ ವಿಡಿಯೊ ಇದ್ದರೂ ಸಾಕು, ಮಾಡುವ ವಿಧಾನವನ್ನು ನಿಮ್ಮ ಸ್ಮಾರ್ಟ್‌ಫೋನ್ ಆ್ಯಪ್ ನೀಡುತ್ತದೆ.

ನಮಗೆ ಅಡುಗೆ ಮಾಡುವ ವಿಧಾನ ಗೊತ್ತು; ಆದರೆ ಮಾಡಲು ಬೇಕಾದ ತರಕಾರಿ, ಬೇಳೆ ಇತ್ಯಾದಿಗಳಿಗೆ ಸ್ಥಳೀಯ ಭಾಷೆಯಲ್ಲಿ ಏನೆಂದು ಕರೆಯುತ್ತಾರೆ? ಅಥವಾ ನಾಲ್ಕು ಜನರಿಗೆ ಸಾಕಾಗುವಷ್ಟು ತಿಂಡಿ ಮಾಡುವ ವಿಧಾನ ಮತ್ತು ಅಗತ್ಯ ವಸ್ತುಗಳ ಪ್ರಮಾಣ ಗೊತ್ತಿದೆ, ಆದರೆ ಇಪ್ಪತ್ತು ಜನರಿಗೆ ಮಾಡಬೇಕಾದರೆ ಮಾಡುವ ವಿಧಾನ ಮತ್ತು ಪ್ರಮಾಣ ನಿಖರವಾಗಿ ಗೊತ್ತಾಗುವುದು ಹೇಗೆ? ಇಂತಹ ಹಲವಾರು ಪ್ರಶ್ನೆಗಳಿಗೂ ಉತ್ತರ ನೀಡುವ ಸ್ಮಾರ್ಟ್‌ಫೋನ್ ಆ್ಯಪ್‌ಗಳು ಜನಪ್ರಿಯವಾಗುತ್ತಿವೆ. ಈಗಾಗಲೇ ಯಾವ ತಿಂಡಿ ಸೇವಿಸಿದರೆ ಎಷ್ಟು ಕ್ಯಾಲೋರಿಗಳು ನಮ್ಮ ದೇಹ ಸೇರುತ್ತದೆ ಎಂದು ತಿಳಿಸುವ ಅನೇಕ ಆ್ಯಪ್‌ಗಳು ನಮ್ಮ ದೇಶದಲ್ಲಿ ಜನಪ್ರಿಯವಾಗುತ್ತಿವೆ.

ಮನೆಗೆ ಬೇಕಾದ ದಿನಸಿ ಸಾಮಾನುಗಳನ್ನು ಆನ್‌ಲೈನ್ ಮೂಲಕ ಖರೀದಿ ಅಥವಾ ಅಂಗಡಿಗೆ ಹೋಗಿ ಖರೀದಿ



ಮಾಡುವಾಗ ರಿಯಾಯತಿ ಮಾರಾಟ, ಕಾಂಬೋ ಆಫರ್ ಇತ್ಯಾದಿಗಳ ಲಾಭ ಪಡೆಯಲು ಮುಂದಾಗುತ್ತೇವೆ. ಈ ಭರಾಟೆಯಲ್ಲಿ ಮನೆಯಲ್ಲಿ ಈಗಾಗಲೇ ಇರುವ ದಿನಸಿ ಸಾಮಾನುಗಳನ್ನು ಮರೆತು ಖರೀದಿ ಮಾಡಿರುವುದು ಅರಿವಾದಾಗ ತಡವಾಗಿರುತ್ತದೆ. ಮನೆಯಲ್ಲಿ ಸ್ಟೋರ್ ರೂಮ್ ಅಥವಾ ಅಡುಗೆಮನೆಯಲ್ಲಿರುವ ದಿನಸಿ ಸಾಮಾನುಗಳ ಪ್ರಮಾಣ ಪ್ರತಿದಿನ ದೊರೆಯುವಂತೆ ಅನುವು ಮಾಡಿಕೊಡುವ ಸ್ಮಾರ್ಟ್ ಸ್ಟೋರೇಜ್ ಬಿನ್‌ಗಳು ಮತ್ತು ಮೊಬೈಲ್ ಆ್ಯಪ್‌ಗಳು ಜನಪ್ರಿಯವಾಗುತ್ತಿವೆ. ಒಂದು ದಿನಕ್ಕೆ ಸಾಕಾಗುವಷ್ಟು ಅಕ್ಕಿ ಮಾತ್ರವಿದೆ ಅಥವಾ ಎಣ್ಣೆ ಖಾಲಿಯಾಗಿದೆ ಎನ್ನುವ ಎಚ್ಚರಿಕೆಯ ಸಂದೇಶಗಳನ್ನು ಕೂಡ ಈ ಸ್ಮಾರ್ಟ್ ವ್ಯವಸ್ಥೆಯಿಂದ ಪಡೆಯಲು ಸಾಧ್ಯವಿದೆ. ಅನಗತ್ಯ ಖರ್ಚು ತಡೆಯಲು ಮತ್ತು ಮನೆಯಲ್ಲಿ ಪುಟ್ಟದೊಂದು ದಿನಸಿ ಅಂಗಡಿಗೆ ಬೇಕಾಗುವಷ್ಟು ಸಾಮಾನುಗಳು ಸಂಗ್ರಹವಾಗುವುದನ್ನು ತಡೆಯಲು ಇಂತಹ ವ್ಯವಸ್ಥೆ ನೆರವಾಗುತ್ತದೆ.

ಅಡುಗೆ ಮಾಡಲು ಮೈಕ್ರೋವೇವ್, ಓವನ್ ಬಳಸುವವರಿಗೆ, ಸ್ಮಾರ್ಟ್ ಕ್ಯಾಮೆರಾ ಇರುವ ಓವನ್‌ಗಳು ದೊರೆಯುತ್ತಿವೆ. ಇಂತಹ ಓವನ್ ಬಳಸುವಾಗ, ಈ ಕ್ಯಾಮೆರಾ ಲೈವ್ ಇಮೇಜ್‌ಗಳನ್ನು ಇಂಟರ್‌ನೆಟ್ ಮೂಲಕ ಸ್ಮಾರ್ಟ್‌ಫೋನ್‌ಗೆ ರವಾನಿಸುತ್ತದೆ. ಹೀಗಾಗಿ, ನೀವು ಅಡುಗೆಮನೆಯಲ್ಲಿ ಇಲ್ಲದಿದ್ದರೂ ಒವನ್‌ನಲ್ಲಿ ಆಗುತ್ತಿರುವ ಅಡುಗೆಯನ್ನು ಕುರಿತು ಸ್ಮಾರ್ಟ್‌ಫೋನ್ ಮೂಲಕ ಮಾಹಿತಿ ಪಡೆಯಬಹುದು. ಅಷ್ಟೇ ಅಲ್ಲ, ಓವನ್ ಕಾರ್ಯಾಚರಣೆಯ ನಿಯಂತ್ರಣವನ್ನು ಕೂಡ ಸ್ಮಾರ್ಟ್‌ಫೋನ್ ಮೂಲಕ ಮಾಡಬಹುದಾಗಿದೆ.

ಮೈಕ್ರೋವೇವ್ ಓವನ್‌ಗಳಂತೆ, ಈಗ ಸ್ಮಾರ್ಟ್ ರೆಫ್ರಿಜರೇಟರ್‌ಗಳು ಜನಪ್ರಿಯವಾಗುತ್ತಿವೆ. ಇಂತಹ ರೆಫ್ರಿಜರೇಟರ್‌ನಲ್ಲಿ ಅಳವಡಿಸಲಾಗಿರುವ ಕ್ಯಾಮೆರಾ ವ್ಯವಸ್ಥೆಯನ್ನು ಬಳಸಿ, ರೆಫ್ರಿಜರೇಟರ್‌ನಲ್ಲಿ ಇಟ್ಟಿರುವ ಪದಾರ್ಥಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ, ರೆಫ್ರಿಜರೇಟರ್‌ನಲ್ಲಿ ಇಟ್ಟಿರುವ ಹಾಲು, ಮೊಸರು, ತರಕಾರಿ ಇತ್ಯಾದಿಗಳನ್ನು ಯಾವ ದಿನ ಮತ್ತು ಸಮಯದಂದು ಇಡಲಾಯಿತು. ಹೆಚ್ಚು ಬಳಕೆಯಾಗುವ ಉತ್ಪನ್ನಗಳು ಯಾವುದು ಮತ್ತು ಲಭ್ಯವಿರುವ ಉತ್ಪನ್ನಗಳನ್ನು ಬಳಸಿ ಯಾವ ಅಡುಗೆ ಮಾಡಬಹುದು – ಹೀಗೆ ವಿವಿಧ ಮಾಹಿತಿಯನ್ನು ಈ ಸ್ಮಾರ್ಟ್ ರೆಫ್ರಿಜರೇಟರ್‌ಗಳು ಮತ್ತು ಅವುಗಳಿಗೆ ಸೂಕ್ತವಾದ ಸ್ಮಾರ್ಟ್ ಫೋನ್ ಆ್ಯಪ್‌ಗಳು ನೀಡುತ್ತವೆ.

ಪಾತ್ರೆ ತೊಳೆಯಲು ಬಳಸುವ ನೀರು ಇರಬಹುದು, ಅಡುಗೆ ತ್ಯಾಜ್ಯ ಸೇರುವ ಕಸದ ಬುಟ್ಟಿ ಇರಬಹುದು – ಇವುಗಳು ಕೂಡ ಈಗ ಸ್ಮಾರ್ಟ್ ಆಗುತ್ತಿವೆ. ನೀರು ಪೋಲಾಗದಂತೆ ಕೆಲಸ ಮಾಡುವ ನಲ್ಲಿಗಳು, ಯಾವ ತರಕಾರಿ, ಹಣ್ಣು, ಸೊಪ್ಪು ಅಥವಾ ಅಡುಗೆ ಪದಾರ್ಥ ಹೆಚ್ಚಾಯಿತು ಅಥವಾ ಹಾಳಾಯಿತು ಎಂದು ಕಸದ ಬುಟ್ಟಿ ಸೇರಿತು ಎನ್ನುವ ಮಾಹಿತಿ ನೀಡುವ ಕಸದ ಬುಟ್ಟಿ, ಅಡುಗೆಮನೆಯಲ್ಲಿ ವಿದ್ಯುತ್ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ನೆರವಾಗುವ ಸ್ಮಾರ್ಟ್ ವಿದ್ಯುತ್ ಉಪಕರಣಗಳು ಮತ್ತು ದೀಪಗಳು – ಹೀಗೆ ಹಲವಾರು ಅನುಕೂಲತೆಗಳನ್ನು ನೀಡಲು ಕಾರಣವಾಗಿದೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್, ಅಡುಗೆ ಅನಿಲ ಸೋರಿಕೆ ಮೊದಲಾದ ಸಮಸ್ಯೆಗಳು, ಅಡುಗೆಮನೆಯಲ್ಲಿ ಹಿರಿಯರು ಇಲ್ಲದಿರುವಾಗ ಮಕ್ಕಳು ಕುತೂಹಲದಿಂದ ಗ್ಯಾಸ್, ಓವನ್, ಮಿಕ್ಸಿ ಇತ್ಯಾದಿಗಳನ್ನು ಬಳಸಲು ಮುಂದಾಗುವಂತಹ ಸಂದರ್ಭಗಳಲ್ಲಿ ಹಿರಿಯರಿಗೆ ಎಚ್ಚರಿಕೆ ನೀಡುವ ಸುರಕ್ಷತಾ ಸೌಲಭ್ಯಗಳನ್ನು ಸ್ಮಾರ್ಟ್ ಅಡುಗೆಮನೆಯಲ್ಲಿ ನೀಡಲು ಅಗತ್ಯ ತಂತ್ರಜ್ಞಾನದ ಅಭಿವೃದ್ಧಿ ನಡೆದಿದೆ.

ಸ್ಮಾರ್ಟ್ ಸಿಟಿ ಯೋಜನೆಗಳಂತೆ, ಸ್ಮಾರ್ಟ್ ಮನೆ ಅಥವಾ ಸ್ಮಾರ್ಟ್ ಅಡುಗೆಮನೆ ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಪ್ರಮುಖ ಪಾತ್ರವಹಿಸುತ್ತಿದೆ. ಭಾರತೀಯ ಅಡುಗೆಯ ವಿಧಾನಗಳು, ದಿನಸಿ ಮೊದಲಾದ ಸಾಮಾನುಗಳನ್ನು ಕುರಿತು ಮಾಹಿತಿಯನ್ನು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಆಧಾರಿತ ರೆಫ್ರಿಜರೇಟರ್‌ಗಳು, ಮೈಕ್ರೋವೇವ್ ಮೊದಲಾದ ಉಪಕರಣಗಳು ಹಾಗೂ ಸ್ಮಾರ್ಟ್‌ಫೋನ್ ಆ್ಯಪ್‌ಗಳಲ್ಲಿ ದೊರೆಯುವಂತೆ ಮಾಡುವ ಕೆಲಸ ಸಾಕಷ್ಟು ಆಗಬೇಕಾಗಿದೆ. ❖

ಔಡಿ ಕ್ಯೂ5 ಬುಕಿಂಗ್ ಶುರು

ಪ್ರಜಾವಾಣಿ ವಾರ್ತೆ




ಬೆಂಗಳೂರು: ಐಷಾರಾಮಿ ಕಾರು ತಯಾರಿಕಾ ಕಂಪನಿ ಔಡಿ ತನ್ನ ಕ್ಯೂ5 ಕಾರಿನ ಬುಕಿಂಗ್ ಆರಂಭಿಸಿದೆ. ಈ ಕಾರು ಮುಂದಿನ ತಿಂಗಳು ಮಾರುಕಟ್ಟೆಗೆ ಬಿಡುಗಡೆ ಆಗಲಿದೆ.

₹ 2 ಲಕ್ಷ ಮೊತ್ತವನ್ನು ಕಂಪನಿಯ ವೆಬ್‌ಸೈಟ್ ಮೂಲಕ ಅಥವಾ ಕಂಪನಿಯ ಡೀಲರ್ ಮೂಲಕ ಪಾವತಿಸಿ ಕಾರು ಬುಕ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಈ ಕಾರು 2 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಹೊಂದಿದೆ. ಎಂಟು ಏರ್‌ಬ್ಯಾಗ್‌ಗಳು, ಪಾರ್ಕ್ ಅಸಿಸ್ಟ್‌ನಂತಹ ಸೌಲಭ್ಯಗಳು ಇದರಲ್ಲಿ ಇವೆ. 'ಇದು 2021ರಲ್ಲಿ ನಮ್ಮ ಕಂಪನಿಯ ಕಡೆಯಿಂದ ಬಿಡುಗಡೆ ಆಗುತ್ತಿರುವ 9ನೆಯ ಉತ್ಪನ್ನ' ಎಂದು ಔಡಿ ಕಂಪನಿಯ ಭಾರತದ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲಾನ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,477
ಇಂದಿನ ಅಂತ್ಯ	18,418
▼	58
ದಿನದ ಗರಿಷ್ಠ	18,604

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1305(1305)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1205 (1200)

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,400	13,000	13,100	201.60ಸೆಂಟ್ಸ್
ಎಸಿ	6,325	5,000	5,425	
ಆರ್‌ಪಿ	6,000	6,000	6,250	ಲಂಡನ್
ಆರ್‌ಸಿ	3,485	3,450	3,625	2103ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

19-10-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಸೋಯಾ ಕಚ್ಚಾ	1250 (1247)
ಪಾಮ್ ವಾರದ ಡೆಲಿವರಿ	1203 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1265)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,400 (47,250)
ಬೆಳ್ಳಿ ಕೆ.ಜಿ
63,850 (63,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಅಬ್ದುಲ್ ಖಾದರ್, ಹೈದರಾಬಾದ್

- **ಪ್ರಶ್ನೆ: ನಾನು ಕರ್ನಾಟಕದವನು. ಸದ್ಯ ಹೈದರಾಬಾದ್‌ನಲ್ಲಿ ನೆಲೆಸಿದ್ದೇನೆ. ಬಹಳ ವರ್ಷಗಳಿಂದ ನಿಮ್ಮ ಅಂಕಣ ಓದುತ್ತಿದ್ದೇನೆ. ನನ್ನ ಪ್ರಶ್ನೆ: ನನಗೆ ಮೂವರು ಮಕ್ಕಳು. ನನ್ನ ಎಲ್‌ಐಸಿ ಪಾಲಿಸಿಗೆ ನನ್ನ ಹೆಂಡತಿಯನ್ನು ನಾಮನಿರ್ದೇಶನ ಮಾಡಿದ್ದೆ. ಅವಳು ಎರಡು ವರ್ಷಗಳ ಹಿಂದೆ ಮೃತಳಾದಳು. ನಾನು ಈ ವಿಚಾರವನ್ನು ಎಲ್‌ಐಸಿಗೆ ತಿಳಿಸಿಲ್ಲ. ನನ್ನ ನಂತರ ನನ್ನ ಮಕ್ಕಳಿಗೆ ಎಲ್‌ಐಸಿ ಹಣ ದೊರೆಯಬೇಕು. ಸಲಹೆ ನೀಡಿ.**

ಉತ್ತರ: ನೀವು ನಿಮ್ಮ ಹೆಂಡತಿಯ ಮರಣ ಪತ್ರದ ನಕಲನ್ನು ಎಲ್‌ಐಸಿಗೆ ತಕ್ಷಣ ಕೊಟ್ಟು ನಿಮ್ಮ ಮಕ್ಕಳ ಪೈಕಿ ಒಬ್ಬರ ಹೆಸರಿನಲ್ಲಿ ಮರು ನಾಮನಿರ್ದೇಶನ ಮಾಡಿ. ಹೀಗೆ ಮಾಡದೇ ಇದ್ದರೆ ನಿಮ್ಮ ಕಾಲಾನಂತರ ಎಲ್‌ಐಸಿಯವರು ನಿಮ್ಮ ಮಕ್ಕಳಿಗೆ ಪಾಲಿಸಿ ಹಣ ಕೊಡುವುದಿಲ್ಲ. ಅವರು ವಾರಸುದಾರರ ಹಕ್ಕಿನ ಪತ್ರವನ್ನು ಕೋರ್ಟ್‌ನಲ್ಲಿ ಪಡೆಯಲು ನಿಮ್ಮ ಮಕ್ಕಳಿಗೆ ತಿಳಿಸುತ್ತಾರೆ. ಇದು ಸುಲಭದ ಕೆಲಸ ಅಲ್ಲ. ಜೊತೆಗೆ ಬಹಳಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಓರ್ವ ವ್ಯಕ್ತಿ ತನ್ನ ಹೂಡಿಕೆಗೆ ನಾಮನಿರ್ದೇಶನ ಮಾಡಿದ ನಂತರ ನಾಮನಿರ್ದೇಶನ ಇರುವ ವ್ಯಕ್ತಿ ಮೃತಪಟ್ಟಲ್ಲಿ, ತಕ್ಷಣ ಬೇರೊಬ್ಬರನ್ನು ಮರು ನಾಮನಿರ್ದೇಶನ ಮಾಡಲು ಮರೆಯಬಾರದು. ಇಂದು ಬ್ಯಾಂಕ್‌ಗಳಲ್ಲಿ ಹಾಗೂ ವಿಮಾ ಕಂಪನಿಗಳಲ್ಲಿ ಕೋಟ್ಯಂತರ ರೂಪಾಯಿ ಹಣವನ್ನು ವಾರಸುದಾರರು ಪಡೆಯಲಾಗದೆ ಪರದಾಡುತ್ತಿರುವುದನ್ನು ನೋಡುತ್ತಿದ್ದೇನೆ. ಓದುಗರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು.

ಮಂಜುಳಾ, ಹಾಸನ

- **ಪ್ರಶ್ನೆ: ನಾನು ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತೇನೆ. ತಿಂಗಳ ಸಂಬಳ ₹ 76,000. ಎಲ್ಲಾ ಖರ್ಚು ಕಳೆದು ₹ 55 ಸಾವಿರ ಉಳಿಯುತ್ತದೆ. ವಯಸ್ಸು 23 ವರ್ಷ. ಅವಿವಾಹಿತೆ. ನನಗೆ ವಿಮೆ, ಠೇವಣಿ, ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆ ಹಾಗೂ ತೆರಿಗೆ ವಿಚಾರದಲ್ಲಿ ಸಲಹೆ ನೀಡಿ.**

ಉತ್ತರ: ನೀವು ಉಳಿಸಬಹುದಾದ ₹ 55 ಸಾವಿರದಲ್ಲಿ ₹ 5 ಸಾವಿರವನ್ನು ಉಳಿತಾಯ ಖಾತೆಯಲ್ಲಿ ಇಡುತ್ತಾ ಬನ್ನಿ. ಉಳಿದ ₹ 50 ಸಾವಿರವನ್ನು ಕ್ರಮವಾಗಿ ಜೀವ ವಿಮೆಯಲ್ಲಿ ₹ 5 ಸಾವಿರ, ಪಿಪಿಎಫ್ ₹ 5 ಸಾವಿರ, ಎನ್‌ಪಿಎಸ್‌ನಲ್ಲಿ ₹ 5 ಸಾವಿರ, ಮ್ಯೂಚುವಲ್ ಫಂಡ್‌ನಲ್ಲಿ ₹ 5 ಸಾವಿರ, ಬಂಗಾರದ ಸಲುವಾಗಿ ₹ 10 ಸಾವಿರ, ಮದುವೆ ಸಲುವಾಗಿ ₹ 20 ಸಾವಿರ ತಿಂಗಳಿಗೆ ಉಳಿಸಲು ಪ್ರಾರಂಭಿಸಿ. ಪಿಪಿಎಫ್ ಹಾಗೂ ಜೀವ ವಿಮೆ ಸೆಕ್ಷನ್ 80ಸಿ ಆಧಾರದ ಮೇಲೆ ಹಾಗೂ ಎನ್‌ಪಿಎಸ್ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ತೆರಿಗೆ ಉಳಿಸಲು ಅನುಕೂಲ ಆಗುತ್ತದೆ. ಬಂಗಾರದ ಸಲುವಾಗಿ ಹಾಗೂ ಮದುವೆಯ ಸಲುವಾಗಿ ಉಳಿಸಲು ಹಣವನ್ನು ಆರ್.ಡಿ.ಯಲ್ಲಿ ತೊಡಗಿಸಿ. ಮ್ಯೂಚುವಲ್ ಫಂಡ್‌ನ ಇಂಡೆಕ್ಸ್ ಫಂಡ್‌ನಲ್ಲಿ ಎಸ್‌ಐಪಿ ಮಾಡಿ. ಷೇರು ಮಾರುಕಟ್ಟೆಯಲ್ಲಿ ತೊಡಗಿಸುವ ಮುನ್ನ ಡಿಮ್ಯಾಟ್ ಖಾತೆ ತೆರೆಯಿರಿ. ಇಲ್ಲಿ ನೀವು ಬ್ಲೂಚಿಪ್ ಕಂಪನಿಗಳ ಷೇರುಗಳನ್ನೇ ಕೊಳ್ಳಿರಿ. ಈ ಕ್ರಮಬದ್ಧವಾದ ಹೂಡಿಕೆಗಳು ಭವಿಷ್ಯದಲ್ಲಿ ತುಂಬಾ ಅನುಕೂಲ ಆಗುತ್ತವೆ. ಜೊತೆಗೆ ತೆರಿಗೆ ಉಳಿಸಲು ಕೂಡ ಸಹಾಯಕ. ಇನ್ನೂ ಹೆಚ್ಚಿನ ಮಾಹಿತಿ ಬೇಕಿದ್ದರೆ ಕರೆ ಮಾಡಿ.

ಎಂ.ಆರ್. ನರಸಿಂಹಮೂರ್ತಿ, ವಿದ್ಯಾರಣ್ಯಪುರ, ಬೆಂಗಳೂರು

- **ಪ್ರಶ್ನೆ: ನಾನು ಇದೇ ಡಿಸೆಂಬರ್‌ನಲ್ಲಿ ನಿವೃತ್ತನಾಗುತ್ತಿದ್ದೇನೆ. ನನಗೆ ಪಿಂಚಣಿ ಇಲ್ಲ. ನಿವೃತ್ತಿಯಿಂದ ಸುಮಾರು ₹ 42 ಲಕ್ಷ ಬರಬಹುದು. ಉಳಿಯಲು ಮನೆ ಇದೆ. ಒಬ್ಬಳೇ ಮಗಳು. ಅವಳಿಗೆ ಮದುವೆ ಆಗಿದೆ. ನನ್ನ ಹಣಕ್ಕೆ ಭದ್ರತೆ ಮುಖ್ಯ. ಬಡ್ಡಿಯಿಂದಲೇ ಜೀವಿಸಲು ಸರಿಯಾದ ಮಾರ್ಗದರ್ಶನ ನೀಡಿ.**

ಉತ್ತರ: ನೀವು ಅಂಚೆ ಕಚೇರಿ ಹಿರಿಯ ನಾಗರಿಕ ಠೇವಣಿ ಹಾಗೂ ಎಲ್‌ಐಸಿಯವರ ವಯೋವಂದನಾ ಯೋಜನೆಗಳಲ್ಲಿ ತಲಾ ₹ 15 ಲಕ್ಷದಂತೆ (ಒಟ್ಟು ₹ 30 ಲಕ್ಷ) ತೊಡಗಿಸಿರಿ. ಅಂಚೆ ಕಚೇರಿಯಲ್ಲಿ ಮೂರು ತಿಂಗಳಿಗೊಮ್ಮೆ ಹಾಗೂ ಎಲ್‌ಐಸಿಯಲ್ಲಿ ಪ್ರತಿ ತಿಂಗಳೂ ಬಡ್ಡಿ ಕೊಡುತ್ತಾರೆ. ಬಡ್ಡಿದರ ಎರಡರಲ್ಲೂ ಶೇಕಡ 7.4ರಷ್ಟು ಇದೆ.

ಉಳಿದ ₹ 12 ಲಕ್ಷದಲ್ಲಿ ₹ 2 ಲಕ್ಷವನ್ನು ಅತೀ ಅವಶ್ಯಕತೆಗಳಿಗೆ ಎಂದು ಉಳಿತಾಯ ಖಾತೆಯಲ್ಲಿ ಇರಿಸಿ. ಇನ್ನುಳಿದ ₹ 10 ಲಕ್ಷ ಮನೆಗೆ ಸಮೀಪದ ಬ್ಯಾಂಕ್‌ನಲ್ಲಿ ಎಫ್.ಡಿ. ಮಾಡಿ. ಮೂರು ತಿಂಗಳಿಗೆ ಒಮ್ಮೆ ಬಡ್ಡಿ ಪಡೆಯಿರಿ. ಈ ಎಲ್ಲ ಹೂಡಿಕೆಗಳು ಭದ್ರವಾಗಿವೆ. ಕಮಿಷನ್, ಹೆಚ್ಚಿನ ಬಡ್ಡಿ ವರಮಾನ, ಉಡುಗೊರೆ ಆಸೆ ತೋರಿಸಿ ದಾರಿ ತಪ್ಪಿಸುವವರಿದ್ದಾರೆ, ಜಾಗ್ರತೆ. ನೀವು ಖಾತೆ ಹೊಂದಿದ ಬ್ಯಾಂಕ್‌ನಲ್ಲಿ ₹ 3 ಲಕ್ಷ ಮೊತ್ತದ ಆರೋಗ್ಯ ವಿಮೆಯನ್ನು ನೀವು, ನಿಮ್ಮ ಹೆಂಡತಿ ಸೇರಿ ಫ್ಲೋಟರ್ ಪಾಲಿಸಿ ಮಾಡಿರಿ. ವಾರ್ಷಿಕ ಪ್ರೀಮಿಯಂ ಮೊತ್ತ ₹ 6 ಸಾವಿರದಿಂದ ₹ 8 ಸಾವಿರ ಇರಬಹುದು. ನಿಮ್ಮ ಸ್ಥಿರ ಆಸ್ತಿ-ಮನೆ ವಿಚಾರದಲ್ಲಿ ಉಯಿಲನ್ನು ಮಗಳ ಹೆಸರಿನಲ್ಲಿ ಬರೆಯಿರಿ. ನಿಮ್ಮ ನಿವೃತ್ತ ಜೀವನ ಸುಖಮಯವಾಗಿರಲಿ ಎಂದು ಹಾರೈಸುತ್ತೇನೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-56001.
ಇ-ಮೇಲ್: businessdesk@prajavani.co.in

ಆರೋಪಗಳ ವಜಾ ಕೋರಿದ್ದ ನೀರವ್ ಮೋದಿ ಅರ್ಜಿ ತಿರಸ್ಕಾರ

ವಾಷಿಂಗ್ಟನ್ (ಪಿಟಿಐ): ತಮ್ಮ ವಿರುದ್ಧ ಹೊರಿಸಲಾದ ವಂಚನೆ ಆರೋಪಗಳನ್ನು ವಜಾ ಮಾಡಬೇಕು ಎಂದು ಕೋರಿ ಉದ್ಯಮಿ ನೀರವ್ ಮೋದಿ ಮತ್ತು ಅವರ ಇಬ್ಬರು ಸಹಚರರು ಸಲ್ಲಿಸಿದ್ದ ಅರ್ಜಿಗಳನ್ನು, ದಿವಾಳಿ ಸಂಬಂಧಿತ ಪ್ರಕರಣಗಳ ವಿಚಾರಣೆ ನಡೆಸುವ ಸ್ಥಳೀಯ ನ್ಯಾಯಾಲಯ ತಿರಸ್ಕರಿಸಿದೆ.

ನೀರವ್ ಮೋದಿ ಮತ್ತು ಸಹಚರರು ಈ ಹಿಂದೆ ಪರೋಕ್ಷವಾಗಿ ಮಾಲೀಕತ್ವ ಹೊಂದಿದ್ದ ಮೂರು ಕಂಪನಿಗಳಿಗೆ ನೇಮಕವಾಗಿದ್ದ ಪ್ರವರ್ತಕರು ಈ ಆರೋಪ ಹೊರಿಸಿದ್ದರು.

50 ವರ್ಷದ ಮೋದಿ ಪರೋಕ್ಷವಾಗಿ ಮಾಲೀಕತ್ವ ಹೊಂದಿದ್ದ ಕಂಪನಿಗಳಾದ -ಫೈರ್‌ಸ್ಟಾರ್ ಡೈಮಂಡ್, ಫ್ಯಾಂಟಸಿ ಐಎನ್‌ಸಿ, ಎ ಜ್ಯಾಫೆ-ಗೆ ಟ್ರಸ್ಟಿ ಆಗಿ ಕೋರ್ಟ್ ನೇಮಕ ಮಾಡಿದ್ದ ರಿಚರ್ಡ್ ಲೆವಿನ್, ನ್ಯೂಯಾರ್ಕ್‌ನ ಕೋರ್ಟ್‌ನಲ್ಲಿ ಈ ಕುರಿತು ಆರೋಪ ಹೊರಿಸಿದ್ದರು.

ನೀರವ್ ಮೋದಿ ಮತ್ತವರ ಸಹಚರರಾದ ಮಿಹಿರ್ ಬನ್ಸಾರಿ, ಅಜಯ್ ಗಾಂಧಿ ಅವರಿಂದ, ಸಾಲ ನೀಡಿದ್ದವರಿಗೆ ಪರಿಹಾರವಾಗಿ ಕನಿಷ್ಠ 15 ಮಿಲಿಯನ್ ಡಾಲರ್ (ಸುಮಾರು ₹ 112 ಕೋಟಿ) ಪರಿಹಾರ ಕೊಡಿಸಬೇಕು ಎಂದು ಲೆವಿನ್ ಅವರು ಕೋರಿದ್ದರು.

ಮಲೆನಾಡು ಉತ್ಪನ್ನಗಳ ಮೌಲ್ಯವರ್ಧಿಸಿದ 'ರಾ ಗ್ರ್ಯಾನ್ಯುಲ್ಸ್'

• ಚಂದ್ರಹಾಸ ಹಿರೇಮಳಲಿ



ಎಚ್‌.ಎಸ್‌ ಕಾರ್ತಿಕ್



ರಾ ಗ್ರ್ಯಾನ್ಯುಲ್ಸ್ ಉತ್ಪನ್ನಗಳು

ಶಿವಮೊಗ್ಗ: ಲಾಕ್‌ಡೌನ್ ಸಮಯದಲ್ಲಿ ಊರಿಗೆ ಮರಳಿದ ಸಾಫ್ಟ್‌ವೇರ್ ಎಂಜಿನಿಯರೊಬ್ಬರು ಬಿಡುವಿನ ಸಮಯದಲ್ಲಿ ಮಲೆನಾಡಿನ ಉತ್ಪನ್ನಗಳನ್ನು ಸ್ನೇಹಿತರಿಗೆ, ಸಂಬಂಧಿಕರಿಗೆ ತಲುಪಿಸಲು ಹುಟ್ಟುಹಾಕಿದ 'ರಾ ಗ್ರ್ಯಾನ್ಯುಲ್ಸ್' ಸಂಸ್ಥೆ ಒಂದೇ ವರ್ಷದ ಅವಧಿಯಲ್ಲಿ ಜನಮನ್ನಣೆ ಗಳಿಸಿದೆ.

ಸಾಗರ ತಾಲ್ಲೂಕಿನ ಹಂಸಗಾರುವಿನ ಎಚ್‌.ಎಸ್‌. ಕಾರ್ತಿಕ್ ಬೆಂಗಳೂರಿನಲ್ಲಿ 12 ವರ್ಷಗಳಿಂದ ಖಾಸಗಿ ಕಂಪನಿಯೊಂದರಲ್ಲಿ ದುಡಿಯುತ್ತಿದ್ದಾರೆ. 2020ರ ಮಾರ್ಚ್ ನಂತರ ಲಾಕ್‌ಡೌನ್ ಕಾರಣದಿಂದಾಗಿ ಊರಿನಿಂದಲೇ ಕಂಪನಿ ಕೆಲಸ ಮಾಡುತ್ತಾರೆ. ಆಗ ಕರೆಕೈ, ತಲವಾಟದ ಕೆ.ಜಿ. ಪ್ರಶಾಂತ್ ಪರಿಚಯವಾಯಿತು. ಮಲೆನಾಡಿನಲ್ಲಿ ಸಿಗುವ ನೈಸರ್ಗಿಕ ಜೇನುತುಪ್ಪ ಸಂಗ್ರಹಿಸಿ ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದ ಅವರ ಬಳಿ ಚರ್ಚಿಸಿದಾಗ ಮಲೆನಾಡಿನ ಎಷ್ಟೋ ಉತ್ಪನ್ನಗಳು ವ್ಯರ್ಥವಾಗುತ್ತಿರುವ ವಿಷಯ ತಿಳಿಯಿತು. ಮಲೆನಾಡಿನ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ದೊರಕಿಸಲು ಇಬ್ಬರೂ ಸೇರಿ ಹೊಸ ಸಂಸ್ಥೆ ಹುಟ್ಟುಹಾಕಿದ್ದಾರೆ.

ಶರಾವತಿ ಕಣಿವೆ ಪ್ರದೇಶಗಳಲ್ಲಿ ಸಿಗುವ ನೈಸರ್ಗಿಕ ಜೇನು, ಕೋಕಂ, ನೆಲ್ಲಿಕಾಯಿ, ನೇರಳೆ, ನನ್ನಾರಿ, ಒಂದೆಲಗದ ಆರೋಗ್ಯ ವರ್ಧಕ ಪೇಯಗಳು ಹಾಗೂ ಹಶಿಡಿ ಕೆಂಪು ಅಕ್ಕಿಯನ್ನು ರಾ ಗ್ರ್ಯಾನ್ಯುಲ್ಸ್ ಹೆಸರಲ್ಲಿ ಪ್ಯಾಕ್ ಮಾಡಿ ಜನರಿಗೆ ತಲುಪಿಸಲು ಆರಂಭಿಸಿದರು. ಮೂರು ಉತ್ಪನ್ನಗಳಿಂದ ಆರಂಭವಾದ ವ್ಯವಹಾರ ಇಂದು 30 ಉತ್ಪನ್ನಗಳಿಗೆ ತಲುಪಿದೆ. ಲವಂಗ, ಕಾಳು ಮೆಣಸು, ಅರಿಶಿನ, ಸೂಜಿ ಮೆಣಸು, ಜಾಯಿಪತ್ರೆ, ಅಂಜೂರ ಲೇಹ್ಯ, ಸುಗಂಧ ಬೇರುಗಳು, ಜೋನಿಬೆಲ್ಲ, ಅಪ್ಪೆಮಿಡಿ ಉಪ್ಪಿನ ಕಾಯಿ ಮಾರಾಟ ಮಾಡುತ್ತಿದ್ದಾರೆ.

'ಕಂಪನಿಗೆ ರೂಪುರೇಷೆ ನೀಡಲು ಎಂಟು ತಿಂಗಳು ಸಮಯ ತೆಗೆದುಕೊಂಡೆವು. ₹ 6 ಲಕ್ಷ ಬಂಡವಾಳದಲ್ಲಿ ಆರಂಭಿಸಿದ ಕಂಪನಿಯ ಉತ್ಪನ್ನಗಳಿಗೆ ಈಗ ಬೆಂಗಳೂರು, ಮೈಸೂರು ಸೇರಿ ಹಲವು ಜಿಲ್ಲೆಗಳಿಂದ ಬೇಡಿಕೆ ಬರುತ್ತಿದೆ. ರೊಟ್ಟಿ, ಚಪಾತಿಗಳಂತೆ ಬಳಸಬಹುದಾದ ಬಾಳೆಕಾಯಿ ಪುಡಿಯ ಉತ್ಪನ್ನ ಬಾಕಾಹು, ಬಾಳೆ ಹಣ್ಣಿನ ಸುಖೇಲಿ, ಇದ್ದಿಲಿನ ಸೋಪಿಗೆ ಭಾರಿ ಬೇಡಿಕೆ ಇದೆ. ಪ್ಯಾಕೇಜ್, ಕೊರಿಯರ್‌ಗೆ ಹೆಚ್ಚು ವೆಚ್ಚವಾಗುತ್ತಿದೆ. ಸಾಗರ ಸಮೀಪದ ತಾಳಗುಪ್ಪದಲ್ಲಿ ಮಳಿಗೆ ತೆರೆದಿದ್ದೇವೆ. ವ್ಯವಹಾರ ಹೆಚ್ಚಿದಷ್ಟು ಅದರ ಲಾಭ ಗ್ರಾಹಕರಿಗೆ ವರ್ಗಾಯಿಸುವ ಚಿಂತನೆ ಇದೆ' ಎನ್ನುತ್ತಾರೆ ಕಾರ್ತಿಕ್ ಮತ್ತು ಪ್ರಶಾಂತ್.

ವಿಶ್ವ ಚಿನ್ನ ಸಮಿತಿ ವರದಿ: ಹಣದುಬ್ಬರ ಹೆಚ್ಚಾದಾಗ ಚಿನ್ನಕ್ಕೆ ಬೇಡಿಕೆ ಜಾಸ್ತಿ!

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೇಶದಲ್ಲಿ ಚಿನ್ನಕ್ಕೆ ಬೇಡಿಕೆ ಹೆಚ್ಚಲು ಕಾರಣವಾಗುವ ಅಂಶಗಳು ಯಾವುವು ಎಂಬ ಬಗ್ಗೆ ವಿಶ್ವ ಚಿನ್ನ ಸಮಿತಿಯು ವರದಿಯನ್ನು ಬಿಡುಗಡೆ ಮಾಡಿದ್ದು, ದೇಶದ ತಲಾವಾರು ಆದಾಯದಲ್ಲಿ ಶೇಕಡ 1ರಷ್ಟು ಹೆಚ್ಚಳ ಆದರೆ, ಚಿನ್ನದ ಬೇಡಿಕೆಯು ಶೇಕಡ 0.9ರಷ್ಟು ಏರಿಕೆ ಕಾಣುತ್ತದೆ ಎಂದು ತಿಳಿಸಿದೆ.

ದೇಶದಲ್ಲಿ ಹಣದುಬ್ಬರ ಪ್ರಮಾಣವು ಶೇ 1ರಷ್ಟು ಹೆಚ್ಚಳ ಕಂಡಾಗ, ಚಿನ್ನದ ಬೇಡಿಕೆಯು ಶೇ 2.6ರಷ್ಟು ಹೆಚ್ಚಳ ಆಗುತ್ತದೆ. ಚಿನ್ನದ ಬೆಲೆಯು ರೂಪಾಯಿ ಲೆಕ್ಕದಲ್ಲಿ ಶೇ 1ರಷ್ಟು ಹೆಚ್ಚಾದರೆ, ಚಿನ್ನದ ಬೇಡಿಕೆಯು ಶೇ 0.4ರಷ್ಟು ಇಳಿಕೆ ಕಾಣುತ್ತದೆ. ಹೂಡಿಕೆದಾರರು ಹಣದುಬ್ಬರ ಹೆಚ್ಚಳದ ಪರಿಣಾಮಗಳಿಂದ ರಕ್ಷಣೆ ಪಡೆಯಲು ಚಿನ್ನ ಖರೀದಿಗೆ ಮೊರೆ ಹೋಗುತ್ತಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಚಿನ್ನದ ಆಮದು ಮೇಲಿನ ಸುಂಕ ಹಾಗೂ ಸರ್ಕಾರ ವಿಧಿಸುವ ಇತರ ತೆರಿಗೆಗಳು ಬೇಡಿಕೆಯ ಮೇಲೆ ದೀರ್ಘಾವಧಿ ಪರಿಣಾಮ ಉಂಟುಮಾಡುತ್ತವೆ.

1990ರಿಂದ 2020ರವರೆಗಿನ ಅಂಕಿ- ಅಂಶಗಳನ್ನು ಪರಿಶೀಲಿಸಿ ಸಮಿತಿಯು ಈ ವರದಿಯನ್ನು ಸಿದ್ಧಪಡಿಸಿದೆ. ಬೆಲೆಯಲ್ಲಿನ ವ್ಯತ್ಯಾಸಗಳು ಚಿನ್ನದ ಬೇಡಿಕೆಯ ಮೇಲೆ ತಕ್ಷಣದ ಪರಿಣಾಮವನ್ನು ಬೀರುತ್ತವೆ. ಚಿನ್ನದ ಬೆಲೆಯು ಶೇ 1ರಷ್ಟು ಇಳಿಕೆಯಾದರೆ, ಬೇಡಿಕೆಯು ಶೇ 1.2ರಷ್ಟು ಏರಿಕೆ ಕಾಣುತ್ತದೆ.

2012ರ ನಂತರದಲ್ಲಿ ಆಮದು ಸುಂಕ ಪ್ರಮಾಣವನ್ನು ಹೆಚ್ಚಿಸಿದ ಪರಿಣಾಮವಾಗಿ ಚಿನ್ನದ ಬೇಡಿಕೆಯು ಪ್ರತಿವರ್ಷ ಶೇ 1.2ರಂತೆ ತಗ್ಗಿದೆ. ದೇಶದಲ್ಲಿ ಮುಂಗಾರು ಕೂಡ ಚಿನ್ನದ ಬೇಡಿಕೆ ಮೇಲೆ ತುಸು ಪರಿಣಾಮ ಬೀರುತ್ತದೆ. ಮುಂಗಾರು ಪ್ರಮಾಣದಲ್ಲಿ ಶೇ 1ರಷ್ಟು ಹೆಚ್ಚಳವಾದರೆ, ಚಿನ್ನದ ಬೇಡಿಕೆಯು ಶೇ 0.2ರಷ್ಟು ಜಾಸ್ತಿ ಆಗುತ್ತದೆ.

'ವರದಿಯಲ್ಲಿ ಇರುವ ಅಂಶಗಳು ಚಿನ್ನ ಉದ್ಯಮಕ್ಕೆ ಹೊಸ ಕಾರ್ಯತಂತ್ರ ರೂಪಿಸಲು, ಬೇಡಿಕೆ ಸೃಷ್ಟಿಸಲು ಸಹಾಯ ಆಗುತ್ತದೆ ಎಂಬ ನಂಬಿಕೆ ನಮಗೆ ಇದೆ' ಎಂದು ವಿಶ್ವ ಚಿನ್ನ ಸಮಿತಿಯ ಭಾರತದ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸೋಮಸುಂದರಂ ಪಿ.ಆರ್. ಹೇಳಿದ್ದಾರೆ.

ಚಿನ್ನದ ಬೆಲೆ ₹ 256 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಮಂಗಳವಾರ 10 ಗ್ರಾಂಗೆ ₹ 256ರಷ್ಟು ಹೆಚ್ಚಳ ಆಗಿದೆ.

ಪ್ರತಿ 10 ಗ್ರಾಂ ಚಿನ್ನವು ₹ 46,580ರಂತೆ ಮಾರಾಟವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಲ್ಲಿ ಆಗಿರುವ ಏರಿಕೆಯು ದೇಶಿ ಮಾರುಕಟ್ಟೆಯಲ್ಲಿಯೂ ಪ್ರತಿಫಲಿಸಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿಯ ಬೆಲೆಯಲ್ಲಿ ಕೆ.ಜಿ.ಗೆ ₹ 188ರಷ್ಟು ಹೆಚ್ಚಳ ಆಗಿದೆ. ಕೆ.ಜಿ. ಬೆಳ್ಳಿಯು ₹ 62,328ರಂತೆ ಮಾರಾಟವಾಗಿದೆ.

ಹಿಂದುಸ್ತಾನ್ ಯೂನಿಲಿವರ್ ಲಾಭ ಶೇ 10.7ರಷ್ಟು ಏರಿಕೆ

ನವದೆಹಲಿ (ಪಿಟಿಐ): ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ (ಎಫ್‌ಎಂಸಿಜಿ) ಕಂಪನಿ ಹಿಂದುಸ್ತಾನ್ ಯೂನಿಲಿವರ್, ಸೆಪ್ಟೆಂಬರ್ ತ್ರೈಮಾಸಿಕದಲ್ಲಿನ ನಿವ್ವಳ ಲಾಭದಲ್ಲಿ ಶೇಕಡ 10.69ರಷ್ಟು ಏರಿಕೆ ದಾಖಲಿಸಿದೆ. ಕಂಪನಿಯು ₹ 2,185 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 1,974 ಕೋಟಿ ಲಾಭ ಕಂಡಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಆದಾಯದಲ್ಲಿ ಶೇ 11.31ರಷ್ಟು ಹೆಚ್ಚಳ ಆಗಿದ್ದು, ₹ 12,812 ಕೋಟಿಗೆ ತಲುಪಿದೆ ಎಂದು ಕಂಪನಿಯು ಷೇರು ಮಾರುಕಟ್ಟೆಗೆ ಮಾಹಿತಿ ನೀಡಿದೆ.

ಎಲ್‌ಐಸಿ ಕಚೇರಿಗೆ ಕರಾಡ್ ಭೇಟಿ

ಬೆಂಗಳೂರು: ಹಣಕಾಸು ಸೇವೆಗಳ ಇಲಾಖೆಯ ರಾಜ್ಯ ಸಚಿವ ಡಾ. ಭಾಗವತ್ ಕೃಷ್ಣರಾವ್ ಕರಾಡ್ ಅವರು ಮುಂಬೈನಲ್ಲಿ ಇರುವ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಕೇಂದ್ರ ಕಚೇರಿಗೆ ಸೋಮವಾರ ಭೇಟಿ ನೀಡಿ, ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದರು. ಜಾಗತಿಕ ಮಟ್ಟದಲ್ಲಿ ವಿಮಾ ಬ್ರ್ಯಾಂಡ್‌ಗಳ ನಡುವೆ ಎಲ್‌ಐಸಿಯು ಮೊದಲ ಸ್ಥಾನ ಪಡೆಯಬೇಕು ಎಂದು ಸಚಿವರು ಆಶಿಸಿದರು. ಎಲ್‌ಐಸಿ ಅಧ್ಯಕ್ಷ ಎಂ.ಆರ್. ಕುಮಾರ್ ಮತ್ತು ನಿಗಮದ ಹಿರಿಯ ಅಧಿಕಾರಿಗಳು ಸಚಿವರ ಭೇಟಿ ಸಂದರ್ಭದಲ್ಲಿ ಹಾಜರಿದ್ದರು.

ಬ್ಯಾರಿಂಗ್ಟನ್ ಅಬ್ಬರ: ಸ್ಕಾಟ್ಲೆಂಡ್‌ಗೆ ಜಯ

ಅಲ್ ಅಮೆರತ್ (ಪಿಟಿಐ): ರಿಚಿ ಬ್ಯಾರಿಂಗ್ಟನ್ ಅಬ್ಬರದ ಬ್ಯಾಟಿಂಗ್ ಬಲದಿಂದ ಸ್ಕಾಟ್ಲೆಂಡ್ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ರಾಥಮಿಕ ಸುತ್ತಿನಲ್ಲಿ ಜಯ ಸಾಧಿಸಿತು.

ಮಂಗಳವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವು 17 ರನ್‌ಗಳಿಂದ ಪಪುವಾ ನ್ಯೂಗಿನಿ ವಿರುದ್ಧ ಜಯಿಸಿತು. ಟೂರ್ನಿಯಲ್ಲಿ ತಂಡಕ್ಕೆ ಇದು ಎರಡನೇ ಜಯ. ನಾಲ್ಕು ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿದೆ.

ಟಾಸ್ ಗೆದ್ದ ಸ್ಕಾಟ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಮುನ್ಸಿ (15) ಮತ್ತು ನಾಯಕ ಕೊಯಿಜೆರ್ (6) ಎಡವಿದರು. ಆದರೆ, ಮ್ಯಾಥ್ಯೂ ಕ್ರಾಸ್ (45;36ಎ, 2ಬೌಂಡರಿ, 2ಸಿಕ್ಸರ್) ಮತ್ತು ರಿಚಿ ಬ್ಯಾರಿಂಗ್ಟನ್ (70;49ಎಸೆತ, 6ಬೌಂಡರಿ, 3ಸಿಕ್ಸರ್) ಮೂರನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 165 ರನ್‌ಗಳನ್ನು ಗಳಿಸಿತು. ನ್ಯೂಗಿನಿ ತಂಡದ ಕಬುವಾ ಮೊರಿಯಾ (31ಕ್ಕೆ4) ಮತ್ತು ಶಾಡ್ ಸೊಪರ್ (24ಕ್ಕೆ3) ಉತ್ತಮ ಬೌಲಿಂಗ್ ಮಾಡಿದರು.

ಗುರಿ ಬೆನ್ನಟ್ಟಿದ ನ್ಯೂಗಿನಿ,19.3 ಓವರ್ ಗಳಲ್ಲಿ 148 ರನ್ ಗಳಿಸಲಷ್ಟೇ ಶಕ್ತವಾಯಿತು. ಸ್ಕಾಟ್ಲೆಂಡ್ ತಂಡದ ಜೋಶ್ ಡೆವ್ವಿ (18ಕ್ಕೆ4) ಉತ್ತಮ ಬೌಲಿಂಗ್ ಮಾಡಿದರು. ನ್ಯೂಗಿನಿ ತಂಡದ ನಾರ್ಮನ್ ವನುವ (47 ರನ್) ಮಾಡಿದ ಹೋರಾಟ ಫಲ ನೀಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 165 (ಮ್ಯಾಥ್ಯೂ ಕ್ರಾಸ್ 45, ರಿಚಿ ಬ್ಯಾರಿಂಗ್ಟನ್ 70, ಕಬುವಾ ಮೊರಿಯಾ 31ಕ್ಕೆ4, ಶಾಡ್ ಸೊಪರ್ 24ಕ್ಕೆ3), ಪಪುವಾ ನ್ಯೂಗಿನಿ: 19.3 ಓವರ್‌ಗಳಲ್ಲಿ 148 (ಸೆಸೆ ಬಾವು 24, ನಾರ್ಮನ್ ವಾನುವ 47, ಕಿಪ್ಲಿನ್ ಡೊರಿಗಾ 18, ಶಾಡ್ ಸೊಪರ್ 16, ಜೋಶ್ ಡೇವಿ18ಕ್ಕೆ4) ಫಲಿತಾಂಶ: ಸ್ಕಾಟ್ಲೆಂಡ್ ತಂಡಕ್ಕೆ 17 ರನ್‌ಗಳ ಜಯ.

ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್: ಆಸ್ಟ್ರೇಲಿಯಾ ಎದುರು ಭಾರತ ತಂಡದ ಅಭ್ಯಾಸ ಪಂದ್ಯ ಇಂದು

ಬ್ಯಾಟಿಂಗ್ ಕ್ರಮಾಂಕ ನಿರ್ಣಯದ ಕಣ

ದುಬೈ(ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟಿಂಗ್ ಜೋಡಿಯ ಸಮಸ್ಯೆ ಬಗೆಹರಿದಿದೆ. ಮಧ್ಯಮ ಕ್ರಮಾಂಕವನ್ನು ಸಿದ್ಧಗೊಳಿಸುವ ಸವಾಲು ಇದೆ.

ಬುಧವಾರ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಅಭ್ಯಾಸ ಪಂದ್ಯದಲ್ಲಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವತ್ತ ನಾಯಕ ವಿರಾಟ್ ಕೊಹ್ಲಿ ಚಿತ್ತ ನೆಟ್ಟಿದ್ದಾರೆ. ಸೋಮವಾರ ಇಂಗ್ಲೆಂಡ್ ಎದುರು ಭರ್ಜರಿ ಜಯ ಸಾಧಿಸಿದ ಭಾರತ ತಂಡವು ಮೊದಲ ಮೂರು ಕ್ರಮಾಂಕವನ್ನು ನಿರ್ಧರಿಸಿದೆ. ರೋಹಿತ್ ಶರ್ಮಾ ಮತ್ತು ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸಲಿದ್ದು, ಮೂರನೇ ಕ್ರಮಾಂಕದಲ್ಲಿ ನಾಯಕ ಕೊಹ್ಲಿ ಕ್ರೀಸ್‌ಗೆ ಬರಲಿದ್ದಾರೆ.

ರಿಷಭ್ ಪಂತ್ ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆಯುವ ಎಲ್ಲ ಸಾಧ್ಯತೆಗಳೂ ಇವೆ. ಇಂಗ್ಲೆಂಡ್ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಭರ್ಜರಿ 70 ರನ್‌ಗಳನ್ನು ಗಳಿಸಿದ್ದ ಇಶಾನ್ ಕಿಶನ್ ಅವಕಾಶ ಪಡೆಯುವರೇ ಎಂಬ ಕುತೂಹಲವೂ ಇದೆ.

ಆದರೆ, ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಲಯಕ್ಕೆ ಮರಳಿಲ್ಲ. ಅಲ್ಲದೇ ಅವರು ಬೌಲಿಂಗ್ ಮಾಡುತ್ತಿಲ್ಲ. ಇದರಿಂದಾಗಿ ಅವರನ್ನು ಕಣಕ್ಕಿಳಿಸುವ ಅನುಮಾನವಿದೆ. ಅವರಿಲ್ಲದಿದ್ದರೆ ತಂಡಕ್ಕೆ ಆರನೇ ಬೌಲರ್ ಅನುಪಸ್ಥಿತಿ ಕಾಡಲಿದ್ದು, ಶಾರ್ದೂಲ್ ಠಾಕೂರ್ ಅವಕಾಶ ಪಡೆಯಬಹುದು. ರಾಹುಲ್ ಚಾಹರ್‌ಗಿಂತ ರವೀಂದ್ರ ಜಡೇಜ ಅವರನ್ನು ಕಣಕ್ಕಿಳಿಸುವುದು ಬಹುತೇಕ ಖಚಿತ. ಮೊದಲ ಅಭ್ಯಾಸ ಪಂದ್ಯದಲ್ಲಿ ರೋಹಿತ್ ವಿಶ್ರಾಂತಿ ಪಡೆದಿದ್ದರು. ಆದರೆ, ಬುಧವಾರ ಅವರು ಕಣಕ್ಕಿಳಿದು ಅಭ್ಯಾಸ ನಡೆಸಲಿದ್ದಾರೆ ಎಂದು ತಂಡದ ಮೂಲಗಳು ಸ್ಪಷ್ಟಪಡಿಸಿವೆ.

ಮೊಹಮ್ಮದ್ ಶಮಿ ಮೂರು ವಿಕೆಟ್ ಪಡೆದರೂ ಹೆಚ್ಚು ರನ್‌ಗಳನ್ನು ಕೊಟ್ಟಿದ್ದಾರೆ. ಭುವನೇಶ್ವರ್ ಕುಮಾರ್, ಜಸ್‌ಪ್ರೀತ್ ಬೂಮ್ರಾ ತಮ್ಮ ಬೌಲಿಂಗ್ ಕೌಶಲಗಳನ್ನು ಒರೆಗೆ ಹಚ್ಚಲು ಇದು ಮತ್ತೊಂದು ಅವಕಾಶವಾಗಲಿದೆ. ಆಸ್ಟ್ರೇಲಿಯಾ ತಂಡವೂ ತನ್ನ ಮೊದಲ ಅಭ್ಯಾಸ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯಿಸಿದೆ. ಆದರೆ, ಆರಂಭಿಕ ಡೇವಿಡ್ ವಾರ್ನರ್ ಅವರು ಲಯದಲ್ಲಿರದಿರುವುದು ಚಿಂತೆಯ ವಿಷಯ. ಐಪಿಎಲ್‌ನಲ್ಲಿ ಮಿಂಚಿರುವ ಗ್ಲೆನ್ ಮ್ಯಾಕ್ಸ್‌ವೆಲ್, ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರ ಮೇಲೆ ನಾಯಕ ಆ್ಯರನ್ ಫಿಂಚ್ ಹೆಚ್ಚಿನ ನಿರೀಕ್ಷೆ ಇಟ್ಟಿದ್ದಾರೆ.


ರೋಹಿತ್ ಶರ್ಮಾ ಮತ್ತು ಕೆ.ಎಲ್. ರಾಹುಲ್


ದುಬೈನ ಮೇಡಮ್ ಟುಸ್ಸಾಡ್ಸ್ ವ್ಯಾಕ್ಸ್ ಮ್ಯೂಸಿಯಂನಲ್ಲಿ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರ ಮೇಣದ ಪ್ರತಿಮೆಯನ್ನು ಸೋಮವಾರ ಅನಾವರಣಗೊಳಿಸಲಾಯಿತು –ಎಎಫ್‌ಪಿ ಚಿತ್ರ

ತಂಡಗಳು:ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ರಾಹುಲ್ ಚಾಹರ್, ಆರ್. ಅಶ್ವಿನ್, ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬೂಮ್ರಾ, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ, ಶಾರ್ದೂಲ್ ಠಾಕೂರ್.
ಆಸ್ಟ್ರೇಲಿಯಾ: ಆ್ಯರನ್ ಫಿಂಚ್ (ನಾಯಕ), ಆಷ್ಟನ್ ಆಗರ್, ಪ್ಯಾಟ್ ಕಮಿನ್ಸ್ (ಉಪನಾಯಕ), ಜೋಶ್ ಹ್ಯಾಜಲ್‌ವುಡ್, ಜೋಶ್ ಇಂಗ್ಲಿಸ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಕೇನ್ ರಿಚರ್ಡ್ಸನ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೋಯಿನಿಸ್, ಮಿಚೆಲ್ ಸ್ವೆಪ್ಸನ್, ಮ್ಯಾಥ್ಯೂ ವೇಡ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ.
ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಶ್ರೀನಾಥ್, ಹರಭಜನ್‌ಗೆ ಎಂಸಿಸಿ ಆಜೀವ ಸದಸ್ಯತ್ವ


ಶ್ರೀನಾಥ್


ಹರಭಜನ್ ಸಿಂಗ್

ಲಂಡನ್ (ಪಿಟಿಐ):ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮತ್ತು ಹರಭಜನ್ ಸಿಂಗ್ ಅವರಿಗೆ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಆಜೀವ ಸದಸ್ಯತ್ವ ನೀಡಿ ಗೌರವಿಸಿದೆ.

ಎಂಸಿಸಿಯು ಮಂಗಳವಾರ 16 ಆಟಗಾರರಿಗೆ ಈ ಗೌರವ ನೀಡಿದೆ. ಆದರಲ್ಲಿ ಭಾರತದ ಈ ಇಬ್ಬರು ಖ್ಯಾತನಾಮ ಆಟಗಾರರೂ ಇದ್ದಾರೆ.

ಕನ್ನಡಿಗ ಶ್ರೀನಾಥ್ ಸದ್ಯ ಐಸಿಸಿ ರೆಫರಿಯಾಗಿದ್ದಾರೆ. ಕ್ರಿಕೆಟ್ ಕ್ಷೇತ್ರದ ಅಗ್ರಮಾನ್ಯ ವೇಗಿಗಳಲ್ಲಿ ಶ್ರೀನಾಥ್ ಕೂಡ ಒಬ್ಬರು. ಅವರು ಏಕದಿನ ಕ್ರಿಕೆಟ್‌ನಲ್ಲಿ 315 ಮತ್ತು ಟೆಸ್ಟ್‌ನಲ್ಲಿ 236 ವಿಕೆಟ್‌ಗಳನ್ನು ಗಳಿಸಿದ್ದಾರೆ. ಆಫ್‌ಸ್ಪಿನ್ನರ್ ಹರಭಜನ್ 103 ಟೆಸ್ಟ್‌ಗಳಲ್ಲಿ 417 ವಿಕೆಟ್ ಪಡೆದಿದ್ದಾರೆ. ಅತಿ ಹೆಚ್ಚು ವಿಕೆಟ್ ಪಡೆದಿರುವ ಭಾರತದ ಬೌಲರ್‌ಗಳಲ್ಲಿ ಮೂರನೇ ಸ್ಥಾನದಲ್ಲಿ ಪಂಜಾಬ್‌ನ ಹರಭಜನ್ ಇದ್ದಾರೆ.

‘ಟೆಸ್ಟ್ ಆಡುವ 12 ರಾಷ್ಟ್ರಗಳಲ್ಲಿ ಎಂಟು ಪ್ರತಿನಿಧಿಗಳು ಈ ವರ್ಷದ ಪಟ್ಟಿಯಲ್ಲಿದ್ದರು. ಆಧುನಿಕ ಕ್ರಿಕೆಟ್‌ನಲ್ಲಿ ಅಪ್ರತಿಮ ಸಾಧನೆ ಮಾಡಿದವರನ್ನು ಆಯ್ಕೆ ಮಾಡಲಾಗಿದೆ’ ಎಂದು ಎಂಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಇಂಗ್ಲೆಂಡ್‌ನ ಅಲೆಸ್ಟರ್ ಕುಕ್, ಇಯಾನ್ ಬೆಲ್ ಮತ್ತು ಮಾರ್ಕಸ್ ಟ್ರೆಸ್ಕೊಥಿಕ್, ಮಹಿಳಾ ತಂಡದ ವಿಕೆಟ್‌ಕೀಪರ್ ಸಾರಾ ಟೇಲರ್ ಪಟ್ಟಿಯಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ನಾಲ್ವರು ಆಟಗಾರರಾದ ಹಾಶೀಂ ಆಮ್ಲಾ, ಹರ್ಷಲ್ ಗಿಬ್ಸ್, ಜಾಕಸ್ ಕಾಲಿಸ್ ಮತ್ತು ಮಾರ್ನ್ ಮಾರ್ಕೆಲ್, ಆಸ್ಟ್ರೇಲಿಯಾದ ಆಟಗಾರ್ತಿ ಅಲೆಕ್ಸ್ ಬ್ಲ್ಯಾಕ್‌ವೆಲ್, ಡೆಮಿಯನ್ ಮಾರ್ಟಿನ್, ವೆಸ್ಟ್ ಇಂಡೀಸ್‌ನ ಇಯಾನ್ ಬಿಷಪ್, ಶಿವನಾರಾಯಣ್ ಚಂದ್ರಪಾಲ್ ಮತ್ತು ರಾಮನರೇಶ್ ಸರವಣ್ ಎಂಸಿಸಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ 433 ವಿಕೆಟ್‌ಗಳನ್ನು ಗಳಿಸಿರುವ ಶ್ರೀಲಂಕಾದ ರಂಗನಾ ಹೆರಾತ್, ನ್ಯೂಜಿಲೆಂಡ್ ಆಟಗಾರ್ತಿ ಸಾರಾ ಮೆಕ್‌ಗ್ಲೆಷನ್, ಜಿಂಬಾಬ್ವೆಯ ಆಲ್‌ರೌಂಡರ್ ಗ್ರ್ಯಾಂಟ್ ಫ್ಲವರ್ ಕೂಡ ಎಂಸಿಸಿ ಆಜೀವ ಸದಸ್ಯತ್ವ ಗೌರವಕ್ಕೆ ಭಾಜನರಾಗಿದ್ದಾರೆ.

ರಾಜ್ಯ ತಂಡಕ್ಕೆ ವೇದಾ ನಾಯಕಿ

ಬೆಂಗಳೂರು: ಅನುಭವಿ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಬಿಸಿಸಿಐ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡದ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಇದೇ 31ರಿಂದ ನಾಗಪುರದಲ್ಲಿ ಟೂರ್ನಿ ನಡೆಯಲಿದೆ.

ತಂಡ: ವೇದಾ ಕೃಷ್ಣಮೂರ್ತಿ (ನಾಯಕಿ), ದಿವ್ಯಾ ಜ್ಞಾನಾನಂದ (ಉಪನಾಯಕಿ), ರಕ್ಷಿತಾ ಕೃಷ್ಣಪ್ಪ, ಶುಭಾ ಸತೀಶ್, ಪ್ರತ್ಯೂಷಾ ಚಳ್ಳೂರು, ಮೋನಿಕಾ ಪಟೇಲ್, ರಾಮೇಶ್ವರಿ ಗಾಯಕವಾಡ, ಆಕಾಂಕ್ಷಾ ಕೊಹ್ಲಿ, ಪ್ರತ್ಯೂಷಾ ಕುಮಾರ್ (ವಿಕೆಟ್‌ಕೀಪರ್), ಸಂಜನಾ ಬಾತ್ನಿ (ವಿಕೆಟ್‌ಕೀಪರ್), ಸಹನಾ ಎಸ್ ಪವಾರ್, ಶ್ರೇಯಾಂಕಾ ಪಾಟೀಲ, ಚಂದು ವಿ. ವೃಂದಾ ದಿನೇಶ್, ಅದಿತಿ ರಾಜೇಶ್, ಅನಘಾ ಮುರಳಿ, ನಿಕಿ ಪ್ರಸಾದ್, ಸೌಮ್ಯಾ ಗೌಡ, ಶಿಶಿರಾ ಗೌಡ, ಅಫ್ಷೇರಾ ಬಾನು, ಮಮತಾ ಮಾಬೆನ್ (ಕೋಚ್), ರಚೆಲ್ ವಿನೋದ ಶೆಟ್ಟಿ (ಮ್ಯಾನೇಜರ್/ಸಹಾಯಕ ಕೋಚ್), ಎನ್. ಸಿಂಧು (ಫಿಸಿಯೊ), ಬಿ. ಹಿತೈಷಿ (ಸ್ಟ್ರೆಂಥ್–ಕಂಡಿಷನಿಂಗ್ ಕೋಚ್), ಮಾಲಾ ರಂಗಸ್ವಾಮಿ (ವಿಡಿಯೊ ಅನಾಲಿಸ್ಟ್).

ಸೋಷಿಯಲ್ ಕ್ರಿಕೆಟರ್ಸ್ ಚಾಂಪಿಯನ್

ಬೆಂಗಳೂರು: ಜಹೂರ್ ಫಾರೂಕಿ (19ಕ್ಕೆ3) ಬೌಲಿಂಗ್, ಅವಿನಾಶ್ ಡಿ. (35) ಮತ್ತು ರಿತೇಶ್ ಭಟ್ಕಳ (33) ಅವರ ಬ್ಯಾಟಿಂಗ್ ಬಲದಿಂದ ಸೋಷಿಯಲ್ ಕ್ರಿಕೆಟರ್ಸ್ ತಂಡವು ಕೆಎಸ್‌ಸಿಎ ಟಿ20 ಲೀಗ್‌ನಲ್ಲಿ ಪ್ರಶಸ್ತಿ ಜಯಿಸಿತು.

ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಫೈನಲ್ ಪಂದ್ಯದಲ್ಲಿ ಸೋಷಿಯಲ್ ಕ್ರಿಕೆಟರ್ಸ್ ತಂಡದವರು ವಲ್ಚರ್ಸ್ ಕ್ರಿಕೆಟ್ ಕ್ಲಬ್‌ಅನ್ನು 18 ರನ್‌ಗಳಿಂದ ಮಣಿಸಿದರು.

ವಲ್ಚರ್ಸ್ ಪರ ಅಭಿಮನ್ಯು ಮಿಥುನ್ (14ಕ್ಕೆ 3) ಹಾಗೂ ದರ್ಶನ್ ಎಂ.ಬಿ. (22ಕ್ಕೆ 3) ಮಾಡಿದ ಪರಿಣಾಮಕಾರಿ ಬೌಲಿಂಗ್ ಹಾಗೂ ಪ್ರವೀಣ್ ದುಬೆ (18ಕ್ಕೆ 2 ವಿಕೆಟ್ ಹಾಗೂ 28 ರನ್) ಅವರ ಆಲ್‌ರೌಂಡ್ ಆಟವು ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರ್: ಸೋಷಿಯಲ್ ಕ್ರಿಕೆಟರ್ಸ್: 19.1 ಓವರ್‌ಗಳಲ್ಲಿ 134 (ಆದರ್ಶ್ ಪ್ರಜ್ವಲ್ ಎಸ್. 26, ಅವಿನಾಶ್ ಡಿ. 35, ರಿತೇಶ್ ಭಟ್ಕಳ 33; ಅಭಿಮನ್ಯು ಮಿಥುನ್ 14ಕ್ಕೆ 3, ದರ್ಶನ್ ಎಂ.ಬಿ. 22ಕ್ಕೆ 3, ಪ್ರವೀಣ್ ದುಬೆ 18ಕ್ಕೆ 2). **ವಲ್ಚರ್ಸ್ ಕ್ರಿಕೆಟ್ ಕ್ಲಬ್:** 20 ಓವರ್‌ಗಳಲ್ಲಿ 8ಕ್ಕೆ 116 (ಶ್ರೀಜಿತ್ ಕೆ.ಎಲ್. 28, ಪ್ರವೀಣ್ ದುಬೆ 28; ಜಹೂರ್ ಫಾರೂಕಿ 19ಕ್ಕೆ 3, ವೈಶಾಖ್ ವಿ. 26ಕ್ಕೆ 2). ಫಲಿತಾಂಶ: ಸೋಷಿಯಲ್ ಕ್ರಿಕೆಟರ್ಸ್‌ಗೆ 18 ರನ್‌ಗಳ ಜಯ


ಪ್ರಶಸ್ತಿ ಗೆದ್ದ ಸೋಷಿಯಲ್ ಕ್ರಿಕೆಟರ್ಸ್ ತಂಡ: (ಎಡದಿಂದ: ನಿಂತವರು– ದಿನೇಶ್ವರ್, ಅಜಯ್, ಅಕ್ಷಯ್, ರಿತೇಶ್, ಅಪ್ಪಣ್ಣ, ಶ್ರೀಶ, ಜಹೂರ್, ಅವಿನಾಶ್, ವೈಶಾಖ್, ರಾಹುಲ್, ಆದಿತ್ಯ ಮತ್ತು ಶ್ರೀನಿವಾಸ್ (ಮಂಡಿಯೂರಿ ಕುಳಿತವರು– ಅನೀಶ್ ಗೌತಮ್, ಅಜಿತೇಶ್, ಅರವಿಂದ್, ಮಂಜುನಾಥ್, ಆದರ್ಶ್, ಪ್ರಮೋದ್ ಮತ್ತು ಸಿಯನ್– ಪ್ರಜಾವಾಣಿ ಚಿತ್ರ

ಶ್ರೀಲಂಕಾಕ್ಕೆ ಗೆಲುವಿನ ತವಕ

ಅಬುಧಾಬಿ (ಪಿಟಿಐ): ಎರಡನೇ ಜಯದ ತವಕದಲ್ಲಿರುವ ಮಾಜಿ ಚಾಂಪಿಯನ್ ಶ್ರೀಲಂಕಾ ತಂಡವು ಟಿ20 ವಿಶ್ವಕಪ್ ಟೂರ್ನಿಯ ‘ಎ’ ಗುಂಪಿನ ಪಂದ್ಯದಲ್ಲಿ ಬುಧವಾರ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಈ ಹಣಾಹಣಿಯಲ್ಲಿ ಜಯ ಸಾಧಿಸಿದ ತಂಡವು ಸೂಪರ್ 12 ಹಂತಕ್ಕೆ ಸಮೀಪಿಸಲಿದೆ.

ಉಭಯ ತಂಡಗಳು ಮೊದಲ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿದ್ದವು. ಶ್ರೀಲಂಕಾ ತಂಡವು ನಮೀಬಿಯಾ ಎದುರು ಹಾಗೂ ಐರ್ಲೆಂಡ್ ತಂಡ ನೆದರ್ಲೆಂಡ್ಸ್ ಎದುರು ಏಳು ವಿಕೆಟ್‌ಗಳಿಂದ ಗೆದ್ದಿವೆ.

ಪಂದ್ಯ ಆರಂಭ: ಸಂಜೆ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮತ್ತೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವು ನಬೀಯಾವನ್ನು ಎದುರಿಸಲಿದೆ. ಈ ಪಂದ್ಯವು ಮಧ್ಯಾಹ್ನ 3.30ಕ್ಕೆ ನಿಗದಿಯಾಗಿದೆ.

ಬಾಂಗ್ಲಾದೇಶ ಜಯಭೇರಿ

ಅಲ್ ಅಮೆರತ್: ಶಕೀಬ್ ಅಲ್ ಹಸನ್ (42 ರನ್, 3 ವಿಕೆಟ್) ಅವರ ಆಲ್‌ರೌಂಡ್ ಆಟದ ಬಲದಿಂದ ಬಾಂಗ್ಲಾದೇಶ, ಟಿ20 ವಿಶ್ವಕಪ್‌ನ ಪ್ರಾಥಮಿಕ ಸುತ್ತಿನ ಪಂದ್ಯದಲ್ಲಿ ಜಯಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ 26 ರನ್‌ಗಳಿಂದ ಒಮನ್ ತಂಡವನ್ನು ಸೋಲಿಸಿತು.

ಬಾಂಗ್ಲಾ ಸೂಪರ್ 12ರ ಹಂತಕ್ಕೆ ತಲುಪುವ ಅವಕಾಶ ಜೀವಂತವಾಗುಳಿಯಬೇಕಾದರೆ ಈ ಪಂದ್ಯದಲ್ಲಿ ಜಯಿಸುವುದು ಅನಿವಾರ್ಯವಾಗಿತ್ತು. ಮೊದಲು ಬ್ಯಾಟ್ ಮಾಡಿದ ಬಾಗ್ಲಾ, ಮೊಹಮ್ಮದ್ ನೈಮ್ ಅರ್ಧಶತಕ (64;50ಎ, 3ಬೌಂಡರಿ, 4ಸಿಕ್ಸರ್) ಮತ್ತು ಶಕೀಬ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 153 ರನ್ ಗಳಿಸಿತು. ಒಮನ್ ತಂಡದ ಬಿಲಾಲ್ ಖಾನ್ ಮತ್ತು ಫಯಾಜ್ ಭಟ್ ತಲಾ 3 ವಿಕೆಟ್ ಗಳಿಸಿದರು. ಗುರಿ ಬೆನ್ನತ್ತಿದ ಒಮನ್ ನಿಗದಿತ ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 127 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಜೀತೇಂದರ್ ಸಿಂಗ್ (40) ಹೋರಾಟ ವ್ಯರ್ಥವಾಯಿತು. ಮುಸ್ತಫಿಜುರ್ ರೆಹಮಾನ್ (36ಕ್ಕೆ 4) ಅವರು ಒಮನ್ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 153 (ಮೊಹಮ್ಮದ್ ನೈಮ್ 64, ಶಕೀಬ್ ಅಲ್ ಹಸನ್ 42, ಮೆಹಮುದುಲ್ಲಾ 17, ಬಿಲಾಲ್ ಖಾನ್ 18ಕ್ಕೆ3, ಕಲೀಮುಲ್ಲಾ 30ಕ್ಕೆ2, ಫಯಾಜ್ ಭಟ್30ಕ್ಕೆ3). ಒಮನ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 127 (ಜೀತೇಂದರ್ ಸಿಂಗ್ 40, ಕಶ್ಯಪ್ ಪ್ರಜಾಪತಿ 21, ಮೊಹಮ್ಮದ್ ನದೀಮ್ 14; ಮುಸ್ತಫಿಜುರ್ ರೆಹಮಾನ್ 36ಕ್ಕೆ 4, ಶಕೀಬ್ ಅಲ್ ಹಸನ್ 28ಕ್ಕೆ 3). ಫಲಿತಾಂಶ: ಬಾಂಗ್ಲಾಕ್ಕೆ 26 ರನ್ ಜಯ

ಮೈಸೂರು ರೇಸ್

ಲಾರ್ಡ್ ಕಮಾಂಡರ್ ಗೆಲ್ಲುವ ನಿರೀಕ್ಷೆ

ಮೈಸೂರು ಚಳಿಗಾಲದ ರೇಸ್‌ಗಳು ಬುಧವಾರ ಪ್ರಾರಂಭವಾಗಲಿದ್ದು, ದಿನದ ಪ್ರಧಾನ ಆಕರ್ಷಣೆ ಎಸ್.ಎಂ.ಅಟ್ಟೊಲಾಹಿ ಮೆಮೋರಿಯಲ್ ಟ್ರೋಫಿ ರೇಸ್‌ನಲ್ಲಿ ಲಾರ್ಡ್ ಕಮಾಂಡರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟಿಯಾ ಮಾರಿಯಾ 12, ಅಕ್ವಿಲಾ ಡಿ’ಓರೊ 6, ಕಮ್ ಅಲೈವ್ 7
2ನೇ ರೇಸ್: ಸಪ್ರೈಸ್ ಪ್ಯಾಕೇಜ್ 2, ಸ್ವಿಸ್ ಬೇ 12, ಇಟಾಲಿಯನ್ ಸ್ಟಾಲಿಯನ್ 1
3ನೇ ರೇಸ್: ರಾಯಲ್ ಕಮಾಂಡ್ 6, ದಿ ಥರ್ಟೀನ್ ಟ್ವೆಲ್ವ್ 2, ಅಬರ್ಲರ್ 1
4ನೇ ರೇಸ್: ಕ್ಯಾಲಿಫೋರ್ನಿಯಾ ಗೋಲ್ಡ್ 1, ರಾಯಲ್ ಡಿಸೈನ್ 4, ಗುಡ್ ಒಪಿನಿಯನ್ 2
5ನೇ ರೇಸ್: ಎಡ್ಡಿ ದಿ ಈಗಲ್ 3, ಕ್ರಿಮ್‌ಸನ್ 2, ದಿ ಥ್ರೀ ನೈನ್ 4,
6ನೇ ರೇಸ್: ಲಾರ್ಡ್ ಕಮಾಂಡರ್ 6, ಹುಕುಮ್ 10, ರ್‍ಯಾಪನ್ಜೆಲ್ 7
7ನೇ ರೇಸ್: ಆರೇಲಿಯಾ 9, ಆಫ್ರಿಕನ್ ಎಂಪರರ್ 3, ಸೆಫ್ಟಿನ 6
8ನೇ ರೇಸ್: ಬಯೋಮೆಟ್ರಿಕ್ 3, ಸ್ಟ್ಯಾಂಡ್‌ಔಟ್ 1, ಕಂಟ್ರೀಸ್ ಫೇಮ್ 4

ಉತ್ತಮ ಬೆಟ್: ಬಯೋಮೆಟ್ರಿಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಮನು ಅತ್ರಿ- ಪ್ರಣೀತ್‌ಗೆ ಸೋಲು

ಸಿಂಧು, ಶ್ರೀಕಾಂತ್ ಶುಭಾರಂಭ

ಆಡೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತದ ಪಿ.ವಿ.ಸಿಂಧು, ಮಾಜಿ ಚಾಂಪಿಯನ್ ಕಿದಂಬಿ ಶ್ರೀಕಾಂತ್ ಹಾಗೂ ಸಮೀರ್ ವರ್ಮಾ ಅವರು ಡೆನ್ಮಾರ್ಕ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮಂಗಳವಾರ ಶುಭಾರಂಭ ಮಾಡಿದರು.

ದೀರ್ಘ ವಿರಾಮದ ಬಳಿಕ ಕಣಕ್ಕಿಳಿದ ಎರಡು ಬಾರಿಯ ಒಲಿಂಪಿಕ್ಸ್ ಪದಕವಿಜೇತೆ, ಹಾಲಿ ವಿಶ್ವ ಚಾಂಪಿಯನ್ ಸಿಂಧು, ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 21-12, 21-10ರಿಂದ ಟರ್ಕಿಯ ನೆಸ್ಲಿಹಾನ್ ಯಿಗಿತ್ ಅವರ ಸವಾಲು ಮೀರಿದರು. ಕೇವಲ 30 ನಿಮಿಷಗಳಲ್ಲಿ ಭಾರತದ ಆಟಗಾರ್ತಿಗೆ ಜಯ ಒಲಿಯಿತು. ಮುಂದಿನ ಪಂದ್ಯದಲ್ಲಿ ಅವರು ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಅವರನ್ನು ಎದುರಿಸುವರು.

2017ರ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದ ಶ್ರೀಕಾಂತ್ ಅವರು, ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ 21-14, 21-11ರಿಂದ ಭಾರತದವರೇ ಆದ ಬಿ.ಸಾಯಿ ಪ್ರಣೀತ್ ಅವರನ್ನು ಮಣಿಸಿದರು. ಕೇವಲ 30 ನಿಮಿಷಗಳಲ್ಲಿ ಅವರಿಗೆ ಗೆಲುವು ಸಿಕ್ಕಿತು.

ಸಮೀರ್ ವರ್ಮಾ ಅವರು 21-17, 21-14ರಿಂದ ಥಾಯ್ಲೆಂಡ್‌ನ ಕುನ್ಲಾವುತ್ ವಿತಿದ್ಸನ್ ಎದುರು ಗೆದ್ದರು. 21ನೇ ರ್‍ಯಾಂಕಿನ ಆಟಗಾರನನ್ನು ಸಮೀರ್ 42 ನಿಮಿಷಗಳಲ್ಲಿ ಮಣಿಸಿದರು.

ಶ್ರೀಕಾಂತ್ ಅವರಿಗೆ ಮುಂದಿನ ಪಂದ್ಯದಲ್ಲಿ ಕಠಿಣ ಸವಾಲು ಎದುರಾಗುವ ನಿರೀಕ್ಷೆಯಿದೆ. ಅವರಿಗೆ ವಿಶ್ವದ ಅಗ್ರ ಕ್ರಮಾಂಕದ ಆಟಗಾರ, ಜಪಾನ್‌ನ ಕೆಂಟೊ ಮೊಮೊಟಾ ಮುಖಾಮುಖಿಯಾಗುವ ಸಾಧ್ಯತೆಯಿದೆ. ಸಮೀರ್ ಅವರು ಮುಂದಿನ ಸುತ್ತಿನಲ್ಲಿ ಡೆನ್ಮಾರ್ಕ್‌ನ ಆಂಡರ್ಸ್ ಆ್ಯಂಟನ್ಸೆನ್ ಅವರನ್ನು ಎದುರಿಸುವ ಸಾಧ್ಯತೆಯಿದೆ.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯೂ 23-21, 21-15ರಿಂದ ಇಂಗ್ಲೆಂಡ್‌ನ ಕ್ಯಾಲಮ್ ಹೆಮ್ಮಿಂಗ್ ಮತ್ತು ಸ್ಟೀವನ್ ಸ್ಟಾಲ್‌ವುಡ್ ಎದುರು ಜಯಿಸಿದರೆ, ಎಂ.ಆರ್.ಅರ್ಜುನ್–ಧೃವ ಕಪಿಲ 21-19, 21-15ರಿಂದ ಇಂಗ್ಲೆಂಡ್‌ನ ಬೆನ್ ಲೇನ್ ಮತ್ತು ಸೀನ್ ವೆಂಡಿ ಅವರಿಗೆ ಆಘಾತ ನೀಡಿದರು.

ಮನು ಅತ್ರಿ–ಬಿ.ಸಾಯಿ ಪ್ರಣೀತ್ ಅವರು 18-21, 11-21ರಿಂದ ಮಲೇಷ್ಯಾದ ಗೋ ಜೆ ಫೆಯ್ ಹಾಗೂ ನೂರ್ ಇಜ್ಜುದ್ದೀನ್ ಎದುರು ಸೋತರು.


ಪಿ.ವಿ.ಸಿಂಧು

ರಾಷ್ಟ್ರೀಯ ಜೂನಿಯರ್, ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್

ಶ್ರೀಹರಿ ದಾಖಲೆ ಮೀರಿದ ಸಂಭವ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಂಭವ್ ಆರ್. ಅವರು ಒಲಿಂಪಿಯನ್ ಶ್ರೀಹರಿ ನಟರಾಜ್ ಅವರ ಮೂರು ವರ್ಷಗಳ ಹಿಂದಿನ ದಾಖಲೆ ಮೀರಿದರು.

ಇಲ್ಲಿಯ ಬಸವನಗುಡಿ ಈಜು ಕೇಂದ್ರದಲ್ಲಿ ಆರಂಭವಾದ ರಾಷ್ಟ್ರೀಯ ಜೂನಿಯರ್ ಮತ್ತು ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನ 200 ಮೀ. ಫ್ರೀಸ್ಟೈಲ್ ವಿಭಾಗದ ಒಂದನೇ ಗುಂಪಿನಲ್ಲಿ ಚಿನ್ನದ ಪದಕ ಗಳಿಸಿದರು. ಸಂಭವ್ 1 ನಿಮಿಷ 53. 41 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಶ್ರೀಹರಿ ಅವರು 2018ರಲ್ಲಿ 1 ನಿಮಿಷ 53.54 ಸೆಕೆಂಡುಗಳಲ್ಲಿ ನಿಗದಿತ ಗುರಿ ಮುಟ್ಟಿದ್ದರು.

ಈ ವಿಭಾಗದಲ್ಲಿ ಕರ್ನಾಟಕದ ಅನೀಶ್ ಎಸ್. ಗೌಡ ಬೆಳ್ಳಿ ಗೆದ್ದರೆ, ಮಹಾರಾಷ್ಟ್ರದ ವೇದಾಂತ್ ಮಾಧವನ್ ಕಂಚು ತಮ್ಮದಾಗಿಸಿಕೊಂಡರು.

ಬಾಲಕಿಯರ 200 ಮೀ. ಫ್ರೀಸ್ಟೈಲ್ ಮೂರನೇ ಗುಂಪಿನಲ್ಲಿ ಸ್ಪರ್ಧಿಸಿದ್ದ ಧಿನಿಧಿ ದೇಸಿಂಗು ಕೂಡ 11 ವರ್ಷಗಳ ದಾಖಲೆಯನ್ನು ಅಳಿಸಿ ಹಾಕಿದರು. 2 ನಿಮಿಷ 14.94 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ 2010ರಲ್ಲಿ ಮೋನಿಕಾ ಗಾಂಧಿ ನಿರ್ಮಿಸಿದ್ದ ದಾಖಲೆ (2:17.52) ಅಳಿಸಿ ಹಾಕಿದರು.




ಸಂಭವ್ ಆರ್. ಅವರು ಗುರಿಯತ್ತ ಮುನ್ನುಗ್ಗಿದರು– ಪ್ರಜಾವಾಣಿ ಚಿತ್ರ/ಬಿ. ಎಚ್. ಶಿವಕುಮಾರ್

ಮೊದಲ ದಿನದ ಫಲಿತಾಂಶಗಳು: 200 ಮೀ. ಫ್ರೀಸ್ಟೈಲ್: ಬಾಲಕರ ಗುಂಪು 1: ಸಂಭವ್ ಆರ್ (ಕರ್ನಾಟಕ)–1 ಕಾಲ: 1:53.41 (ನೂತನ ದಾಖಲೆ), ಅನೀಶ್ ಎಸ್. ಗೌಡ (ಕರ್ನಾಟಕ)–2, ವೇದಾಂತ್ ಮಾಧವನ್ (ಮಹಾರಾಷ್ಟ್ರ)–3. ಗುಂಪು 2: ಪ್ರಾಂಜಲ್ ಪಾಂಡೆ (ಮಹಾರಾಷ್ಟ್ರ)–1, ಕಾಲ: 2:4.82, ಅನಂತಜೀತ್ ಮುಖರ್ಜಿ (ಕರ್ನಾಟಕ)–2, ರಿಷಭ್ ದಾಸ್ (ಮಹಾರಾಷ್ಟ್ರ)–3. ಗುಂಪು 3: ಯಜ್ಞ ಸಾಯಿ ಎಂ. (ಮಹಾರಾಷ್ಟ್ರ)–1, ಕಾಲ: 2:20.71, ತೇಜಸ್ ಕುಮಾರ್ ಟಿ.ಎಸ್. (ತೆಲಂಗಾಣ)–2, ರಕ್ಷಣ್ ಪಿ. (ಕರ್ನಾಟಕ)–3. ಗುಂಪು 4: ಶರಣ್ ಶ್ರೀಧರ್ (ಕರ್ನಾಟಕ)–1, ಕಾಲ: 2:24.39, ಕಾಬಿಲನ್ ಟಿ. (ತಮಿಳುನಾಡು)–2, ಇಶಾನ್ ಘೋಷ್ (ಬಂಗಾಳ)–3.

200 ಮೀ. ಫ್ರೀಸ್ಟೈಲ್:ಬಾಲಕಿಯರ ಗುಂಪು 1: ಆನ್ಯಾ ವಾಲಾ (ಮಹಾರಾಷ್ಟ್ರ)–1 ಕಾಲ: 2:9.86, ಕಿಯಾರ ಬೆಂಗೆರ (ಮಹಾರಾಷ್ಟ್ರ)–2, ಆಸ್ತಾ ಚೌಧರಿ (ಅಸ್ಸಾಂ)–3. ಗುಂಪು 2: ಆಹಿಕಾ ರಾಮಚಂದ್ರ–1 ಕಾಲ: 2:11.37, ಶಿರಿನ್–2 (ಇಬ್ಬರೂ ಕರ್ನಾಟಕ), ಅನನ್ಯಾ ರಾವತ್ (ದೆಹಲಿ)–3. ಗುಂಪು 3: ಧಿನಿಧಿ ದೇಶಿಂಗು (ಕರ್ನಾಟಕ)–1 ಕಾಲ: 2:14.94 (ನೂತನ ದಾಖಲೆ), ಅದಿತಿ ಹೆಗ್ಡೆ (ಮಹಾರಾಷ್ಟ್ರ)–2, ಶಕ್ತಿ ಈಶ್ವರ್ ಪ್ರಸಾದ್ (ತಮಿಳುನಾಡು)–3. ಗುಂಪು 5: ಅಲಿಸ್ಸಾ ಸ್ವಿಡಲ್ ರೆಗೊ 1, ಕಾಲ:2:33.65 , ತ್ರಿಶಾ ಸಿಂಧು–2 (ಇಬ್ಬರೂ ಕರ್ನಾಟಕ), ಜೋಯಾ ಜನ್ನತ್ (ಬಂಗಾಳ)–3.

200 ಮೀ. ವೈಯಕ್ತಿಕ ಮೆಡ್ಲೆ: ಬಾಲಕರ ಗುಂಪು 1: ಸ್ವದೇಶ್ ಮಂಡಲ್ (ಬಂಗಾಳ)–1, ಕಾಲ: 2:08.88 (ನೂತನ ದಾಖಲೆ), ಶೋನ್ ಗಂಗೂಲಿ (ಕರ್ನಾಟಕ)–2, ಕಲ್ಪ್ ಎಸ್. ಬೊಹ್ರಾ (ಕರ್ನಾಟಕ)–3. ಗುಂಪು 2: ಪವನ್ ಧನಂಜಯ್ (ಕರ್ನಾಟಕ)–1, ಕಾಲ: 2:19.30, ನವನೀತ್ ಆರ್. ಗೌಡ (ಕರ್ನಾಟಕ)–2, ಉತ್ಕರ್ಷ್ ಗೋರ್ (ಮಹಾರಾಷ್ಟ್ರ)–3. ಗುಂಪು 5: ಜಾಸ್ ಸಿಂಗ್ (ಕರ್ನಾಟಕ)–1, ಕಾಲ: 2:52.65, ಕಬೀರ್ ಖೂಬ್‌ಚಾಂದನಿ (ಮಹಾರಾಷ್ಟ್ರ)–2, ಅಜೀತ್ ಯಾದವ್ (ಉತ್ತರಪ್ರದೇಶ)–3.

200 ಮೀ. ವೈಯಕ್ತಿಕ ಮೆಡ್ಲೆ: ಬಾಲಕಿಯರ ಗುಂಪು 1: ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–1, ಕಾಲ: 2:26.57, ದಿಶಾ ಭಂಡಾರಿ (ಉತ್ತರ ಪ್ರದೇಶ)–2, ಎ.ಜೆದಿದಾ (ಕರ್ನಾಟಕ)–3. ಗುಂಪು 5: ಆ್ಯಡ್ರಿಜಾ ಚೆಟಿಯಾ (ಅಸ್ಸಾಂ)–1, ಕಾಲ: 3:05.04, ಧೃತಿ ಕರಿಬಸವೇಶ್ವರ (ಕರ್ನಾಟಕ)–2, ಲಾಸ್ಯ ಶ್ರೀ ಕೆ. (ಆಂಧ್ರಪ್ರದೇಶ)–3.



ಸಿಮೋನ್ ಬೈಲ್ಸ್

ವಿಶ್ವ ಜಿಮ್ನಾಸ್ಟಿಕ್ಸ್: ಬೈಲ್ಸ್ ಗೈರು

ಕಿಟಾಕಿಯುಷು, ಜಪಾನ್ (ಎಎಫ್‌ಪಿ): ಅಮೆರಿಕದ ಜಿಮ್ನಾಸ್ಟಿಕ್ಸ್ ತಾರೆ ಸಿಮೋನ್ ಬೈಲ್ಸ್ ಇದೇ ವಾರ ಇಲ್ಲಿ ನಡೆಯಲಿರುವ ವಿಶ್ವ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುತ್ತಿಲ್ಲ. ಅದರಿಂದಾಗಿ ಉದಯೋನ್ಮುಖ ಜಿಮ್ನಾಸ್ಟ್‌ಗಳಿಗೆ ಮಿಂಚುವ ಅವಕಾಶ ಸಿಗಲಿದೆ.

ಸದ್ಯ ಬೈಲ್ಸ್ ಅವರು 'ಗೋಲ್ಡ್ ಅಕ್ರಾಸ್ ಅಮೆರಿಕಾ' ರಾಜಲ್–ಡಾಜಲ್ ಜಿಮ್ನಾಸ್ಟಿಕ್ಸ್ ಸ್ಟೇಜ್ ಷೋಗಳಲ್ಲಿ ನಿರತರಾಗಿದ್ದಾರೆ.

ಒಲಿಂಪಿಕ್ ಆಲ್‌ರೌಂಡ್ ಚಾಂಪಿಯನ್ ಸುನಿಸಾ ಲೀ 'ಡಾನ್ಸಿಂಗ್ ವಿಥ್ ದ ಸ್ಟಾರ್ಸ್' ಟಿವಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಆದ್ದರಿಂದ ಅವರೂ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವುದಿಲ್ಲ.

ಆದರೆ ಈ ಖ್ಯಾತನಾಮರ ಗೈರುಹಾಜರಿಯಿಂದಾಗಿ ಯುವಪ್ರತಿಭೆಗಳಿಗೆ ಅವಕಾಶ ಲಭಿಸಿದೆ. 18 ವರ್ಷದ ಲಿನ್ ವಾಂಗ್, ಅರ್ಹತಾ ಸುತ್ತಿನಲ್ಲಿ ಎರಡನೇ ಸ್ಥಾನ ಪಡೆದಿದ್ದಾರೆ. 17 ವರ್ಷದ ಕೈಲಾ ಡಿಸೆಲೊ ಮೂರನೇ ಸ್ಥಾನ ಪಡೆದರು.

ಬೈಲ್ಸ್ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ 19 ಚಿನ್ನದ ಪದಕಗಳನ್ನು ಗೆದ್ದಿರುವ ದಾಖಲೆ ಹೊಂದಿದ್ದಾರೆ. ಅವರು ಅಗ್ರಶ್ರೇಯಾಂಕದಲ್ಲಿದ್ದಾರೆ. ಆದರೆ ಈ ಬಾರಿ ಹಿಂದೆ ಸರಿದಿರುವುದರಿಂದ ಅಗ್ರಸ್ಥಾನ ಕಳೆದುಕೊಳ್ಳುವ ಸಾಧ್ಯತೆ ಇದೆ.

'ಭಾರತ–ಪಾಕ್ ಕ್ರಿಕೆಟ್ ಪಂದ್ಯ ನಡೆಯಲಿ'

ಮುಂಬೈ (ಪಿಟಿಐ): ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವಣ ಪಂದ್ಯವು ನಡೆಯಬೇಕುಎಂದು ದಿಗ್ಗಜ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅಭಿಪ್ರಾಯಪಟ್ಟಿದ್ದಾರೆ.

ಇದೇ 24ರಂದು ಭಾರತ ಮತ್ತು ಪಾಕ್ ತಂಡಗಳು ವಿಶ್ವಕಪ್ ಟೂರ್ನಿಯಲ್ಲಿ ಮುಖಾಮುಖಿಯಾಗಲಿವೆ. ಆದರೆ ಈಚೆಗೆ ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದನೆ ದಾಳಿ ನಡೆದಿದ್ದು, ಪಾಕ್ ಪ್ರಚೋದನೆ ಇದರ ಹಿಂದಿದೆ.



ಪ್ರಕಾಶ್ ಪಡುಕೋಣೆ

ಆದ್ದರಿಂದ ಕ್ರಿಕೆಟ್ ಪಂದ್ಯ ನಡೆಸಬಾರದು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ನಡೆಯುತ್ತಿದೆ.

ಮಂಗಳವಾರ ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್ ಆಫ್ ಇಂಡಿಯಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಕಾಶ್ ಅವರು 'ರಾಜಕೀಯ ಮತ್ತು ಕ್ರೀಡೆಯನ್ನು ಬೆರೆಸಬಾರದು. ಪಂದ್ಯವು ತನ್ನ ಪಾಡಿಗೆ ನಡೆಯಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯವಷ್ಟೇ' ಎಂದು ಹೇಳಿದ್ದಾರೆ.

ಗರಿಗೆದರಿದ ಈಜು: ಮನೆಮಾಡಿದ ಸಂತಸ

• ಬಸವರಾಜ ದಳವಾಯಿ

ಬೆಂಗಳೂರು: ಕೊರೊನಾ ಹಾವಳಿಯಿಂದಾಗಿ ಸುಮಾರು ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ರಾಷ್ಟ್ರೀಯ ಈಜು ಸ್ಪರ್ಧೆಗಳು ಮಂಗಳವಾರ ಉದ್ಯಾನನಗರಿಯಲ್ಲಿ ಆರಂಭವಾಗುವ ಮೂಲಕ ಚುರುಕು ಪಡೆದವು.

ಕೋವಿಡ್ ಪ್ರಸರಣ ತಡೆಗೆ ದೇಶದೆಲ್ಲೆಡೆ ಈಜುಕೊಳಗಳನ್ನು ಮುಚ್ಚಲಾಗಿತ್ತು. ನೀರಿನ ಮೂಲಕವೂ ಸೋಂಕು ಹೆಚ್ಚಾಗಿ ಹರಡುವುದರಿಂದ ಸ್ಪರ್ಧೆಗಳಿಂದ ಈಜುಪಟುಗಳು ವಂಚಿತರಾಗಿದ್ದರು. ಅವರ ತರಬೇತಿಯೂ ನಿಂತುಹೋಗಿತ್ತು. ಕೋವಿಡ್ ಪಿಡುಗಿನ ಕಾರಣದಿಂದಲೇ 2020ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಅನ್ನು ರದ್ದುಗೊಳಿಸಲಾಗಿತ್ತು.

ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ಕಡೆಗಳಲ್ಲಿ ಈಗ ಸ್ಪರ್ಧಾತ್ಮಕ ಈಜಿಗೆ ಅವಕಾಶ ಮಾಡಿಕೊಡಲಾಗಿದೆ. ಇದರಿಂದ ಈ ಕ್ರೀಡೆಗೆ ಸಂಬಂಧಿಸಿದ ಎಲ್ಲರಲ್ಲಿ ಸಂತಸ ಮನೆ ಮಾಡಿದ್ದು, ಅದಕ್ಕೆ ಬೆಂಗಳೂರು ಸಾಕ್ಷಿಯಾಗಿದೆ.



ಧಿನಿಧಿ ದೇಶಿಂಗು– ಪ್ರಜಾವಾಣಿ ಸಂಗ್ರಹ ಚಿತ್ರ

ಇತ್ತೀಚೆಗೆ ಕರ್ನಾಟಕ ರಾಜ್ಯ ಚಾಂಪಿಯನ್‌ಷಿಪ್‌ಗಳಿಗೂ ಬೆಂಗಳೂರು ಆತಿಥ್ಯ ವಹಿಸಿತ್ತು.

> **ಕರ್ನಾಟಕದಲ್ಲಿ ಐದು ವರ್ಷಗಳ ಬಳಿಕ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಯುತ್ತಿದೆ. ಕೋವಿಡ್ ಮಾರ್ಗಸೂಚಿಗಳನ್ನು ಸೂಕ್ತವಾಗಿ ಅನುಸರಿಸಲಾಗುತ್ತಿದೆ.**
> **ಎಂ.ಸತೀಶ್ ಕುಮಾರ್,** ಕರ್ನಾಟಕ ಈಜು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ

'ಎರಡು ವರ್ಷಗಳ ಬಳಿಕ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜನೆಯಾಗಿರುವುದು ಅತ್ಯಂತ ಖುಷಿಯ ಸಂಗತಿ. ಇಲ್ಲಿ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ನಮ್ಮ ಹುಡುಗರಿಗೆ ಉತ್ತಮ ತರಬೇತಿಯನ್ನು ಕೊಟ್ಟು ಕರೆದುಕೊಂಡು ಬಂದಿದ್ದೇವೆ. ಕೋವಿಡ್ ಕಾರಣದಿಂದ ತರಬೇತಿ, ಸ್ಪರ್ಧೆಗಳು ನಿಂತುಹೋಗಿದ್ದು ಬೇಸರ ತರಿಸಿತ್ತು' ಎಂದು ಬೆಂಗಳೂರಿನ ಡಾಲ್ಫಿನ್ ಈಜು ಕೇಂದ್ರದ ತರಬೇತುದಾರ ಮಧು ಕುಮಾರ್ ಹೇಳುತ್ತಾರೆ.

'ಮಹಾರಾಷ್ಟ್ರದಲ್ಲಿ ಇತ್ತೀಚೆಗಷ್ಟೇ ಈಜು ಕೊಳಗಳನ್ನು ತೆರೆಯಲಾಗಿದೆ. ಬಹಳ ದಿನಗಳಿಂದ ನಮ್ಮ ಈಜುಪಟುಗಳಿಗೆ ತರಬೇತಿ ಇರಲಿಲ್ಲ. ಕರ್ನಾಟಕ ಈಜು ಸಂಸ್ಥೆಯವರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಅನ್ನು ತುಂಬ ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಸವಲತ್ತುಗಳನ್ನೂ ನೀಡುತ್ತಿದ್ದಾರೆ' ಎಂದು ಮಹಾರಾಷ್ಟ್ರದ ಈಜು ಕೋಚ್ ಅಮೋಲ್ ಸಂತಸ ಹಂಚಿಕೊಂಡರು.

'ಕೋವಿಡ್ ಲಾಕ್‌ಡೌನ್‌ನಲ್ಲಿ ಮನೆಯಲ್ಲೇ ಇದ್ದು ತುಂಬಾ ಬೇಸರವಾಗಿತ್ತು. ಸ್ಪರ್ಧೆಗಳು ಪ್ರಾರಂಭವಾಗಿದ್ದು ಸಂತಸ ತಂದಿದೆ. ಮೊದಲ ದಿನ ನನಗೆ ಪೂರ್ಣಪ್ರಮಾಣದ ಸಾಮರ್ಥ್ಯ ತೋರಲಾಗಲಿಲ್ಲ. ಆದರೂ ಖುಷಿಯಿದೆ' ಎಂದು ಕರ್ನಾಟಕದ ಈಜುಪಟು ಧಿನಿಧಿ ದೇಶಿಂಗು ನುಡಿದರು.